(ಅಧ್ಯಕ್ಷ ಪೀಠದಲ್ಲಿದ್ದ ಹಂಗಾಮಿ ಅಧ್ಯಕ್ಷರಾಗಿದ್ದ ಶ್ರೀ ಧರ್ಮಸಿಂಗ್‌ರವರು ಅಧ್ಯಕ್ಷ ಪೀಠದಿಂದ ಎದ್ದು ಮಾನ್ಯ ರಮೇಶ್ ಕುಮಾರ್‌ರವರನ್ನು ಸ್ವಾಗತಿಸಿ ಅಧ್ಯಕ್ಷ ಸ್ಥಾನದಲ್ಲಿ ಕುಳ್ಳಿರಿಸಿದರು.

ಸನ್ಮಾನ್ಯ ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ ಬಗ್ಗೆ ಸಭೆಯು ಹರ್ಷ ವ್ಯಕ್ತಪಡಿಸಿತು.)

† ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಯವರು):- ಸನ್ಮಾನ್ಯ ಅಧ್ಯಕ್ಷರೇ, ಈ ದಿನ ತಾವು ಈ ಸದನದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿರತಕ್ಕಂಥಾದ್ದು ನಮ್ಮೆಲ್ಲರಿಗೆ ಹೆಮ್ಮೆ ತಂದಿರತಕ್ಕಂಥ ವಿಚಾರವಾಗಿದೆ. ಈ ಸಂದರ್ಭದಲ್ಲಿ ವೈಯಕ್ತಿಕವಾಗಿ ನನ್ನ ಪರವಾಗಿ ಹಾಗೂ ಸದನದ ಪರವಾಗಿ ತಮಗೆ ಹಾರ್ದಿಕವಾದ ಅಭಿನಂದನೆಗಳನ್ನು ಸಲ್ಲಿಸುವಂದಕ್ಕೆ ಇಚ್ಛೆಪಡುತ್ತೇನೆ. ತಾವು ಸರ್ವಾನುಮತದಿಂದ ಆಯ್ಕೆಯಾಗುವುದಕ್ಕೆ ಸಹಕಾರ ಕೊಟ್ಟಂಥ ಸದನದ ಎಲ್ಲಾ ಸದಸ್ಯರಿಗೂ ನಾನು ಅಭಾರಿಯಾಗಿದ್ದೇನೆ. ಅಷ್ಟೇ ಅಲ್ಲದೆ ವಿರೋಧಿ ಪಕ್ಷದ ಎಲ್ಲಾ ಸದಸ್ಯರುಗಳು ಹಾಗೂ ಮುಖಂಡರುಗಳು ತಾವು ಸರ್ವಾನುಮತದಿಂದ ಆಯ್ಕೆಯಾಗುವುದಕ್ಕೆ ಸಹಕಾರ ಕೊಟ್ಟು ಒಂದು ಸತ್ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದ್ದಾರೆ ಮತ್ತು ಈ ಆಯ್ಕೆಯು ಸರ್ವಾನುಮತದಿಂದ ಆಗುವುದಕ್ಕೆ ಸಹಕಾರ ನೀಡಿದ್ದಾರೆ. ಅವರೆಲ್ಲರಿಗೂ ನಾನು ಋಣಿಯಾಗಿದ್ದೇನೆ. ಇವೊತ್ತು ತಾವು ವಹಿಸಿಕೊಂಡಿರತಕ್ಕಂಥ ಸ್ಥಾನವು ಅತ್ಯಂತ ಎತ್ತರವಾದುದು ಮತ್ತು ಮಹತ್ತರವಾದ ಸ್ಥಾನವಾಗಿದೆ. ಈ ಸ್ಥಾನದಲ್ಲಿ ಅಸೀನರಾಗಿ ಈ ಸದನದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗತಕ್ಕಂಥ ಕಾಲದಲ್ಲಿ ಇಡೀ ರಾಜ್ಯದ ಐದು ಕೋಟಿ ಜನತೆಯು ಈ ಸದನದ ಕಾರ್ಯಕಲಾಪಗಳನ್ನು ಈ ಸದನಕ್ಕೆ ಬಂದು ಸ್ವತಃ ನೋಡುವುದಕ್ಕೆ ಸಾಧ್ಯವಾಗದೇ ಇದ್ದರೂ ಕೂಡ ಕಾರ್ಯಕಲಾಪಗಳನ್ನು ಹೊರಗಿನಿಂದ ವೀಕ್ಷಿಸುತ್ತಾ ಇರತಕ್ಕಂಥಾದ್ದನ್ನು ನಾವೆಲ್ಲರೂ ಅರಿತುಕೊಂಡಿದ್ದೇವೆ. ಈ ಸದನದ ಗೌರವವನ್ನು, ಘನತೆಯನ್ನು ಎತ್ತಿ ಹಿಡಿಯತಕ್ಕಂಥ ಒಂದು ಸನ್ನಿವೇಶದಲ್ಲಿ ಇಡೀ ಸದನದ ಎಲ್ಲಾ ಭಾಗದ ಗೌರವಾನ್ವಿತ ಸದಸ್ಯರುಗಳು ತಮಗೆ ಸಹಕಾರವನ್ನು ಕೊಡಬೇಕಾಗುತ್ತದೆ. ತಾವು ಅತ್ಯಂತ ವಿಶೇಷವಾದಂಥ ಸನ್ನಿವೇಶದಲ್ಲಿ ಈ ಉನ್ನತ ಸ್ಥಾನವನ್ನು ಅಲಂಕರಿಸಿದ್ದೀರಿ. ಬಹುಶಃ ನನ್ನ ದೀರ್ಘವಾದ ಅನುಭವದಲ್ಲಿ ಅಂದರೆ ಸುಮಾರು 28 ವರ್ಷಗಳ ಕಾಲ ಈ ಸದನದಲ್ಲಿ ನಾನು ಕಾರ್ಯನಿರ್ವಹಣೆ ಮಾಡಿದ್ದೇನೆ, ಆ ಒಂದು ಅನುಭವದ ಹಿನ್ನಲೆಯಲ್ಲಿ ಹೇಳುವುದಾದರೆ ಈ ಸಾರಿ ಈ ಸದನದ ಒಂದು ರಾಜಕೀಯ ಸನ್ನಿವೇಶ ಏನಿದೆ, ಅದರಿಂದ ಈ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಾವು ಈ ಸದನವನ್ನು ನಡೆಸಿಕೊಂಡು ಹೋಗತಕ್ಕಂಥಾದ್ದರಲ್ಲಿ ತಮಗಿರತಕ್ಕಂಥ ಅನುಭವ ಮತ್ತು ಸಭೆಯ ನಡವಳಿಕೆಗಳನ್ನು ನಡೆಸಲು ಇರತಕ್ಕಂಥ ಒಂದು ಪರಿಚಯದ ಕಾರಣದಿಂದಾಗಿ ಸದನದ ಕಾರ್ಯಕಲಾಪಗಳನ್ನು ನಡೆಸಲು ತಮಗೆ ಆಗುತ್ತದೆ ಎಂಬ ವಿಚಾರವನ್ನು ಆತ್ಮವಿಶ್ವಾಸಪೂರ್ವಕವಾಗಿ ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ನಾನು ಹಿಂದಿನ ಘಟನೆಗಳನ್ನು ಹೇಳಲು ಹೋಗುವುದಿಲ್ಲ. ಶ್ರೀಮಾನ್ ವೈಕುಂಠಬಾಳಿಗಾರವರು ಅಧ್ಯಕ್ಷರಾಗಿರತಕ್ಕಂಥ ಕಾಲದಲ್ಲಿ ನಾವೆಲ್ಲರೂ ಸದಸ್ಯರಾಗಿ ಕೆಲಸ ಮಾಡತಕ್ಕಂಥ ಸೌಭಾಗ್ಯ ಸಿಕ್ಕಿತ್ತು. ಅಲ್ಲಿಂದ ಈಚೆಗೆ ಆ ಸ್ಥಾನವನ್ನು ಬಹಳ ಜನರು ಅಲಂಕರಿಸಿ ಹೋಗಿದ್ದಾರೆ. ಅನೇಕ ಘಟನೆಗಳನ್ನು ನಾವು ಈ ಸದನದಲ್ಲಿ ವೀಕ್ಷಿಸಿದ್ದೇವೆ. ಆದರೆ ಒಂದು ಮಾತನ್ನು ನಾನು ದುಃಖದಿಂದ ಹೇಳಬೇಕಾಗುತ್ತದೆ. ಇಡೀ ರಾಷ್ಟ್ರದ ರಾಜಕಾರಣದಲ್ಲಿ ಈ ಒಂದು ಸಂಸ್ಥೆಗಳಿಗೆ, ಅದು ವಿಧಾನ ಸಭೆಯೇ ಇರಲಿ, ವಿಧಾನಪರಿಷತ್ತೇ ಇರಲಿ, ಲೋಕಸಭೆಯೇ ಇರಲಿ, ಯಾವ ಒಂದು ಮಹತ್ವವನ್ನು ಘನತೆ ಗೌರವವನ್ನು ಕೊಟ್ಟಿದ್ದಾರೋ ಮತ್ತು ನಮ್ಮ ಸಂವಿಧಾನವನ್ನು ಬರೆದಿರತಕ್ಕಂಥ ಹಿರಿಯರು ಆ ಒಂದು ಘನತೆ ಗೌರವವನ್ನು ಉಳಿಸಿಕೊಂಡು ಹೋಗತಕ್ಕಂಥಾದ್ದರಲ್ಲಿ ಸ್ವಲ್ಪ ಮಟ್ಟಿಗೆ ಇಡೀ ದೇಶದಲ್ಲಿನ ಕಲುಷಿತ ರಾಜಕೀಯ ವಾತಾವರಣದಲ್ಲಿ ಇಳಿಮುಖವಾಗುತ್ತಾ ಇದೆ. ಆದರೆ ಸುದೈವದಿಂದ ಎಂಥ ಐತಿಹ್ಯ ಘಟನೆಗಳು ಕರ್ನಾಟಕದಲ್ಲಿ ಬಂದರೂ ಕೂಡ ಈ ನಮ್ಮ ರಾಜ್ಯದ

ಪೂರ್ವ ಇತಿಹಾಸ, ಈ ಸದನ ಅಷ್ಟೇ ಅಲ್ಲ, ಈ ಸದನವು ರೂಪಿತಗೊಳ್ಳುವುದಕ್ಕಿಂತ ಮುಂಚೆ ಪ್ರಜಾಪ್ರತಿನಿಧಿಗಳ ಸಭೆ ಏನಿತ್ತು ಅಂದಿನಿಂದಲೂ ಒಂದು ವಿಶೇಷವಾದಂಥ ವಾತಾವರಣವನ್ನು ಇಡೀ ರಾಷ್ಟ್ರದ ಮತ್ಯಾವುದೇ ವಿಧಾನ ಸಭೆಗಳಿಗೆ ಹೋಲಿಸಿದಾಗ ಶ್ರೇಷ್ಠತೆಯನ್ನು ಉಳಿಸಿಕೊಂಡು ಬರಲು ಎಲ್ಲರೂ ಪ್ರಯತ್ನ ಮಾಡಿದ್ದಾರೆ.

ಆ ಪರಂಪರೆಯನ್ನು ಉಳಿಸಿಕೊಂಡು ಬರಲಿಕ್ಕೆ ನಾವು ಒಂದುಗೂಡಿ ಕೆಲಸ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಒಂದೆರಡು ಮಾತುಗಳನ್ನು ತಮ್ಮ ಬಗ್ಗೆ ಆಡಿದರೆ ಅದು ಉತ್ಪ್ರೇಕ್ಷೆಯಾಗಲಾರದು. ತಾವು ಕಾನೂನುಪಂಡಿತರಲ್ಲದೇ ಇದ್ದರೂ ಸದನದ ಕಾರ್ಯಕಲಾಪಗಳ ಬಗ್ಗೆ ತಮ್ಮದೇ ಆದ ಆಳವಾದ ಅನುಭವ, ಪರಿಶ್ರಮ ಇದೆ. ಅದರಿಂದ ಇಂತಹ ಒಂದು ವಿಶೇಷ ಸನ್ನಿವೇಶದಲ್ಲಿ ಈ ಸಭೆಯ ಕಾರ್ಯಕಲಾಪ ನಡೆಸುವಂತಹ ಕಾಲದಲ್ಲಿ ಎಲ್ಲಾ ವರ್ಗದ ಹಿತವನ್ನು ಕಾಪಾಡಲಿಕ್ಕೆ ಈ ಸದನ ಇಡೀ ರಾಜ್ಯದ 5 ಕೋಟಿ ಜನತೆಯ ಭಾವನೆಯನ್ನು ಪ್ರತಿನಿಧಿಸುವುದು. ಆ ಆಶೋತ್ತರಗಳನ್ನು ಈಡೇರಿಸುವ ಕಾಲದಲ್ಲಿ ಸಭೆ ತೆಗೆದುಕೊಳ್ಳುವ ನಿರ್ಣಯದಲ್ಲಿ ಏನಾದರೂ ಆಡಳಿತ ಪಕ್ಷ ಎಡವಿದರೂ ಕೂಡ ಅದನ್ನು ತಿದ್ದುವ ಅಥವಾ ಮಾರ್ಗದರ್ಶನ ಮಾಡುವಂತಹ ಅಧಿಕಾರ ತಮಗಿದೆ. ಆದಕ್ಕೆ ತಲೆಬಾಗಿ ನಡೆದುಕೊಳ್ಳಲು ನಾವು ಸಿದ್ಧರಿದ್ದೇವೆ. ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತವೆ. ಗ್ರಾಮೀಣ ಜನತೆಯ ಸಮಸ್ಯೆಗಳಿಗೆ ಸ್ಪಂದಿಸಿ, ತಮ್ಮ ರಾಜಕೀಯ ಜೀವನ ನಡೆಸಿಕೊಂಡು ಬಂದಿರುವಂತಹ ಒಂದು ಹಿನ್ನೆಲೆ ತಮಗಿದೆ. ಹಳ್ಳಿಗರ ಬಗ್ಗೆ ಜನಸಾಮಾನ್ಯರ ಬಗ್ಗೆ ಅದರಲ್ಲೂ ಗ್ರಾಮೀಣಜನತೆಯ ನೋವುನಲಿವುಗಳಿಗೆ ಸ್ಪಂದಿಸಿ ತಾವು ತಮ್ಮ ರಾಜಕೀಯ ಜೀವನದ ಉದ್ದಕ್ಕೂ ಹೋರಾಟ ಮಾಡಿ ಇವತ್ತು ಈ ಎತ್ತರದ ಸ್ಥಾನವನ್ನು ಅಲಂಕರಿಸಿದ್ದೀರಿ ಈ ಸಭೆ ಬಹುಶಃ ನಾನು ಇದರಲ್ಲಿ ರಾಜಕೀಯ ಬೆರಸಲಿಕ್ಕೆ ಹೋಗದೆ, ಒಂದು ಮಾತು ಹೇಳುತ್ತೇನೆ, ಉಭಯ ಕಡೆ ನಾವೆಲ್ಲರೂ ಕುಳಿತು ಕೆಲಸ ಮಾಡುವಾಗ ಅದರಲ್ಲೂ ಕನಿಷ್ಠ ಪ್ರಮಾಣದ ನಾಗರೀಕ ಸೌಲಭ್ಯ ಸಿಗದೇ ಇರುವಂತಹ ವರ್ಗ ಯಾವುದಿದೆ, ಕಳೆದ 47 ವರ್ಷದ ರಾಜಕೀಯ ಬೆಳವಣಿಗೆಯಲ್ಲಿ ವಂಚಿತರಾದರು ಯಾರಿದ್ದಾರೋ ಅವರ ಶ್ರೇಯಸ್ಸಿಗೆ ನಾವೆಲ್ಲ ಒಂದು ಗೂಡಿ ಕೆಲಸ ಮಾಡುವಾಗ ನಾನು ಆತ್ಮವಿಶ್ವಾಸದಿಂದ ಈ ಮಾತು ಹೇಳಲಿಕ್ಕೆ ಇಷ್ಟಪಡುತ್ತೇನೆ. ಸಭೆಯಲ್ಲಿ ನಿಮಗೆ ಸಹಕಾರ ಕೊಡಲಿಕ್ಕೆ ಸಿದ್ಧವಿದ್ದೇವೆ ಎಂದು ಹೇಳಿ ನಿಮ್ಮ ಅಧ್ಯಕ್ಷತೆಯಲ್ಲಿ ಸದನದ ಕಾರ್ಯಕಲಾಪ ಇಡೀ ರಾಷ್ಟ್ರಕ್ಕೆ ಮಾದರಿಯಾಗಿ ನಡೆಯುವ ಒಂದು ಆಶಯವನ್ನು ಹೊಂದಿದ್ದೇನೆ. ಈ ಸಂದರ್ಭದಲ್ಲಿ ಮತ್ತೊಂದು ಮಾತು ಹೇಳಲು ಇಚ್ಛೆಪಡುತ್ತೇನೆ. ಅನೇಕ ನಮ್ಮ ಹಳೆಯ ಸಹೋದ್ಯೋಗಿಗಳು ಗೌರವಾನ್ವಿತ ಸ್ನೇಹಿತ ಸದಸ್ಯರು ಈ ಸಭೆಯಲ್ಲಿದ್ದಾರೆ. ನಾನು ನೀರಾವರಿ ಮಂತ್ರಿಯಾಗಿ ಆ ಸ್ಥಾನದಲ್ಲಿ ಕುಳಿತು ಕೆಲಸ ಮಾಡುವಾಗ ಒಂದು ಮಾತು ಹೇಳಿದ್ದೆ.

ಮೊದಲನೆಯ ದಿನ ನಾನು ಹೇಳಿದ ಮಾತನ್ನು ಪುನರುಚ್ಚಾರ ಮಾಡುತ್ತೇನೆ. ಸರ್ಕಾರ ತೆಗೆದುಕೊಳ್ಳುವ ಯಾವುದೇ ನಿರ್ಣಯ ಇರಬಹುದು, ಕಾನೂನು ಚೌಕಟ್ಟಿನಲ್ಲಿ ಈ ಮಾತು ಹೇಳಲು ಸಿದ್ಧನಿಲ್ಲ, ಈ ಸರ್ಕಾರ ತೆಗೆದುಕೊಳ್ಳುವ ಯಾವುದೇ ನಿರ್ಣಯ ಈ ಸದನ ಅದನ್ನು ಪರಿಶೀಲನೆ ಮಾಡಬೇಕೆಂದು ಒತ್ತಾಯ ಮಾಡಿದರೆ ಅದಕ್ಕೆ ನೀವು ಸೂಚನೆ ಕೊಡುವುದಾದರೆ ಆ ಸೂಚನೆಗೆ ನಾವು ತಲೆಬಾಗಲು ಸಿದ್ಧವಾಗಿದ್ದೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಯಾವುದೇ ರೀತಿಯ ಸರ್ಕಾರದ ನಿರ್ಣಯವನ್ನು ಸಭೆಗೆ ಮುಚ್ಚಿಡಲು ನಾವು ಪ್ರಯತ್ನ ಮಾಡುವುದಿಲ್ಲ.

ನಾಡಿನ 5 ಕೋಟಿ ಜನತೆಯನ್ನು ಪ್ರತಿನಿಧಿಸತಕ್ಕಂತಹ ಘನವಾದ ಈ ಸಭೆ ಏನು ಇದೆ, ಈ ಸಭೆಯ ಕಾರ್ಯಕಲಾಪ ಇಡೀ ರಾಷ್ಟ್ರಕ್ಕೆ ಮಾದರಿಯಾಗಿ ನಡೆಯಲಿ ಎಂದು ನಾನು ಆಶಿಸುತ್ತೇನೆ. ಈ ಸಂದರ್ಭದಲ್ಲಿ ಎಲ್ಲಾ ಸದಸ್ಯರೂ ಅದರಲ್ಲೂ ಹಿರಿಯ ಮುಖಂಡರುಗಳಾದ ಮುಂದಿನ ಸಾಲಿನಲ್ಲಿ

ಏನು ಕುಳಿತಿದ್ದಾರೆ ಅವರೆಲ್ಲರೂ ಒಟ್ಟುಗೂಡಿ ತಮ್ಮನ್ನು ಅವಿರೋಧವಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಿಕ್ಕೆ ಏನು ನೆರವು ಕೊಟ್ಟಿದ್ದಾರೆ ಅವರೆಲ್ಲರಿಗೂ ಮತ್ತೊಮ್ಮೆ ನಾನು ವಂದಿಸುತ್ತೇನೆ. ಆಳುವ ಪಕ್ಷ ತಮಗೆ ಸರ್ವ ರೀತಿಯಲ್ಲಿ ಸಹಕಾರ ಕೊಡಲಿಕ್ಕೆ ಸಿದ್ಧವಿದೆ ಎಂದು ಹೇಳಬಯಸುತ್ತೇನೆ. ತಮ್ಮ ಅವಧಿಯಲ್ಲಿ ಸಭೆಯ ಕಾರ್ಯಕಲಾಪ ಸುಗಮವಾಗಿ ನಡೆಯಲಿ ಈ ಸ್ಥಾನದಲ್ಲಿ ಎಲ್ಲಾ ರೀತಿಯ ಯಶಸ್ಸು ಸಿಗಲಿ ಈ ಸದನದಲ್ಲಿ ತಮ್ಮ ಕೀರ್ತಿಯನ್ನು ಹೆಚ್ಚು ಮಾಡುವುದರಲ್ಲಿ ನಮ್ಮ ಸಹಕಾರ ಸಂಪೂರ್ಣವಾಗಿ ಇದೆ. ಆ ದಿಕ್ಕಿನಲ್ಲಿ ತಮಗೆ ಯಶಸ್ಸು ಕಾಣಲಿ ಎಂದು ಹಾರೈಸಿ ಮತ್ತೊಮ್ಮೆ ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಸದನದ ಪರವಾಗಿ ನನ್ನ ಪರವಾಗಿ ನಮಸ್ಕಾರ.

† ಶ್ರೀ ಜೆ.ಎಚ್. ಪಟೇಲ್ (ಉಪ ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾ ನಾಯಕರು ವ್ಯಕ್ತಪಡಿಸಿರುವ ಎಲ್ಲಾ ಭಾವನೆಗಳನ್ನು ಸಮರ್ಥಿಸುತ್ತಾ ಇಂದಿನ ಸಮಾಜದಲ್ಲಿ ಉದ್ಭವಿಸಬಹುದಾದಂತಹ ಎಲ್ಲಾ ಸಮಸ್ಯೆಗಳ ಒಂದು ಪ್ರತಿಬಿಂಬ ಈ ಸದನದಲ್ಲಿ ಕಾಣುತ್ತದೆ. ಅಷ್ಟೇ ಅಲ್ಲದೆ ಸಮಾಜದಲ್ಲಿ ಶಾಂತಿಯಿಲ್ಲದೇ ಇದ್ದಾಗ ಸದನದಲ್ಲಿ ಶಾಂತಿಯಿರುವುದು ಕಷ್ಟವಾಗುತ್ತದೆ. ಇದನ್ನು ತಾವು ಬಲ್ಲಿರಿ. ಇವತ್ತು ನಾನು ದೇಶದ ಸಮಗ್ರ ಸ್ಥಿತಿ ಬಗ್ಗೆ ಏನೂ ಹೇಳುವುದಿಲ್ಲ. ಕರ್ನಾಟಕದ ಬಗ್ಗೆ ಹೇಳುವುದಾದರೆ ನಾವು ಜನರ ನಿರೀಕ್ಷೆಗೆ ತಕ್ಕಂತೆ ಸಮಸ್ಯೆಗಳ ಕಡೆಗೆ ತೀವ್ರವಾದ ಗಮನ ಕೊಡಬೇಕಾದಾಗ ನಾವು ಅಷ್ಟು ತೀವ್ರವಾದ ಗಮನ ಕೊಡಲಾಗಿಲ್ಲ. ನಾವು ಈ ಕಡೆಯಾಗಲೀ ಇಲ್ಲವೆ ವಿರೋಧಪಕ್ಷದ ಆ ಕಡೆಯಾಗಲೀ ಸಮಸ್ಯೆಯ ಗಂಭೀರತೆಯನ್ನು ಅರಿತು ಅದಕ್ಕೆ ಹೆಚ್ಚು ಗಮನ ಕೊಟ್ಟಾಗ ಮತ್ತು ಅದನ್ನು ಅರ್ಥ ಮಾಡಿಕೊಂಡು ಬಗೆಹರಿಸುವುದಕ್ಕೆ ಪ್ರಯತ್ನ ಪಡಬೇಕೇ ವಿನಃ ಭಾವನೆಗಳಿಂದ ಅಲ್ಲ. ಸ್ವಾಭಾವಿಕವಾಗಿ ಎಲ್ಲಾ ಮನುಷ್ಯನಿಗೆ ಭಾವನೆಗಳು ಇದ್ದೇ ಇರುತ್ತವೆ. ಆವೇಶಕ್ಕೆ ಅವಕಾಶ ಕೊಡದೆ ತಾವು ಸೂಕ್ತವಾದ ಎಲ್ಲಾ ಮಾರ್ಗದರ್ಶನ ಮಾಡಬೇಕು ಮತ್ತು ಸದನದ ಗೌರವವನ್ನು ರಾಜ್ಯಾಂಗ ಸಂಸ್ಥೆಯಾಗಿರತಕ್ಕಂಥಹ ಈ ಸಭೆಯ ಮರ್ಯಾದೆಯನ್ನು ಕಾಪಾಡಬೇಕಾಗುತ್ತದೆ. ಲೋಕಸಭೆಯೇ ಇರಲಿ ವಿಧಾನ ಸಭೆ, ವಿಧಾನ ಪರಿಷತ್ತುಗಳೇ ಇರಲಿ, ಜನರ ನಿರೀಕ್ಷೆಯಲ್ಲಿ ಗೌರವವನ್ನು ಕಳೆದುಕೊಂಡಿವೆ. ಇದು ಜನರ ನಿರೀಕ್ಷೆಯಲ್ಲಿ. ಅದನ್ನು ಮತ್ತೊಮ್ಮೆ ತಂದುಕೊಡಬೇಕಾಗುತ್ತದೆ. ಮಾನ್ಯ ಮಾವಳಂಕರ್ ಕಾಲದಲ್ಲಿ ಇದ್ದಂತಹ ಲೋಕಸಭೆ ಈಗ ಇಲ್ಲ. ಸಂಜೀವರೆಡ್ಡಿಯವರು ಲೋಕಸಭಾಧ್ಯಕ್ಷರಾಗಿದ್ದಾಗ ಅವರ ಆ ಪದವಿ ಅವಧಿ ಮುಗಿದ ಮೇಲೆ ನಾನು ಮತ್ತು ನನ್ನ ಸ್ನೇಹಿತರೊಬ್ಬರು ಅವರನ್ನು ಭೇಟಿಯಾಗಿ ತಾವು ಯಶಸ್ವಿಯಾಗಿ ಅಧ್ಯಕ್ಷ ಸ್ಥಾನವನ್ನು ನಡೆಸಿದಿರಿ ಆ ಯಶಸ್ವಿ ಅಧ್ಯಕ್ಷ ಸ್ಥಾನವನ್ನು ನಡೆಸಿದುದರ ರಹಸ್ಯ ಏನು ಎಂದು ಕೇಳಿದರೆ 'I never read rules.' ಎಂದು ಅವರು ಹೇಳಿದರು. ಹಾಗಾದರೆ ಏನು ಓದಿದಿರಿ ಎಂದು ಕೇಳಿದಾಗ 'I read the feelings of the Members.' ಎಂದು ಹೇಳಿದರು. ತಾವು ರೂಲ್ಸ್ ಅನ್ನು ಓದಬಾರದೆಂದು ನಾನು ಹೇಳುವುದಿಲ್ಲ. ರೂಲ್ಸ್ ಓದಬೇಕು. ಆದರೆ ಕರಾರುವಾಕ್ಕಾಗಿ ರೂಲ್ಸ್ ಪ್ರಕಾರವೇ ನಡೆಯುವುದಿಲ್ಲ. ಹಾಗೆಂದು ರೂಲ್ಸ್ ಅನ್ನು ಗಾಳಿಗೆ ತೂರುವುದಕ್ಕೂ ಬರುವುದಿಲ್ಲ. ತಮ್ಮ ನಿರ್ದೇಶನದಂತೆ ಮತ್ತು ಕಾನೂನು ಪ್ರಕಾರ ಸದನ ನಡೆಯಬೇಕು. ಕಾನೂನಿನ ಚೌಕಟ್ಟಿನೊಳಗೆ, ಕೆಲವು ವಿಶೇಷ ಸಂದರ್ಭಗಳು ಬಂದರೆ ಸದಸ್ಯರಿಗೆ ಎಲ್ಲಾ ರೀತಿಯ ಅವಕಾಶ ಮಾಡಿಕೊಡುತ್ತೀರಿ. ಸರಕಾರದ ವತಿಯಿಂದ ತಮಗೆ ಎಲ್ಲಾ ರೀತಿಯ ಸಹಕಾರವನ್ನು ಕೊಡುತ್ತೇವೆ. ಮಾನ್ಯ ಸಭಾ ನಾಯಕರು ಹೇಳಿದ ಹಾಗೆ ಸದನಕ್ಕಿಂತ ಯಾವುದೂ ದೊಡ್ಡದಲ್ಲ. ಸದನದ ಶ್ರೇಯೋಭಿವೃದ್ಧಿ, ಇಚ್ಛಾಶಕ್ತಿ ಏನು ಇದೆ ಅದನ್ನು ಜನರಿಗೆ ತೋರಿಸಬೇಕು. ಸದನದ ಚೌಕಟ್ಟಿನಲ್ಲೇ ಸರಕಾರವನ್ನು ನಡೆಸುತ್ತೇವೆ. ಸದನದ ನಿಯಮಾವಳಿಗಳ ಒಳಗೆ ಜನರ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎನ್ನುವ ವಿಚಾರವನ್ನು ಎಂದೂ ಕಡೆಯವರೂ ಮಾಡಬೇಕು. ಅಲ್ಲಲ್ಲಿ ಸ್ವಲ್ಪ ವಿಶೇಷ ಸಂದರ್ಭಗಳಲ್ಲಿ ಭಾರಿ

ಗಂಭೀರವಾದ ಯಾವುದಾದರೂ ಒಂದು ತಂತ್ರಜ್ಞತೆಯ ವಿಷಯವಿದ್ದಾಗ, ಟೆಕ್ನಿಕಲ್ ವಿಚಾರವಿದ್ದಾಗ ಎಲ್ಲಾ ಸದಸ್ಯರುಗಳು ಟೆಕ್ನಿಕಲ್ ಆ್ಯಸ್‌ಪೆಕ್ಟ್ ಅನ್ನು ಹೇಳುವುದಕ್ಕೆ ಆಗದೇ ಇರಬಹುದು.

10.45 ಎ.ಎಂ.

ಅಥವಾ ಸಾರ್ವಜನಿಕ ಸಂಬಂಧಪಟ್ಟಂತೆ ಕಾನೂನು ಮತ್ತು ವ್ಯವಸ್ಥೆ ಬಗ್ಗೆಬಂದಾಗ ಸ್ವಲ್ಪ ಆವೇಶಗಳು ಬರಬಹುದು. ಭಾಷೆಯ ಬಗ್ಗೆ ಬರಬಹುದು. ರಾಜ್ಯದ ಸಮಸ್ಯೆಗಳ ಬಗ್ಗೆ ಬರಬಹುದು. ಆದರೂ ತಾವು ನಮ್ಮ ಸದನ ಅದು ಸಂಪೂರ್ಣ ಸಂಯಮಯುತ ಮತ್ತು ಸಫಲ ಕೊಡತಕ್ಕಂಥ ಚರ್ಚೆಯಲ್ಲಿ ನಡೆಯುವ ಹಾಗೆ ತಾವು ನಿರ್ದೇಶನ ಮಾಡುತ್ತೀರಿ ಎನ್ನುವ ವಿಶ್ವಾಸ ಇದೆ. ಕರ್ನಾಟಕದ ವಿಧಾನಸಭೆಯ ಇತಿಹಾಸದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಕನ್ನಡ ನಾಡಿನ ಸಂಸ್ಕೃತಿ, ಕನ್ನಡ ಜನರ ಸಂಸ್ಕೃತಿ ಅದನ್ನು ಪ್ರತಿನಿಧಿಸತಕ್ಕಂಥ ರೀತಿಯಲ್ಲಿ ಈ ಸದನವನ್ನು ತಾವು ನಡೆಸಿಕೊಡುತ್ತೀರಿ ಎನ್ನುವ ವಿಶ್ವಾಸದಿಂದ ತಮಗೆ ಯಶಸ್ಸನ್ನು ಕೋರಿ ಕೋರಿ ನನ್ನ ಶುಭಾಶಯಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎಂ. ಸಿ. ನಾಣಯ್ಯ (ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೇ, ತಾವು ಇವತ್ತು ಬಹಳ ಎತ್ತರದ ಈ ಒಂದು ಸ್ಥಾನವನ್ನು ಅಲಂಕರಿಸಿದ್ದೀರಿ. ತಾವು ಅಲಂಕರಿಸಿರತಕ್ಕಂಥ ಸ್ಥಾನ ಹೂವಿನ ಹಾಸಿಗೆಯಲ್ಲ ಎಂದು ನಮಗೆಲ್ಲರಿಗೂ ಕೂಡ ಗೊತ್ತಿದೆ. ಆದರೆ ಅದು ಮುಳ್ಳಿನ ಹಾಸಿಗೆಯೂ ಕೂಡ ಅಲ್ಲ. ಈ ಒಂದು ಸದನದ ಎತ್ತರವನ್ನು, ಘನತೆಯನ್ನು, ಗಾಂಭೀರ್ಯವನ್ನು ಎತ್ತಿ ಹಿಡಿಯಬೇಕಾಗಿರತಕ್ಕಂಥ ಜವಾಬ್ದಾರಿಕೆ ಈ ಸದನದಲ್ಲಿರತಕ್ಕಂಥ 224 ಸದಸ್ಯರು ತಮ್ಮನ್ನು ಸೇರಿ ಕೂಡ ನಮ್ಮ ಮೇಲೆ ಇದೆ ಎಂದು ಹೇಳುವಂಥ ಹೊಣೆಗಾರಿಕೆಯನ್ನು ಕೂಡ ನಾವು ಅರಿತಿದ್ದೇವೆ. ಆದರೆ ಹಲವಾರು ಸಂದರ್ಭಗಳಲ್ಲಿ ವಾದವಿವಾದಗಳು ಬಂದಂಥ ಕಾಲಕ್ಕೆ ನನ್ನ ಹಲವಾರು ವರ್ಷಗಳ ಅನುಭವದಲ್ಲಿ ಹೇಳುವುದಾದರೆ ಕೆಲವು ಸಂದರ್ಭದಲ್ಲಿ ಆಡಳಿತ ಪಕ್ಷದಲ್ಲಿರತಕ್ಕಂಥ ಸಂದರ್ಭದಲ್ಲಿ ನಮಗೆ ಬಹುಮತ ಇದ್ದಾಗ tyranny of the majority over minority ಎಂದು ಆಗುವುದನ್ನು ಕೂಡ ನಾವು ನೋಡಿದ್ದೇವೆ. ಇನ್ನು ಕೆಲವು ಸಂದರ್ಭಗಳಲ್ಲಿ ಆಡಳಿತ ಪಕ್ಷದಲ್ಲಿ ಜನರು ಇದ್ದರೂ ಕೂಡ ಅಲ್ಪಸಂಖ್ಯಾತರು ಇರತಕ್ಕಂಥ ವಿರೋಧ ಪಕ್ಷದಿಂದ ನಾವು ಕೆಲವು ವಿಚಾರಗಳನ್ನು ಸ್ವೀಕಾರ ಮಾಡಿದಾಗ tyranny of the minority over the majority ಎಂದು ಹೇಳುವಂಥದ್ದನ್ನು ಕೂಡ ನಾವು ನೋಡಿದ್ದೇವೆ. ಆದ್ದರಿಂದ tyranny of the majority ಮತ್ತು tyranny of the minority ಎಂದು ಹೇಳುವಂಥ ಎರಡು ಸಂದರ್ಭಗಳು ಬಂದಾಗಲೂ ಕೂಡ ಆ ಸಂದರ್ಭದಲ್ಲಿ ಬಹಳ ಪ್ರಾಮುಖ್ಯವಾಗಿರತಕ್ಕಂಥ ಪಾತ್ರವನ್ನು ವಹಿಸಬೇಕಾದಂಥ ಜವಾಬ್ದಾರಿಕೆ ಇವತ್ತು ತಮ್ಮ ಮೇಲೆ ಇದೆ.

ನಿಜ, ಇವತ್ತು ತಾವು ಈ ಸ್ಥಾನವನ್ನು ಅಲಂಕರಿಸಿರತಕ್ಕಂಥ ಸಂದರ್ಭದಲ್ಲಿ ತಾವು ಆಡಳಿತ ಪಕ್ಷದ ಸದಸ್ಯತ್ವವನ್ನು ಇವತ್ತಿಗೆ ತಾವು ಕಳೆದಕೊಂಡಿದ್ದೀರಿ. ನೀವು ಇವತ್ತು ನಿಷ್ಪಕ್ಷಪಾತವಾಗಿ ಎಲ್ಲಾ ಸದಸ್ಯರ ಹಕ್ಕುಗಳನ್ನು, ರಕ್ಷಣೆಯನ್ನು ಮಾಡಬೇಕಾದಂಥ ಜವಾಬ್ದಾರಿಕೆಯನ್ನು ಇವತ್ತು ತಾವು ಪಡೆದುಕೊಂಡಿದ್ದೀರಿ. ಮತ್ತು ಆ ಒಂದು ಕೆಲಸವನ್ನು ತಾವು ರಾಗದ್ವೇಷಗಳಿಲ್ಲದೆ ಈ ಸದನದ ಗೌರವವನ್ನು, ಘನತೆಯನ್ನು ಎತ್ತಿಹಿಡಿಯುವುದರಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಐದು ಕೋಟಿ ಜನರ ಆಶೋತ್ತರಗಳನ್ನು ಸ್ಪಂದಿಸುತ್ತಿರತಕ್ಕಂಥ ಯಾವ ಒಂದು ಈ ಶಾಸನಸಭೆ ಇದೆ, ಈ ಶಾಸನಸಭೆಯ ಮುಖಾಂತರ ಶಾಸನವನ್ನು ಮಾಡತಕ್ಕಂಥ ಜವಾಬ್ದಾರಿಕೆಯನ್ನು ಹೊಂದಿರುವ ಈ ಸಭೆಯು ಯಾವುದು ಇದೆ, ಇದು ಕರ್ನಾಟಕ ರಾಜ್ಯದ ಜನತೆಯ ಪ್ರತಿಬಿಂಬವಾಗುತ್ತಿರತಕ್ಕಂಥ ಈ ಸಭೆಯಲ್ಲಿ ಆ ಎತ್ತರವನ್ನು ತಾವು ಎತ್ತಿ ಹಿಡಿಯುವಂಥ ಕಾರ್ಯವನ್ನು ಮಾಡುತ್ತೀರಿ ಎಂದು ಹೇಳುವಂಥ ಭರವಸೆಯೂ ಕೂಡ ನಮ್ಮಲ್ಲಿದೆ. ಮಾನ್ಯ ಮುಖ್ಯಮಂತ್ರಿಗಳು Who is the successful Speaker? ಎಂದು ಹೇಳುವಂಥ ಸಂದರ್ಭದಲ್ಲಿ ಒಂದು ವ್ಯಾಖ್ಯಾನವನ್ನು

ಮಾಡಿದರು. ಆದರೆ ಬ್ರಿಟಿಷ್ ಹೌಸ್ ಆಫ್ ಕಾಮನ್ಸ್‌ನಲ್ಲಿ the best Speaker ಯಾರು ಎಂದು ಹೇಳುವಾಗ ವ್ಯಾಖ್ಯಾನವಾದಾಗ the best Speaker is one who rarely speaks or who speaks less.

ಇದೂ ಕೂಡ ತಮ್ಮ ಗಮನದಲ್ಲಿದೆ ಎಂದು ಹೇಳುವಂಥ ಭಾವನೆಯನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಒಳಗಡೆ ಮಾತಿನ ಚಕಾರ ಬಂದಾಗ, ಅಥವಾ ಎಲ್ಲಾದರೂ ನಮ್ಮಲ್ಲಿರುವಂಥ ಈ ನಮ್ಮ ಚರ್ಚೆಗಳು ಸ್ವಲ್ಪಮಟ್ಟಿಗೆ ನೀರಸವಾದಾಗ ಅಥವಾ ಚರ್ಚೆಗಳು ಭಾವೋದ್ವೇಗದಿಂದ ಬಹಳಷ್ಟು ಮೇಲಕ್ಕೆ ಹೋದಾಗ ನಿಮ್ಮ ಹಾಸ್ಯವನ್ನು ನಾನು ಬಲ್ಲೆ. ನಿಮ್ಮ ಮೊನಚು ಮಾತನ್ನು ಬಲ್ಲೆ. ನಿಮ್ಮ ವಿಡಂಬನೆಯನ್ನೂ ನಾನು ಬಲ್ಲೆ. ಅಂಥ ಸಂದರ್ಭದಲ್ಲಿ ನೀರಸವಾಗುವಂಥ ಸಂದರ್ಭದಲ್ಲಿ ಉದ್ವೇಗವಾಗಿರತಕ್ಕಂಥ ಸಂದರ್ಭದಲ್ಲಿ ಈ ಸದನವನ್ನು ಸ್ವಲ್ಪ ಮಟ್ಟಿಗೆ ಸರಿದಾರಿಯಲ್ಲಿ ತೆಗೆದುಕೊಂಡು ಹೋಗುವ ನಿಮ್ಮ ಹಾಸ್ಯ, ನಿಮ್ಮ ವಿಡಂಬನೆ ಆ ಸಂದರ್ಭದಲ್ಲಿ ಬಂದಾಗ ಅದು ನಮಗೂ ಕೂಡ ಅನುಕೂಲವಾಗುತ್ತದೆ ಎಂದು ಹೇಳುವಂಥ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಿ ನೀವು ಬಹಳ ಚಿಕ್ಕವಯಸ್ಸಿನಲ್ಲಿ ಈ ಎತ್ತರದ ಹುದ್ದೆಗೆ ಬಂದಿದ್ದೀರಿ.

ಆದರೆ ಚಿಕ್ಕ ವಯಸ್ಸಿನಲ್ಲಿ ಎತ್ತರದ ಹುದ್ದೆಗೆ ಬಂದಿದ್ದರೂ ಕೂಡ ನಿಮ್ಮ ಸಂಸದೀಯ ವ್ಯವಹಾರದ ಜ್ಞಾನ ನಮಗೆ ಗೊತ್ತಿದೆ. ನಿಮ್ಮ ವಿಚಾರದ ತೀಕ್ಷ್ಣತೆ ನಮಗೆ ಗೊತ್ತಿದೆ. ಸದನವನ್ನು ನೀವು ಬಹಳ ಎತ್ತರದ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತೀರಿ ಎಂದು ಹೇಳುತ್ತಿರತಕ್ಕ ಭಾವನೆ ಕೂಡ ನಮ್ಮಲ್ಲಿ ಇದೆ. ಈ ಕೆಲಸವನ್ನು ಮಾಡುತ್ತಿರತಕ್ಕ ಸಂದರ್ಭದಲ್ಲಿ ನಾವೆಲ್ಲರೂ ಕೂಡ, ಈ ಸದನದಲ್ಲಿರತಕ್ಕ ಮಾನ್ಯ ಸದಸ್ಯರೆಲ್ಲರೂ ಕೂಡ ನಿಮಗೆ ಸಂಪೂರ್ಣವಾಗಿರತಕ್ಕ ಬೆಂಬಲವನ್ನು ಕೊಡಲಿಕ್ಕೆ ಖಂಡಿತವಾಗಿಯೂ ಮುಂದೆ ಬರಬೇಕಾಗುತ್ತದೆ. ಈ ಸದನದ ಜವಾಬ್ದಾರಿಕೆ ನಿಮ್ಮ ಮೇಲೆ ಎಷ್ಟು ಇದೆಯೋ ಅದಕ್ಕಿಂತ ಹೆಚ್ಚಾಗಿ ನಮ್ಮ ಮೇಲೆ ಇದೆ ಎಂಬ ಅರಿವೂ ಕೂಡ ನಮಗೆ ಇದೆ. ಆದ್ದರಿಂದ ತಾವು ಈ ಒಂದು ಕಾರ್ಯವನ್ನು ನಿರ್ವಹಿಸುವಲ್ಲಿ ನಾವು ನಿಮಗೆ ಸಂಪೂರ್ಣವಾಗಿರತಕ್ಕ ಸಹಕಾರವನ್ನು ಸದನದ ಎಲ್ಲಾ ಸದಸ್ಯರೂ ಕೊಡುತ್ತೇವೆ ಎಂದು ಆಡುವುದರ ಮೂಲಕ ಈ ಸದನದ 224 ಸದಸ್ಯರ ಸಂಪೂರ್ಣವಾಗಿರತಕ್ಕ ಹಕ್ಕಿನ ರಕ್ಷಣೆ ಮಾಡಬೇಕಾಗಿರತಕ್ಕ ಜವಾಬ್ದಾರಿ ಹೊತ್ತಿರತಕ್ಕ ತಾವು ಈ ಕೆಲಸವನ್ನು ರಾಗದ್ವೇಶಗಳಿಲ್ಲದೆ, ಪಕ್ಷಾತೀತವಾಗಿ ನಿರ್ವಹಿಸುತ್ತೀರಿ ಎಂದು ಈ ಸಂದರ್ಭದಲ್ಲಿ ಆಡಿ ನಿಮಗೆ ಸಂಪೂರ್ಣವಾಗಿರತಕ್ಕ ಸಹಕಾರವನ್ನು, ಶುಭಾಷಯವನ್ನು ನಾನು ಈ ಸಂದರ್ಭದಲ್ಲಿ ಕೋರುತ್ತೇನೆ.

† ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ):– ಮಾನ್ಯ ಅಧ್ಯಕ್ಷರೇ, ಅತ್ಯಂತ ಮಹತ್ತರವಾದಂತಹ, ಉನ್ನತವಾದಂತಹ ಅಧ್ಯಕ್ಷ ಸ್ಥಾನವನ್ನು ತಾವು ಇವತ್ತು ಅಲಂಕರಿಸಿದ್ದೀರಿ. ಅದಕ್ಕಾಗಿ ನಾನು ತಮಗೆ ಶುಭಾಶಯಗಳನ್ನು ಕೋರುತ್ತಿದ್ದೇನೆ. ಈ ಸ್ಥಾನದಲ್ಲಿ ವೈಕುಂಠ ಬಾಳಿಗಾ ಅವರಂತಹ, ಎಸ್. ಆರ್. ಕಂಠಿ ಅವರಂಥ, ಎಸ್. ಎಂ. ಕೃಷ್ಣ ಅಂಥವರು ಮಾನ್ಯ ಬಿ.ಜಿ. ಬಣಕಾರ್ ಅಂತಹವರು, ಮಾನ್ಯ ಚಂದ್ರೇಗೌಡರಂತಹವರು ಈ ಸದನದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿ ನಾವು ನಡೆಸಿಕೊಂಡು ಬಂದಿರತಕ್ಕ ಈ ಒಂದು ಸದನದ ಸತ್ಸಂಪ್ರದಾಯವನ್ನು ಅತ್ಯಂತ ಉನ್ನತ ಸ್ಥಾನಕ್ಕೆ ತೆಗೆದುಕೊಂಡು ಹೋಗುವಂತಹ ಪ್ರಯತ್ನ ಮಾಡಿದ್ದರು. ಬಹುಶಃ ಅದೇ ರೀತಿಯಲ್ಲಿ ಈ ಸದನವನ್ನು ತಾವು ತೆಗೆದುಕೊಂಡು ಹೋಗುತ್ತೀರಿ; ಅದಕ್ಕೆ ಈ ಕಡೆ ಇರುವಂತಹ ವಿರೋಧ ಪಕ್ಷದವರ ಎಲ್ಲಾ ಸದಸ್ಯರ ಸಂಪೂರ್ಣ ಸಹಕಾರ ಇದೆ. ಬಹುಶಃ ಕೆಲವು ಸಂದರ್ಭದಲ್ಲಿ ಆಡಳಿತ ಪಕ್ಷದ ಸದಸ್ಯರೇ ನಿಮಗೆ ಅಡ್ಡಿ ಆತಂಕ ಮಾಡುವಂತಹ ಸಂದರ್ಭ ಬಂದಾಗ ಖಂಡಿತ ನಾವು ಅದಕ್ಕೆ ಅವಕಾಶ

ಮಾಡಿಕೊಡದೆ ನಿಮ್ಮ ಪರವಾಗಿ ನಿಲ್ಲುತ್ತೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಈ ಪ್ರಜಾತಂತ್ರದ ವ್ಯವಸ್ಥೆಯಲ್ಲಿ ನಾನು ತಮಗೆ ಹೇಳಬೇಕಾಗಿಲ್ಲ. ಆಡಳಿತ ಪಕ್ಷಕ್ಕಿಂತ ಒಂದು ಮಹತ್ತರವಾದ ಜವಾಬ್ದಾರಿ ವಿರೋಧಪಕ್ಷದ ಮೇಲೆ ಇದೆ. ಮೊದಲ ಬಾರಿಗೆ ಈ ಸದನಕ್ಕೆ ಬಿಸಿ ರಕ್ತದ ಯುವಕರು ದೊಡ್ಡ ಪ್ರಮಾಣದಲ್ಲಿ ಆ ಕಡೆ ಹಾಗೂ ಈ ಕಡೆಯಿಂದ ಆಯ್ಕೆಯಾಗಿ ಬಂದಿದ್ದಾರೆ. ಅವರಿಗೆ ಕಾನೂನು ಕಟ್ಟಳೆಗಳು ಗೊತ್ತಿಲ್ಲದೆ ಇರಬಹುದು. ಆದರೆ ಜನರ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಅವರದೇ ಆದ ರೀತಿಯಲ್ಲಿ ಅವರು ನಿಂತುಕೊಂಡಾಗ ಹೆಚ್ಚಿನದಾದ ಒಂದು ಅವಕಾಶ ತಾವು ಈ ವಿರೋಧ ಪಕ್ಷದಲ್ಲಿರುವವರ ಕಡೆ ನೋಡುತ್ತೀರಿ, ಅವಕಾಶ ಮಾಡಿಕೊಡುತ್ತೀರಿ ಎನ್ನುವಂತಹ ವಿಶ್ವಾಸವೂ ಸಹ ನನಗೆ ಇದೆ. ಈಗ ತಾನೇ ಮಾನ್ಯ ಸಭಾ ನಾಯಕರು, ಮಾನ್ಯ ಉಪಮುಖ್ಯಮಂತ್ರಿಗಳು ಹೇಳಿದರು. ಈ ನಾಡಿನ ಐದು ಕೋಟಿ ಜನರ ಭಾವನೆಗಳನ್ನು ವ್ಯಕ್ತಪಡಿಸಲು ನಾವು ಇಲ್ಲಿಗೆ ಬಂದಿದ್ದೇವೆ. ಅನೇಕ ಸಂದರ್ಭದಲ್ಲಿ ಈ ಜನತೆಯ ಪ್ರತಿನಿಧಿಗಳು ಎಂದು ನಾವು ಮರೆತು ನಾವೇ ಪ್ರಭುಗಳು ಎಂದು ವರ್ತನೆ ಮಾಡಿದಂತಹ ಸಂದರ್ಭವನ್ನು ನಾವು ನೋಡುತ್ತಿದ್ದೇವೆ. ಆದರೆ ಇವತ್ತು ಅತ್ಯಂತ ವಿಚಿದ್ರವಾದ ಪರಿಸ್ಥಿತಿಯಲ್ಲಿ ತಾವು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದೀರಿ. ಅಜೀರ್ಣವಾಗುವಷ್ಟು ಬಹುಮತ ಆ ಕಡೆ ಇಲ್ಲ. 116 ಜನ ಮಾತ್ರ ಇದ್ದಾರೆ, ವಿರೋಧ ಪಕ್ಷದಲ್ಲಿ ನಾವು 108 ಸದಸ್ಯರು ಕುಳಿತಿದ್ದೇವೆ. ವಿರೋಧ ಪಕ್ಷ ಪ್ರಾರಂಭದಲ್ಲಿಯೇ ನಿಮಗೆ ಸಹಕಾರವನ್ನು ಕೊಡಲಿಕ್ಕೆ ಶುರು ಮಾಡಿದ್ದೇವೆ. ಏಕೆಂದರೆ ಇಲ್ಲಿ 108 ಜನ ನಾವಿದ್ದರೂ ಸಹ ಅಧ್ಯಕ್ಷ ಸ್ಥಾನಕ್ಕೆ ನಾವ್ಯಾರೂ ಅಪೇಕ್ಷೆ ಪಡಲಿಲ್ಲ. ಅಂದರೆ ಇದರ ಅರ್ಥ. ಈ ಸದನದಲ್ಲಿ ಕಾರ್ಯಕಲಾಪಗಳು ಸರಿಯಾದ ರೀತಿಯಲ್ಲಿ ನಡೆಯಬೇಕು. ಎಲ್ಲಾ ರೀತಿಯ ರಚನಾತ್ಮಕ ಕೆಲಸಕ್ಕೆ ಸಹಕಾರ ನಮ್ಮದು ಇದೆ. ವಿರೋಧ ಮಾಡುವುದಕ್ಕೋಸ್ಕರ ವಿರೋಧ ಪಕ್ಷದಲ್ಲಿ ಕುಳಿತಂತಹ ಜನ ನಾವೆಲ್ಲ ಎಂದು ತೋರಿಸುವುದಕ್ಕೋಸ್ಕರನೇ ನಾವು ಈ ದಿಕ್ಕಿನಲ್ಲಿ ಹೊರಟಿದ್ದೇವೆ. ಬಹುಶಃ ಅದನ್ನು ತಾವು ಆಡಳಿತ ಪಕ್ಷದವರು ಅರ್ಥ ಮಾಡಿಕೊಳ್ಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ರಾಜ್ಯದ ಪರಿಸ್ಥಿತಿ, ಜನರ ಪರಿಸ್ಥಿತಿ ಬಹುಶಃ ಹದಗೆಟ್ಟಿದೆ. ಒಂದು ರೀತಿಯ ಗೊಂದಲದ ವಾತಾವರಣ ಇದೆ. ಅತಿವೃಷ್ಟಿ, ನೆರೆಹಾವಳಿ, ಭೂಕಂಪಕ್ಕೆ ತುತ್ತಾಗಿ ಅಭಿವೃದ್ಧಿ ಕಾರ್ಯಗಳು ಸ್ಥಗಿತ ಆಗಿ ಮುಂದಿನ ಕಾರ್ಯದ ಬಗ್ಗೆ ಜನ ಯೋಚನೆ ಮಾಡುತ್ತಿರುವಂತಹ ಕಾಲದಲ್ಲಿ ನಾವು ಈ ಸದನದಲ್ಲಿ ಬಂದಿದ್ದೇವೆ.

ನಾವಿಬ್ಬರೂ ಇಲ್ಲಿ ಒಟ್ಟಿಗೆ ಕೆಲಸ ಮಾಡಿದ್ದೇವೆ. ತಾವು ಈ ಹಿಂದೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನಿಮ್ಮ ಜೊತೆ ಅನೇಕ ಕಡೆ ಒಟ್ಟಾಗಿ ಪ್ರವಾಸ ಮಾಡುವ ಅವಕಾಶ ಒದಗಿಬಂದಿತ್ತು. ತಮಗೆ ಸಾಕಷ್ಟು ಅನುಭವವಿದೆ. ಜನರ ಬಗ್ಗೆ ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆನ್ನುವ ಕಳಕಳಿಯಿರುವಂಥ ತಮ್ಮನ್ನು ಅಧ್ಯಕ್ಷ ಸ್ಥಾನಕ್ಕೆ ಆಡಳಿತ ಪಕ್ಷದವರು ಕೂರಿಸಿರುವುದು ಸ್ವಾಗತಾರ್ಹವಾದ ಸಂಗತಿ. ತಾವು ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಈ ಕಡೆಯಿಂದ ನಾವು ಎಲ್ಲಾ ರೀತಿಯ ಸಹಕಾರಗಳನ್ನು ಕೊಡುತ್ತೇವೆ. ಹಾಗೂ ನೂತನವಾಗಿ ಚುನಾಯಿತರಾಗಿ ಬಂದ ಸದಸ್ಯರುಗಳಿಗೆ ಸದನದ ಕಾರ್ಯಕಲಾಪದಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಎಲ್ಲದಕ್ಕಿಂತ ಹೆಚ್ಚಾಗಿ ತಾವು ವಿರೋಧ ಪಕ್ಷದ ಕಡೆ ಹೆಚ್ಚು ಗಮನ ಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತಾ ತಮಗೆ ಮತ್ತೊಮ್ಮೆ ಶುಭಾಶಯ ಕೋರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):– ಸನ್ಮಾನ್ಯ ಅಧ್ಯಕ್ಷರೆ, ಇವತ್ತೊ ತಮ್ಮ ಚುನಾವಣೆಯನ್ನು ಬಹಳ ಮಹತ್ವಪೂರ್ಣ ಮತ್ತು ವಿಶೇಷವಾಗಿ ಎಲ್ಲರ ಒಪ್ಪಿಗೆ, ಒಮ್ಮತದಿಂದ ನಡೆಸಲಾಗಿದೆ. ನಾನು ತಮ್ಮನ್ನು ಸುಮಾರು 1972ನೇ ಇಸವಿಯಿಂದ ಬಲ್ಲೆ. ತಾವು ಈ ಹಿಂದೆ

ಕಾಂಗ್ರೆಸ್ ಪಕ್ಷದಲ್ಲಿ ಸದಸ್ಯರಾಗಿ ಕೆಲಸ ಮಾಡಿ ಮತ್ತು ಅನೇಕ ಪ್ರಗತಿಪರವಾಗಿ, ಕಾನೂನು ಪರವಾಗಿ ಹೋರಾಟ ಮಾಡಿ ಮುಖ್ಯವಾಗಿ ಬಡವರ ಮತ್ತು ರೈತರ ಏಳಿಗೆಗಾಗಿ ಕೂಡ ಕೆಲಸ ಮಾಡಿದ್ದೀರಿ. ಯುವಕ ಮಿತ್ರರಾಗಿ ಬಹುಶಃ ನನಗನ್ನಿಸಿದ ಮಟ್ಟಿಗೆ ಈ ವಿಧಾನಸಭೆಯ ಚರಿತ್ರೆಯಲ್ಲಿಯೇ ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಈ ಒಂದು ಉನ್ನತವಾದ ಅಧ್ಯಕ್ಷ ಸ್ಥಾನವನ್ನು ತಾವು ಪಡೆದುಕೊಂಡಿದ್ದೀರಿ. ತಮಗೆ ಸಾಕಷ್ಟು ಅನುಭವವಿದೆ. ತಾವು ಮೂರು ಸಲ ಚುನಾಯಿತರಾಗಿ ಬಂದು ಈ ಸದನದಲ್ಲಿ ಕೆಲಸ ಮಾಡಿದ್ದೀರಿ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದೀರಿ. ಇದಲ್ಲದೆ ತಾವು ಒಬ್ಬ ಉತ್ತಮ ವಕ್ತಾರರು ಮತ್ತು ಈ ಸದನದ ನಡವಳಿಕೆ ಬಗ್ಗೆ ಕೂಡ ತಾವು ಸಾಕಷ್ಟು ಆಳವಾಗಿ ಅಭ್ಯಾಸ ಮಾಡಿದ್ದೀರಿ. ಆದರೆ, ನನ್ನ ಅಭಿಪ್ರಾಯ ಹೇಳಬೇಕೆಂದರೆ, ಈ ಚಿಕ್ಕ ವಯಸ್ಸಿನಲ್ಲಿ ತಮಗೆ ಈ ಹುದ್ದೆಯನ್ನು ಏನೋ ಕಾರಣಾಂತರಗಳಿಂದ ಕೊಟ್ಟಿರಬಹುದು. ನನ್ನ ಮನಸ್ಸಿನ ಅನಿಸಿಕೆ ಏನೆಂದರೆ, ಈ ಚಿಕ್ಕ ವಯಸ್ಸಿನಲ್ಲಿ ನಿಮ್ಮ ಸೇವೆಯನ್ನು ಆಡಳಿತ ಪಕ್ಷ ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕಾಗಿತ್ತು ಎನ್ನುವುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಇದು ಉನ್ನತವಾದ ಸ್ಥಾನವಾಗಿರುವುದರಿಂದ ತಮ್ಮ ವಯಸ್ಸಿಗೆ ತಕ್ಕಂತೆ ಸಕ್ರೀಯವಾಗಿ ತಾವು ಇನ್ನೂ ರಾಜಕಾರಣದಲ್ಲಿ ಭಾಗವಹಿಸುವುದಕ್ಕೆ ಬಹುಶಃ ಸಾಕಷ್ಟು ಅವಕಾಶ ಇತ್ತು. ಆದರೆ, ರಾಜಕಾರಣದಲ್ಲಿ ಅನೇಕ ರೀತಿಯ ಒತ್ತಡಗಳಿರುತ್ತವೆ. ಇದನ್ನು ನಾವು ಯಾರೂ ಕೂಡ ಮರೆಯುವಂತಿಲ್ಲ. ಆ ಒತ್ತಡದ ಮೇರೆಗೆ ಇವೊತ್ತಿನ ದಿವಸ ನಮ್ಮ ರಕ್ಷಣೆಗೆ ತಾವು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದೀರಿ ಎಂದು ಭಾವಿಸಿದ್ದೇನೆ. ಏಕೆಂದರೆ, ಆಗಲೇ ಶ್ರೀಮಾನ್ ಯಡಿಯೂರಪ್ಪನವರು ಹೇಳಿದಂತೆ ವಿರೋಧ ಪಕ್ಷದಲ್ಲಿಯೂ ಕೂಡ ಸುಮಾರು 108 ಸದಸ್ಯರಿದ್ದಾರೆ ಮತ್ತು ಆಡಳಿತ ಪಕ್ಷದಲ್ಲಿ 116 ಜನರಿದ್ದಾರೆ. ಈಗ ತಾವು ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ಬಳಿಕ ಬಹುಶಃ ಸದಸ್ಯತ್ವ ಕಡಿಮೆಯಾದಂತಾಗಿದೆ. ಅಲ್ಲದೆ, ಈ ಸದನದ ಎಲ್ಲಾ ಸದಸ್ಯರ ರಕ್ಷಣೆ ಮಾಡುವುದಕ್ಕೋಸ್ಕರ ಇವೊತ್ತು ಆ ಸ್ಥಾನವನ್ನು ಅಲಂಕರಿಸಿದ್ದೀರಿ. ಅದಕ್ಕೋಸ್ಕರ ತಮಗೆ ಸಹಾಯ – ಸಹಕಾರವನ್ನು ನಮ್ಮ ಪಕ್ಷದ ವತಿಯಿಂದ ಮತ್ತು ವಿರೋಧ ಪಕ್ಷದ ವತಿಯಿಂದ ನಾವು ನೀಡುತ್ತೇವೆ. ಆದರೆ, ಈ ಹತ್ತನೇ ವಿಧಾನಸಭೆಯಲ್ಲಿ ಅನೇಕ ರೀತಿಯ ಸಮಸ್ಯೆಗಳು ಸದನದ ಮುಂದೆ ಬರುತ್ತವೆ. ಆ ರೀತಿ ಬಂದಾಗ ತಾವು ಕೂಡ ಅಂತಹ ಸಮಸ್ಯೆಗಳನ್ನು ಗಂಭೀರತೆಯಿಂದ ಹಾಗೂ ನಿಷ್ಪಕ್ಷಪಾತವಾಗಿ ಬಗೆಹರಿಸುವ ಗುಣ ತಮ್ಮಲ್ಲಿದೆ. ಇದನ್ನು ಅಲ್ಲಗಳೆಯುವಂತಿಲ್ಲ. ಆದುದರಿಂದ, ಬುದ್ಧಿವಾದ ಹೇಳತಕ್ಕಂಥ ಪ್ರಶ್ನೆಯೂ ಕೂಡ ಉದ್ಭವಿಸುವುದಿಲ್ಲ. ಇಂತಹ ಇಕ್ಕಟ್ಟಿನ ಪ್ರಸಂಗಗಳು ಅನೇಕ ಸಲ ಬರುತ್ತವೆ. ಶ್ರೀಮಾನ್ ನಾಣಯ್ಯನವರು ಹೇಳಿದಂತೆ ಅಂತಹ ಸಂದರ್ಭದಲ್ಲಿ ಸದನದ ಸದಸ್ಯರೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವ ಚಾಣಾಕ್ಷತನವಿರಬೇಕು. ಅದು ತಮ್ಮ ಹತ್ತಿರವಿದೆ. ತಾವು ಎಲ್ಲಾ ಸದಸ್ಯರ ಗೌರವವನ್ನು ಮತ್ತು ಅವರ ಹಕ್ಕುಗಳನ್ನು ಕಾಪಾಡಿಕೊಂಡು ಹೋಗುತ್ತೀರೆಂಬ ನಂಬಿಕೆಯಿಟ್ಟುಕೊಂಡು, ಇವೊತ್ತಿನ ದಿವಸ ಅಧ್ಯಕ್ಷ ಸ್ಥಾನಕ್ಕೆ ತಮ್ಮ ಆಯ್ಕೆ ಸರ್ವಾನುಮತದಿಂದ ಆಗಿರುವುದಕ್ಕೆ ನಾನು ತಮ್ಮನ್ನು ಅಭಿನಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ):– ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ನಾನು ಈ ಸದನದ ತೀರ್ಮಾನ ಮತ್ತು ಅಭಿಪ್ರಾಯಕ್ಕೆ ದನಿಗೂಡಿಸುತ್ತಾ ತಮಗೆ ಸರ್ವ ರೀತಿಯ ಸಹಕಾರ ಮತ್ತು ಶುಭ ಹಾರೈಕೆಯನ್ನು ಈ ಸಂದರ್ಭದಲ್ಲಿ ಕೋರುತ್ತಿದ್ದೇನೆ. ಸದನದಲ್ಲಿ ಪ್ರಜಾಪ್ರಭುತ್ವದ ಪದ್ಧತಿ ಪ್ರಕಾರ ಅಂಕಿ – ಸಂಖ್ಯೆಗಳು ಇದ್ದೇ ಇರುತ್ತವೆ, ಜಲಾಬಲಗಳು ಕೂಡ ಇರುತ್ತವೆ. ಅದೇನೇ ಇದ್ದರೂ ತಾವು ತೆಗೆದುಕೊಳ್ಳುವ ತೀರ್ಮಾನಗಳು, ಹಾಕಿಕೊಡುವ ಸತ್ಸಂಪ್ರದಾಯಗಳು, ನಿಯಮಾವಳಿಗಳು ಮಾನ್ಯ ಸದಸ್ಯರ ಹಕ್ಕುಗಳನ್ನು ರಕ್ಷಣೆ ಮಾಡುವುದರ ಜೊತೆಯಲ್ಲಿ ತಾವು ಯಾವಾಗಲೂ ಸಂಪ್ರದಾಯ, ಕಾನೂನುಗಳನ್ನು ಎತ್ತಿಹಿಡಿಯಬೇಕಾಗುತ್ತದೆ.

ನಾವು ಎಷ್ಟು ದಿನ ಇಲ್ಲಿ ಇರುತ್ತೇವೆ ಎನ್ನತಕ್ಕದ್ದು ಮುಖ್ಯವಲ್ಲ. ಆದರೆ ನಾವು ಯಾವ ರೀತಿ ನಮ್ಮ ಕೊಡುಗೆಯನ್ನು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಕೊಡುತ್ತೇವೆ ಅಥವಾ ಕೊಡುತ್ತಿದ್ದೇವೆ ಎನ್ನತಕ್ಕದ್ದು ಮುಖ್ಯವೆಂದು ನಾನು ತಿಳಿದುಕೊಂಡಿದ್ದೇನೆ. ತಮಗೆ ಅಪಾರವಾದ ಅನುಭವವಿದೆ, ಮಾನ್ಯ ಸಭಾನಾಯಕರು ಕೂಡ ಅದನ್ನು ಹೇಳಿದರು. ನಾನು ಈ ಸದನದಲ್ಲಿ ಕಾಲಿಟ್ಟಾಗಲಿನಿಂದ ನಾನು ನೋಡಿದಂತೆ ಬೆಳ್ತಂಗಡಿ ಕ್ಷೇತ್ರದಿಂದ ಆರಿಸಿ ಬಂದಂಥ ಶ್ರೀಮಾನ್ ವೈಕುಂಠಬಾಳಿಗಾ ಅವರು ಯಾವಾಗಲೂ ಕಾನೂನನ್ನು ರೂಲ್ಸ್‌ಗಳನ್ನು ಪಾರ್ಲಿಮೆಂಟ್‌ನಲ್ಲಿ ಯಾವ್ಯಾವ ರೀತಿ ರೂಲಿಂಗ್ ಬಂದಿದೆ, ತೀರ್ಪು ಬಂದಿದೆ ಎನ್ನುವ ಬಗ್ಗೆ ಕೋಟ್ ಮಾಡುತ್ತಿದ್ದರು. ಅವರು ಈ ಸದನದಲ್ಲಿ ರೂಲಿಂಗ್ ರಿಸರ್ವ್ಡ್ ಎಂದು ಹೇಳಿರತಕ್ಕದ್ದು ನನಗೆ ಗೊತ್ತಿರುವ ಹಾಗೆ ಇಲ್ಲವೇ ಇಲ್ಲ ಎಂದು ಹೇಳಬೇಕಾಗುತ್ತದೆ. ಒಂದು ಬಾರಿಯೂ ಸಹ ಆ ರೀತಿ ಅವರು ಹೇಳಿದ್ದುದು ನನಗೆ ನೆನಪಿಲ್ಲ. ಈ ಸದನದಲ್ಲೇ ರೂಲಿಂಗನ್ನು ಕೊಡುತ್ತಿದ್ದರು. ಅವರು ಆಂಗ್ಲ ಭಾಷೆಯಲ್ಲಿ ಬಹಳ ವಾಗ್ಮಿಗಳೂ ಸಹ ಆಗಿದ್ದರು. ಇಲ್ಲೇ ತಮ್ಮ ತೀರ್ಪನ್ನು ತತ್‌ಕ್ಷಣ ಕೊಡತಕ್ಕಂಥ ಸಂಪೂರ್ಣ ಅನುಭವ, ಕಾರ್ಯಶಕ್ತಿ ಅವರಿಗೆ ಇತ್ತು. ಇವತ್ತು ನಮ್ಮಲ್ಲಿ ವಿಧಾನ ಮಂಡಲದ ಗ್ರಂಥಾಲಯವಿದೆ. ಆ ಕಾಲದಲ್ಲಿ ನನಗೆ ನೆನಪಿರುವಂತೆ ವಿರೋಧ ಪಕ್ಷದ ಒಬ್ಬರೇ ಒಬ್ಬರು ಸದಸ್ಯರಾದ ಶ್ರೀ ಎಂ. ನಾಗಪ್ಪ ಎನ್ನುವವರು ಅವರು ರಾಯಚೂರಿನಿಂದ ಬಂದವರು, ಅವರು ಯಾವಾಗಲೂ ಸಂವಿಧಾನದ ಅಂಶಗಳನ್ನು, ನೀತಿ ನಿಯಮಗಳನ್ನು, ಪ್ರತಿಯೊಂದು ಅಂಶಗಳನ್ನು ಹಿಡಿಯತಕ್ಕ ಸರ್ವಶಕ್ತಿ ಅವರಿಗೂ ಸಹ ಇತ್ತು. ನನಗೆ ಗೊತ್ತಿರುವ ಹಾಗೆ ಅವರು ಈಗಲೂ ಸಹ ರಾಯಚೂರಿನಲ್ಲಿ ವಕೀಲಿ ವೃತ್ತಿಯಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಆದರೆ ವೈಕುಂಠ ಬಾಳಿಗಾರವರ ಕಾರ್ಯಚಟುವಟಿಕೆಗಳು ಈ ಸದನದ ವ್ಯಾಪ್ತಿಯಲ್ಲಿ ಬಹಳ ಹಿಡಿಸುತ್ತಿತ್ತು. ಅದನ್ನು ನೋಡಿ ಬಹಳ ಜನ ಗ್ರಂಥಾಲಯಕ್ಕೆ ಹೋಗಿ ಪುಸ್ತಕಗಳನ್ನು ತೆಗೆದುಕೊಂಡು ಓದತಕ್ಕದ್ದು ಮತ್ತು ಮನನ ಮಾಡಿಕೊಳ್ಳತಕ್ಕದ್ದನ್ನು ನಾವೆಲ್ಲ ಕಂಡಿದ್ದೇವೆ. ಇದು ಅನೇಕ ವರ್ಷಗಳವರೆಗೆ ನಡೆಯಿತು. ಮಾನ್ಯ ಕೊಠಾವಳೆ ಅವರು ಬಂದಮೇಲೂ ಸಹ, ಅವರೂ ಕೂಡ ಕಾನೂನು ಪಂಡಿತರಾಗಿ ಈ ಸದನವನ್ನು ನಡೆಸುತ್ತಿದ್ದರು.

ಆದರೆ ವೈಕುಂಠಬಾಳಿಗಾ ಅವರ ಮಟ್ಟಕ್ಕೆ ಯಾರು ಕೂಡ ಬರಲಿಲ್ಲ ಎನ್ನತಕ್ಕದ್ದು ನನ್ನ ವೈಯಕ್ತಿಕ ಅಭಿಪ್ರಾಯ. ದುರಾದೃಷ್ಟವಶಾತ್ ಬರಬರುತ್ತಾ ಗ್ರಂಥಾಲಯವನ್ನೇ ಮರೆತುಬಿಟ್ಟರು. ಈಗಲೂ ಸಹ ಒಂದೊಂದು ವಿಭಾಗಕ್ಕೆ ಸರ್ಕಾರದಿಂದ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಇಟ್ಟಿರುವ ಗ್ರಂಥಾಲಯವಿದೆ, ಈ ಸದನದ ಒಳಗಡೆ ಅದರ ಉಪಯೋಗವಾಗಬೇಕು, ಪ್ರತಿಯೊಂದೂ ಸಹ ನಿಯಮದ ಪ್ರಕಾರ ನಡೆಯಬೇಕು ಎನ್ನತಕ್ಕ ಅಭಿಪ್ರಾಯದಿಂದ ನಾನು ಮಾತನಾಡುತ್ತಿಲ್ಲ. ಮಾನ್ಯ ಜೆ.ಹೆಚ್. ಪಟೇಲ್‌ರವರು ನಿಯಮ ಒಂದು ಕಡೆಯಾದರೆ ಅನುಭವ ಮತ್ತೊಂದು ಕಡೆ ಬೇಕು ಎಂದು ಹೇಳಿದರು. ನಾವು ಎಷ್ಟೋ ಸಾರಿ ಅನುಭವದ ಹಿನ್ನೆಲೆಯಲ್ಲಿ ನಮ್ಮ ನಿಯಮಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಎಷ್ಟೋ ಸಾರಿ ಆ ರೀತಿ ಬಲಾವಣೆಯನ್ನು ಮಾಡಿದ್ದೇವೆ. ಈ ಸದನದಲ್ಲೆ ಮಾಡಿದ್ದೇವೆ. ಆದ್ದರಿಂದ ನಿಯಮದ ಜೊತೆಗೆ ಅನುಭವ ಕೂಡ ಅಷ್ಟೇ ಮುಖ್ಯ. ಆದ್ದರಿಂದ ವಿಧಾನ ಮಂಡಲದ ಗ್ರಂಥಾಲಯವೇನಿದೆ ಅದರ ಉಪಯೋಗ ಸಾಕಷ್ಟು ಪ್ರಮಾಣದಲ್ಲಾದರೆ ಇಲ್ಲಿ ನಡೆಯತಕ್ಕಂಥ ಚರ್ಚೆಗಳಿಗೆ ಬೆಲೆ ಮತ್ತು ಒತ್ತು ಸಿಗುತ್ತದೆಂದು ನಾನು ಭಾವಿಸುತ್ತೇನೆ. ಅದರ ಕಿರುಪರಿಚಯ ಆಯ್ಕೆಯಾಗಿ ಬಂದಿರತಕ್ಕ ಹಳೆಯ ಸದಸ್ಯರಿಗೆ ಇದ್ದರೆ ಒಳ್ಳೆಯದು. ಅದರ ಸಂಪರ್ಕ ಅವರಿಗೆ ಇದ್ದರೆ ಒಳ್ಳೆಯದು, ಇನ್ನೂ, ಹೊಸದಾಗಿ ಬಂದಿರತಕ್ಕ ಸದಸ್ಯರಿಗೆ ಇದು ಅತ್ಯಂತ ಅಗತ್ಯವಾಗಿ ಬೇಕೇ ಬೇಕು ಎನ್ನತಕ್ಕದ್ದು ನನ್ನ ಭಾವನೆ.

ಕೆಲವು ಕಾನೂನು ಅಲ್ಲದಿದ್ದರೂ ಕೂಡ ಕೆಲವು ರೂಲ್ಸ್ ಇತ್ಯಾದಿಗಳನ್ನು ಓದಿ ತಿಳಿದುಕೊಳ್ಳಬಹುದು. ಅದಕ್ಕೆ ಎಲ್.ಎಲ್.ಬಿ. ಓದಬೇಕು ಎನ್ನುವಂತಹ ಅವಶ್ಯಕತೆ ಇಲ್ಲ. ಅವರ

ಕಾಲದಲ್ಲಿ ನಡೆದಂತಹ ಚರ್ಚೆಗಳ ವಿವರಗಳಿಗೆ ಹೋಗದಿದ್ದರೂ ಕೂಡ ಅದರ ನೆನಪು ಬಂದು ಸೂಕ್ಷ್ಮ ಮಾತನ್ನು ಆಡಿದ್ದೇನೆ. ಎಷ್ಟು ಸಾಧ್ಯವೋ ಅಷ್ಟು ಈ ಸದನದಲ್ಲಿ ಅದು ಚರ್ಚೆಯಾದರೆ ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಇನ್ನು ಈ ಸದನಕ್ಕೆ ಬಹಳ ಜನರು ಆಯ್ಕೆಯಾಗಿ ಬಂದಿರುವವರು ಅವರು ಯಾವುದೇ ಪಕ್ಷದವರಾದರೂ ಕೂಡ ನೂತನವಾಗಿ ಆಯ್ಕೆಯಾಗಿ ಬಂದಿರತಕ್ಕಂಥವರು ಹೆಚ್ಚಾಗಿ ಯುವಕರು. ಅವರಿಗೆ ಮಾರ್ಗದರ್ಶನವನ್ನು ಮಾಡುವಂತಹ ಸ್ಥಾನದಲ್ಲಿ ತಾವು ಇದ್ದೀರಿ. ತಮ್ಮ ಮಾರ್ಗದರ್ಶನ ಅತಿ ಅವಶ್ಯಕವಾಗಿ ಬೇಕೆ ಬೇಕು. ಏಕೆಂದರೆ ಕೆಲವು ಸಲ ಏನು ಮಾಡಬೇಕೆಂಬುದು ಗೊತ್ತಾಗುವುದಿಲ್ಲ. ರೂಲ್ಸ್ ಏನೆಂಬುದನ್ನು ಪರಿಚಯ ಮಾಡಿಕೊಳ್ಳುವುದರಲ್ಲಿ ಆರು ತಿಂಗಳು, ವರ್ಷ ಹೊರಟುಹೋಗುತ್ತದೆ. ಒಂದೊಂದು ಸಲ ಮಾತನಾಡುವ ಧಾಟಿ ಬದಲಾವಣೆಯಾಗಿ ಬಿಡುತ್ತದೆ. ಇಲ್ಲಿ ಮಾನ್ಯ ಸದಸ್ಯರು ಎನ್ನತಕ್ಕದ್ದು ಆಡಬೇಕೆ, ಬೇಡವೇ ಎಂಬುದು ಕೂಡ ಎಷ್ಟೋ ಸಾರಿ ಗೊತ್ತಾಗುವುದಿಲ್ಲ. ನಾವು ವಿರೋಧವಾಗಿ ಟೀಕೆ ಮಾಡುವಂತಹ ಸಂದರ್ಭ ಬಂದರೂ ಕೂಡ ಗೌರವ ಕೊಟ್ಟು ಟೀಕೆ ಮಾಡಬೇಕೆಂಬುದು ಕೂಡ ಗೊತ್ತಾಗುವುದಿಲ್ಲ. ಆದುದರಿಂದ ನೂತನವಾಗಿ ಆಯ್ಕೆಯಾಗಿ ಬಂದಿರುವಂತಹ ಮಾನ್ಯ ಸದಸ್ಯರುಗಳಿಗೆ ತಮ್ಮಿಂದ ಮಾರ್ಗದರ್ಶನ ಅತೀ ಅಗತ್ಯವೆಂದು ನಾನು ಭಾವಿಸಿದ್ದೇನೆ. ನಾವು ತಮಗೆ ದೊಡ್ಡ ಸಹಕಾರ ಏನು ಮಾಡಬಲ್ಲೆವು ಎಂದರೆ ಅವರು ಯಾವುದೇ ಪಕ್ಷದವರು ಆದರೂ ಕೂಡ ನೂತನವಾಗಿ ಆಯ್ಕೆಯಾಗಿ ಬಂದಿರುವಂತಹ ಸದಸ್ಯರಿಗೆ ಪಕ್ಕದಲ್ಲಿರುವಂತಹ ಸದಸ್ಯರು ಅವರಿಗೆ ಮಾರ್ಗದರ್ಶನ ಕೊಟ್ಟರೆ ನಮಗೆ ಸಹಕಾರವಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಇನ್ನೂ ಶ್ರೀಮಾನ್ ನಾಣಯ್ಯನವರು ಹೇಳಿದ ಹಾಗೆ ಈ ಸದನ ಸಮಾಜದ ಒಂದು ಪ್ರತಿಬಿಂಬವಾಗಬೇಕು. ಇದು ಒಂದು ಕೈಗನ್ನಡಿ ಇದ್ದಂತೆ, ಸಮಾಜದಲ್ಲಿರುವಂತಹ ನೋವು ನಲಿವುಗಳ ಪ್ರತಿಬಿಂಬವಾಗಲು ಸದಸ್ಯರೆಲ್ಲರೂ ಈ ಸದನದಲ್ಲಿ ಇರಬೇಕಾದಂಥ ಅವಶ್ಯಕತೆ ಇದೆ. ಸಮಸ್ಯೆಗಳ ಚರ್ಚೆಯಾಗುವಂತಹ ಸಂದರ್ಭದಲ್ಲಿ ಅದರ ಹುಬ್ಬುತಗ್ಗು, ಪರಿಣಿತಗಳು ಇದು ಹೊರಗಡೆ ಬಂದರೇ ಅದಕ್ಕೆ ಮೆರಗು, ಇಲ್ಲದಿದ್ದರೆ ಅದು ಅರ್ಥಹೀನವಾಗಿ ದೊಡ್ಡ ದೊಡ್ಡ ವಿಷಯಗಳು ಸತ್ತು ಹೋಗುತ್ತವೆ. ಅದಕ್ಕೆ ನಾವು ಅವಕಾಶ ಕೊಡಬಾರದು. ಆದುದರಿಂದ ವಿಷಯಗಳ ಅದ್ಯತೆ ಅರ್ಥ ಅದನ್ನು ಓಲೈಸಿ ಹೋಗುವಂತಹ ವಿಚಾರ ಧಾರೆ ಮಾನ್ಯ ಸದಸ್ಯರುಗಳಿಗೆ ಇರಬೇಕಾಗುತ್ತದೆ.

ಅಂತಹ ಸಂದರ್ಭಗಳು ಬಂದಾಗ ಪರಿಣಿತ ಬಂದರೆ ಅದು ಹೆಚ್ಚಿನ ವಿಷಯಗಳ ಮೇಲೆ ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ. ಅದಕ್ಕೆ ಮೆರಗುಕೂಡ ಬರುತ್ತದೆ. ಅಂತಹ ಚರ್ಚೆಗಳು ಮೇಲ್ಮಟ್ಟದ್ದಾಗಬೇಕು. ಎಲ್ಲರಿಗೂ ಭಾಷಾ ಪಾಂಡಿತ್ಯವಿರುವುದಕ್ಕೆ ಸಾಧ್ಯವಿಲ್ಲ. ವಿಷಯಗಳ ಅರಿವು ಸ್ವಲ್ಪ ಮಟ್ಟಿಗೆ ಇದ್ದರೂ ಸಾಕು. ಆ ಚರ್ಚೆ ಎತ್ತರಕ್ಕೆ ಬಂದೇ ಬರುತ್ತದೆ ಎನ್ನತಕ್ಕಂಥ ಮಾತನ್ನೂ ಹೇಳುತ್ತೇನೆ.

ಕೆಲವು ಸಾರಿ ನೂತನವಾಗಿ ಆಯ್ಕೆಯಾಗಿ ಬಂದಂತಹ ಮಾನ್ಯ ಸದಸ್ಯರಿಗೆ ಸ್ವಲ್ಪ ಮಟ್ಟಿಗೆ ತರಬೇತಿ ಶಿಬಿರ ಇದ್ದರೆ ಒಳ್ಳೆಯದೆಂದು ಮೊನ್ನೆ ಮೊನ್ನೆ ಅಧ್ಯಕ್ಷರಾಗಿ ಕೆಲಸ ಮಾಡಿದಂತಹ ಮಿತ್ರರೂ ಸಹ ಹೇಳುತ್ತಿದ್ದರು. ಇದನ್ನು ನಾವು ಎಲ್ಲಾ ಕಾಲದಲ್ಲೂ ಮಾತನಾಡುತ್ತಿದ್ದೇವೆ. ಆ ರೀತಿ ತರಬೇತಿ ಶಿಬಿರಗಳು ಎಷ್ಟೋ ಸಾರಿ ನಡೆದಿದೆ. ಅದೇ ರೀತಿ ತಾವು ಕೂಡ ಯೋಚನೆ ಮಾಡಿ ಅಲ್ಲಿ ಹಳೆಯ ಸದಸ್ಯರು ಅದು ತಮ್ಮಿಂದ ಬಂದರೆ ಈ ಮನೆಯ ಸದಸ್ಯರು ಇರಬಹುದು ಆ ಮನೆಯ ಸದಸ್ಯರು ಇರಬಹುದು ಅದು ಯಾರೆ ಇರಬಹುದು. ಕೆಲವು ಮಾತುಗಳನ್ನು ಅಲ್ಲಿ ಆಡಿದರೆ ಅದು ಈ ಸದನದಲ್ಲಿ ಕಾಲ ವ್ಯಯವಾಗುವುದು. ಅದನ್ನು ತಪ್ಪಿಸಬಹುದು ಎನ್ನುವುದು ನನ್ನ ಭಾವನೆ. ಆದುದರಿಂದ ನೂತನವಾಗಿ ಬಂದಿರುವಂತಹ ಸದಸ್ಯರಿಗೆ ತರಬೇತಿ ಕೊಡುವಂತಹ ವಿಚಾರ ಅತಿ ಮುಖ್ಯ. ಅದು ಸ್ವಲ್ಪಮಟ್ಟಿಗೆ ಆದರೂ ಕೂಡ ಆಗಾಗ್ಗೆ ಆಗಬೇಕು. ಅನಂತರ ಅದರ ಅವಶ್ಯಕತೆ ಬರುವುದಿಲ್ಲ. ಮತ್ತೆ ಲೈಬ್ರರಿ ಸಂಪರ್ಕ ಅದು ಕೂಡ ಬರತಕ್ಕದ್ದು. ಇನ್ನು ತಮ್ಮ ಅನುಭವದ ಬಗ್ಗೆ ಹೇಳುವಂತಹ ಅವಶ್ಯಕತೆ

ಇಲ್ಲ. ತಮಗೆ ಅಪಾರವಾದ ಅನುಭವವಿದೆ. ಇನ್ನು ಹಳೆಯ ಸದಸ್ಯರು ಯಾರ್‍ಯಾರು ಇದ್ದಾರೆ. ಆ ಕಡೆ ಈ ಕಡೆ ಅದನ್ನು ತಾವು ಎಲ್ಲ ಬಲ್ಲಿರಿ.

ಇನ್ನು ಅಂಕಿ ಸಂಖ್ಯೆಗಳ ಬಗ್ಗೆ ಒಂದೇ ಒಂದು ಮಾತು. ನಿಜ, ಸಹಜವಾಗಿ 115, 116, 120 ಇವೆಲ್ಲಾ ಅಂಕಿ ಸಂಖ್ಯೆಗಳು ಬಂದೇ ಬರುತ್ತವೆ. ಅದು ಏನನ್ನು ನೋಡದೆ ನಿಯಮಾವಳಿ ಮತ್ತು ಸತ್ಯಸಂಪ್ರದಾಯ ಏನು ಹೇಳುತ್ತದೆ, ಅದರ ಪ್ರಕಾರ ಅಧ್ಯಕ್ಷರಾಗಿ ಕುಳಿತಿರತಕ್ಕಂಥವರು ಸರ್ಕಾರದ ಕಾರ್ಯಕಲಾಪಗಳು ಏನು ಇರುತ್ತವೆ ಅದರಂತೆ ನಡೆಸಿಕೊಂಡು ಹೋಗಬೇಕಾಗುತ್ತದೆ. ಏಕೆಂದರೆ ಯಾವುದೇ ಪಕ್ಷದ ಸರ್ಕಾರ ಇದ್ದರೂ ಕೂಡ ಜನರಿಗೋಸ್ಕರ ಸರ್ಕಾರ ಇದ್ದೇ ಇರಬೇಕಾಗುತ್ತದೆ. ಆ ಸಂದರ್ಭದಲ್ಲಿ ತಮ್ಮ ತೀರ್ಪು ಸರ್ಕಾರದ ಪರವಾಗಿ ಬಂದರೆ ನಮಗೇನೂ ಆಶ್ಚರ್ಯವಾಗುವುದಿಲ್ಲ. ಏಕೆಂದರೆ ಇದು ನಮ್ಮ ಅನುಭವದಲ್ಲಿ ಇರತಕ್ಕಂಥ ವಿಚಾರಗಳು. ಆ ಅನುಭವ ತಮಗೆ ಇದೆ ಎನ್ನುವುದೂ ಕೂಡ ನಮಗೆಲ್ಲಾ ಗೊತ್ತು. ಅದನ್ನು ಯಾರೂ ಇಲ್ಲಿ ತಪ್ಪು ತಿಳಿದುಕೊಳ್ಳುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಎಲ್ಲರೂ ಕೂಡ ಹೇಳಬಲ್ಲೆವು. ಈ ಹಿಂದೆ ಅನೇಕ ಸದಸ್ಯರು ಏನು ಈ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದಾರೆ ಅವರೆಲ್ಲರೂ ಕೂಡ ಬಹಳ ಘನತೆ, ಗೌರವ ಮತ್ತು ಗಾಂಭೀರ್ಯದಿಂದ ಈ ಸದನವನ್ನು ನಡೆಸಿಕೊಂಡು ಹೋಗಿದ್ದಾರೆ. ಆ ವಿಚಾರ ನಮಗೆಲ್ಲಾ ಗೊತ್ತಿದೆ. ಈ ಸ್ಥಾನಕ್ಕೆ ಇನ್ನೂ ಹೆಚ್ಚಿನ ಘನತೆ ಗಾಂಭೀರ್ಯವನ್ನು ಈ ಸದನದಲ್ಲಿ ಚರ್ಚೆಯ ಮುಖಾಂತರ ತಂದುಕೊಡತಕ್ಕಂಥ ಒಳ್ಳೆಯ ಪರಿಸರ ಅಥವಾ ಸೃಷ್ಟಿಯನ್ನು ಮಾಡುವುದಕ್ಕೆ ಹಾಗೂ ಅಧ್ಯಕ್ಷರಾಗಿ ಸದನವನ್ನು ಚಾಕಚಕ್ಯತೆಯಿಂದ ನಡೆಸತಕ್ಕಂಥ ಸರ್ವಶಕ್ತಿ ತಮ್ಮಲ್ಲಿ ಇದೆ ಎಂದು ಗುರುತಿಸಿದ್ದೇವೆ. ಆದುದರಿಂದ ಸರ್ವಾನುಮತದ ಆಯ್ಕೆ ಇಡೀ ಸದನದಿಂದ ಇಂದು ಆಗಿದೆ. ಎಲ್ಲಾ ಪಕ್ಷಗಳು, ಹಾಗೇ ಪಕ್ಷೇತರರು ಯಾರೇ ಇದ್ದರೂ ಕೂಡ ಪಕ್ಷಬೇಧ ಮರೆತು ಇವತ್ತು ತಮ್ಮನ್ನು ಆಯ್ಕೆ ಮಾಡಲಾಗಿದೆ. ತಮಗೆ ಸಂಪೂರ್ಣ ಸಹಕಾರ ಇಡೀ ಸದನದ ಎಲ್ಲಾ ಮೂಲೆಗಳಿಂದ ಆಗಿದೆ. ತಾವು ಸ್ವಲ್ಪವೂ ಕೂಡ ಯಾವುದೇ ಅನುಮಾನ ಇಟ್ಟುಕೊಳ್ಳದೆ ತಮ್ಮ ಕೆಲಸಕಾರ್ಯಗಳನ್ನು ಮಾಡುತ್ತಾ ಹೋಗಬಹುದೆಂದು ಹೇಳುತ್ತಾ, ಈ ಸಂದರ್ಭದಲ್ಲಿ ತಮಗೆ ಶುಭ ಹಾರೈಕೆ ಮಾಡುತ್ತಿದ್ದೇನೆ. ಈ ಸದನದಲ್ಲಿ ತಾವು ಆಗಾಗ್ಗೆ ಕೊಡತಕ್ಕಂಥ ಮಾರ್ಗದರ್ಶನ ಮಾತ್ರ ಯಾವಾಗಲೂ ಬಹು ಎತ್ತರದಲ್ಲಿ ಒಡಮೂಡಿ ಬರಬೇಕು ಎನ್ನತಕ್ಕಂಥ ನಿರೀಕ್ಷೆಯನ್ನು ಸಹಜವಾಗಿ ವ್ಯಕ್ತ ಮಾಡುತ್ತಾ ಈ ಸದನದಲ್ಲಿ ಜನ ಏನು ಮಾಡುತ್ತಾರೆ ಅದಕ್ಕೆ ತಕ್ಕ ಹಾಗೆ ತಮ್ಮ ತೀರ್ಪು ಹೊರಬೀಳುತ್ತದೆ ಎಂಬ ಅನಿಸಿಕೆಯನ್ನು ಮತ್ತೊಮ್ಮೆ ಆಡಿ, ಎಲ್ಲರ ಪರವಾಗಿ ತಮಗೆ ಶುಭಹಾರೈಕೆಯನ್ನು ಈ ಸಂದರ್ಭದಲ್ಲಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ):– ಮಾನ್ಯ ಅಧ್ಯಕ್ಷರೇ, ತಮ್ಮ ಸರ್ವಾನುಮತದ ಆಯ್ಕೆಯನ್ನು ನಾನು ಬಹಳ ಮುಕ್ತ ಕಂಠದಿಂದ ಸ್ವಾಗತಿಸುತ್ತೇನೆ; ಮತ್ತು ಅಭಿನಂದಿಸುತ್ತೇನೆ. ಅದೇ ರೀತಿಯಲ್ಲಿ ಈ ಸದನದಲ್ಲಿ ಹೊಸದಾಗಿ ಆಯ್ಕೆಯಾಗಿ, ಆಡಳಿತ ಪಕ್ಷದ ಸೂತ್ರವನ್ನು ಹಿಡಿದಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವೇಗೌಡರನ್ನು ಮತ್ತು ಅವರ ಮಂತ್ರಿಮಂಡಲವನ್ನೂ ಸಹ ಅಭಿನಂದಿಸುತ್ತೇನೆ. ನಂತರ ನಮ್ಮ ವಿರೋಧಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಶ್ರೀಮಾನ್ ಯಡಿಯೂರಪ್ಪನವರನ್ನೂ ಬಹಳ ಮುಕ್ತ ಕಂಠದಿಂದ ನಾನು ಅಭಿನಂದಿಸುತ್ತೇನೆ. ಇಲ್ಲಿ ನಾವು ಅನೇಕ ಬದಲಾವಣೆಗಳನ್ನು ಕಂಡಿದ್ದೇವೆ. ಅದರಲ್ಲಿ ಒಂದನೆಯದಾಗಿ ಬಹಳ ಚಿಕ್ಕ ವಯಸ್ಸಿನಲ್ಲಿ ಅಪಾರ ತಿಳುವಳಿಕೆ ಇರತಕ್ಕಂಥ ತಾವು ಈ ಅಧ್ಯಕ್ಷ ಪೀಠವನ್ನು ಅಲಂಕರಿಸಿರತಕ್ಕಂಥಾದ್ದು ಒಂದು ವಿಶೇಷ. ಇಲ್ಲಿಗೆ ಪಂಚೆ ಮತ್ತು ಜುಬ್ಬ ಹಾಕಿಕೊಂಡು ಮಾನ್ಯ ಮುಖ್ಯಮಂತ್ರಿಯವರು ಬಂದಿರುವುದು. ಇದೂ ಒಂದು ವಿಶೇಷ. ಕಚ್ಚೆ ಪಂಚೆ ಮತ್ತು ಜುಬ್ಬ ಹಾಕಿಕೊಂಡು ಅತ್ಯಂತ ಸರಳತೆಯಿಂದ ಕೂಡಿರತಕ್ಕಂಥ ಮುಖ್ಯಮಂತ್ರಿಯವರು ಬಂದಿರತಕ್ಕಂಥಾದ್ದು ಬಹಳ ವಿಶೇಷ. ಹಾಗೂ ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿ [illegible]ವುದು [illegible] ವಿಶೇಷ. [illegible]ಧರೆ

ಅವರು ಬರುತ್ತಾರೆ ಎಂದು ನಾನು ತಿಳಿದುಕೊಂಡಿರಲಿಲ್ಲ. ಆದ್ದರಿಂದ ಅದೂ ಸಹ ವಿಶೇಷ. ಮಾನ್ಯ ಬಂಗಾರಪ್ಪನವರು ನನ್ನ ಪಕ್ಕಕ್ಕೆ ಬಂದಿರುವುದು ಅದು ತೀರ ವಿಶೇಷ. 1967ರಲ್ಲಿ ನಾವೆಲ್ಲಾ ಪಕ್ಕದಲ್ಲಿದ್ದೆವು. ನಾನು, ಮಾನ್ಯ ಸಂಜೀಗೌಡರು ಮತ್ತು ಬಂಗಾರಪ್ಪನವರು ಅಲ್ಲಿ ಕುಳಿತಿದ್ದೆವು. ಈಗ ಮತ್ತೆ ವಾಪಸ್ಸು 1967ನೇ ಇಸವಿಗೆ ಹೋಗಿದ್ದೇವೆ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ಆದರೆ ನನ್ನ ಪಕ್ಕಕ್ಕೆ ಅವರು ಬಂದರಲ್ಲ ಎನ್ನುವ ಸಂತೋಷವನ್ನು ನಾನು ವ್ಯಕ್ತಪಡಿಸುತ್ತೇನೆ.

11.15 ಎ.ಎಂ.

1967ರ ಸಭೆ ಅದು ನಿಜಕ್ಕೂ ಬಹಳ ಸುವರ್ಣ ಯುಗದಲ್ಲಿ ಬರೆಯತಕ್ಕಂಥ ಸಭೆ. ಅದು ಸಾಮಾನ್ಯ ಸಭೆಯಲ್ಲ. ಸಾಹುಕಾರ್ ಚನ್ನಯ್ಯನವರು ನಮ್ಮ ಈ ಸಭೆಯಲ್ಲಿ ಕುಳಿತಿದ್ದ ದಿನ ನಿಜವಾಗಿಯೂ ಬಹಳ ಸಂತೋಷ. ಸಿದ್ದವೀರಪ್ಪನವರು ಮತ್ತು ಚನ್ನಬಸಪ್ಪನವರು ಎಲ್ಲರೂ ಈ ಪೀಠವನ್ನು ಅಲಂಕರಿಸಿದ್ದಾರೆ. ಇವರ ಜೊತೆ ಗೋಪಾಲಗೌಡರು ಇದ್ದರು. ಇದು ನಿಜವಾಗಿಯೂ ಸುವರ್ಣಯುಗ ಎಂದು ನೆನಪಿಸಿಕೊಳ್ಳುತ್ತೇನೆ. ಇಬ್ಬರು ವಿರೋಧ ಪಕ್ಷದ ನಾಯಕರಾಗಿ ಬಹಳ ಉನ್ನತವಾದ ಕೆಲಸ ಮಾಡಿರತಕ್ಕಂಥವರು ನಮ್ಮ ಈಗಿನ ನಾಯಕರಾದ ಶ್ರೀಮಾನ್ ದೇವೇಗೌಡರು ಮತ್ತು ಎಸ್. ಶಿವಪ್ಪನವರು. ಅವರನ್ನು ನಾವು ಪ್ರಮುಖವಾಗಿ ಈ ಸದನದಲ್ಲಿ ನೆನಪಿನಲ್ಲಿಡಬೇಕು. ಅಷ್ಟೇ ಮಧುರವಾಗಿ ಎಳೆ, ಎಳೆಯಾಗಿ ಕನ್ನಡವನ್ನು ಮೇಲ್ಮಟ್ಟಕ್ಕೆ ತಂದ ಒಬ್ಬ ಧೀಮಂತ ಶಕ್ತಿ ಶಾಂತಿವೇರಿ ಗೋಪಾಲಗೌಡರು ಅವರನ್ನು ನಾವು ಇವತ್ತು ನೆನೆಯುವಂತಹ ಪರಿಸ್ಥಿತಿ ನಿಜಕ್ಕೂ ಇದೆ. ಸಮಾಜವಾದಿ ಸಿದ್ಧಾಂತದಲ್ಲಿ ಅಷ್ಟೇ ಅಪಾರವಾದಂತಹ ತಿಳುವಳಿಕೆಯನ್ನು ಹೊಂದಿರತಕ್ಕಂಥ ನಮ್ಮ ಉಪ ಮುಖ್ಯಮಂತ್ರಿಗಳಾದ ಶ್ರೀಮಾನ್ ಜೆ.ಹೆಚ್. ಪಟೇಲ್‌ರಿಗೂ ಅಪಾರವಾದ ಬುದ್ಧಿವಂತಿಕೆ ಇದೆ. ಅದರಲ್ಲಿ ಎರಡು ಅಭಿಪ್ರಾಯ ಇಲ್ಲ. ಅವರಿಗೆ ಕೊಟ್ಟಿರತಕ್ಕಂಥ ಇಲಾಖೆ ಅವರ ಬುದ್ಧಿವಂತಿಕೆಗೆ ಕಡಿಮೆ ಎನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಬಹುಶಃ ದೇವೇಗೌಡರು ಅರಿತುಕೊಂಡಿರಬಹುದು, ಅವರು ಬೆಳಿಗ್ಗೆ 12 ಗಂಟೆಗೆ ಏಳುತ್ತಾರೆ ಎಂದು ಅವರಿಗೆ ಹೆಚ್ಚಿನ ಕೆಲಸ ಕೊಡಲಿಲ್ಲ ಅಂತ ನನಗನ್ನಿಸುತ್ತದೆ. ಆದರೂ ಅಪಾರವಾದ ಬುದ್ಧಿವಂತಿಕೆ ವಿಶಾಲತೆ ಮತ್ತು ನಮ್ಮ ಲೋಕಸಭೆಯಲ್ಲಿ ಪ್ರಪ್ರಥಮವಾಗಿ ಕನ್ನಡದಲ್ಲಿ ಮಾತನಾಡಿದವರು. ಮತ್ತು ನಾನು ಮತ್ತು ಬಂಗಾರಪ್ಪನವರು ಪಾರ್ಲಿಮೆಂಟಿನ ಮುಂದೆ ಕಪ್ಪು ಬಾವುಟ ಹಿಡಿಯುವ ಸಂದರ್ಭ ಬಂದಾಗ ಕೂಡಲೇ ಕಪ್ಪು ಬಾವುಟ ಹಿಡಿಯಬೇಕು ಎಂದು ಹೇಳಿದ ಸಂದರ್ಭ ಇವು ನೆನಪಿನ ದಿನಗಳು. ನಾವು ಅಲ್ಲಿ ಸೆರೆಮನೆಯಲ್ಲಿದ್ದಾಗ ಅವರು ನಮಗೆ ಬಿಡಿಸುವುದಕ್ಕೆ ವ್ಯವಸ್ಥೆ ಮಾಡಿಕೊಟ್ಟಿದರು. ಇದು ಬಹಳ ಅತ್ಯಂತ ವಿಶೇಷ. ತಾವು ಅಧ್ಯಕ್ಷರಾಗಿ ಈ ಒಂದು ಪೀಠದಲ್ಲಿ ಅಲಂಕರಿಸಿತಕ್ಕಂಥಾದ್ದು ನಮಗೆ ನಿಜವಾಗಿಯೂ ಅತ್ಯಂತ ಸಂತೋಷವಾಗಿದೆ. ಶ್ರೀಮಾನ್ ಖರ್ಗೆಯವರು ನಿಮಗೆ ಬೇರೆ ಕೆಲಸ ಕೊಡಬೇಕಾಗಿತ್ತು ಎನ್ನತಕ್ಕಂಥ ಮಾತನ್ನು ಅವರು ಏನು ಹೇಳಿದರು, ನಾನು ಅದನ್ನು ಅನುಮೋದಿಸಬಹುದು, ತಾವು ಆ ಪೀಠಕ್ಕೆ ಬರತಕ್ಕಂಥ ವಿಚಾರ ಶಕ್ತಿಯನ್ನು ನಾನು ಒಪ್ಪಿದ್ದೇನೆ. ನಾನು ನಿಮ್ಮ ಜೊತೆಯಲ್ಲಿ ಶಾಸನ ಸಭೆಯಲ್ಲಿ ಇಲ್ಲದೆ ಇದ್ದರೂ ನಿಮ್ಮ ಶಾಸನ ಸಭೆಯ ಕಲಾಪದಲ್ಲಿ ತಾವು ಬಹುಶಃ ಪ್ರಗತಿಪರ ಚಿಂತನೆಗಳ ಬಗ್ಗೆ ಸಮಾಜವಾದಿ ಸಿದ್ಧಾಂತಗಳ ಬಗ್ಗೆ ಕೆಲವು ವಿಚಾರಗಳನ್ನು ತಾವು ಪ್ರಸ್ತಾಪ ಮಾಡಿರತಕ್ಕಂಥಾವನ್ನು ನಿಜವಾಗಿಯೂ ನಾನು ಬಹಳ ಮೆಚ್ಚಿದ್ದೇನೆ. ತಾವು ಕೇಳಿ ಮಾಡಿಸಿಕೊಂಡು ಆ ಪೀಠಕ್ಕೆ ಬಂದಿದ್ದು ಅಲ್ಲ. ನನಗೆ ಗೊತ್ತಿದೆ. ಒಂದೇ ಸಲ ರಮೇಶ್‌ಕುಮಾರ್ ರಮೇಶ್‌ಕುಮಾರ್ ಎಂಬ ಹೆಸರು ತಕ್ಷಣ ಕೇಳಿ ಬಂದಿತು. ಕೆಲವರಲ್ಲಿ ಅಧ್ಯಕ್ಷರಾಗತಕ್ಕಂತಹ ಶಕ್ತಿ ವಯಸ್ಸು ಮತ್ತು ವಿಚಾರ ಇದ್ದರೂ ಅವರೆಲ್ಲರೂ ಸಚಿವರಾಗಬೇಕೆಂದು ಹೇಳಿ ಒತ್ತಡ ತಂದರು ಅಂತ ಕಾಣುತ್ತಾನೆ. ಆದ್ದರಿಂದ ತಾವು ಆ ಪೀಠಕ್ಕೆ ಕೊನೆಗೆ ಉಳಿದವರಲ್ಲಿ ಸಿಕ್ಕಿದವರು ಅಂತ ಕಾಣುತ್ತದೆ. ಆದುದರಿಂದ ಇದು ವಿಧಿಯಿಲ್ಲದೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಹೇಳುವಾಗ ನೀವು ಒಪ್ಪಲಿಲ್ಲ, ಈಗ ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:- ತಾವು ವಿಧಿಯಿಲ್ಲದೆ ಅಧ್ಯಕ್ಷರಾದರೆ ಅದು ನಿಜಕ್ಕೂ ದೇವರು ನಿಮಗೆ ವರವನ್ನು ಕೊಟ್ಟಿದ್ದಾನೆ. ತಾವು ಬೆಳೆಯುವುದಕ್ಕೆ ಈ ಶಾಸನಸಭೆ ಸೂಕ್ತವಾಗಿದೆ. ಇದಕ್ಕೆ ಒಂದು ಮಹತ್ತರವಾದ ಚರಿತ್ರೆ ಇದೆ. ಈ ಸದನವನ್ನು ನಿರ್ಮಾಣ ಮಾಡಿದಂತಹ ಮಹನೀಯ ಈ ರಾಜ್ಯದ, ದೇಶದ, ಒಬ್ಬ ಅತ್ಯಂತ ಮೇರು ಪರ್ವತದಂತಹ ಎತ್ತರವಾಗಿ ಬೆಳೆದಂತಹ ದಿಟ್ಟ ಆಡಳಿತಗಾರರಾಗಿದ್ದಂತಹ ದಿವಂಗತ ಮಾಜಿ ಮುಖ್ಯ ಮಂತ್ರಿ ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಈ ಸದನವನ್ನು ಬಹಳ ಅರ್ಥಪೂರ್ಣವಾಗಿ, ಬಹಳ ವಿಶಿಷ್ಟವಾದಂತಹ ಎತ್ತರದಲ್ಲಿ ಈ ಸದನವನ್ನು ಕಟ್ಟಿಸಿದ್ದಾರೆ. ತಾವು ಕುಳಿತಿರತಕ್ಕ ಪೀಠದ ಮೇಲೆ ಅಶೋಕ ಸ್ತಂಭ, ಅದರ ಮೇಲೆ ತಕ್ಕಡಿಯ ಗುರುತು ಇದರ ಅರ್ಥ ನಿಜಕ್ಕೂ ಈ ಸದನ ನ್ಯಾಯ ಸತ್ಯಕ್ಕೆ ಪರಮ ಪವಿತ್ರವಾದಂತಹ ಸ್ಥಾನ ಈ ಸದನದ ಹೊರಗಡೆ ಸರ್ಕಾರದ ಕೆಲಸ ದೇವರ ಕೆಲಸ ಅಂತ ಬರೆಸಿದಂತಹ ಒಂದು ಶಕ್ತಿ ಶ್ರೀಮಾನ್ ಹನುಮಂತಯ್ಯನವರದು. ಅವರ ಪರಂಪರೆ ಈ ಸದನದ ಒಂದು ವಿಶಿಷ್ಟತೆ. ಈ ಸದನದಲ್ಲಿ ನಾನು ಅನೇಕ ಜನ ಅಧ್ಯಕ್ಷರುಗಳನ್ನು ಕಂಡಿದ್ದೇನೆ, ಮತ್ತು ನೋಡಿದ್ದೇನೆ.

ಕಂಡಿರತಕ್ಕ ಅಧ್ಯಕ್ಷರು ಶ್ರೀಮಾನ್ ವೈಕುಂಠ ಬಾಳಿಗಾರವರು, ಆ ಕಾಲದಲ್ಲೂ ಸಹ ವೈಕುಂಠ ಬಾಳಿಗಾರವರು ಎಂದು ಹೇಳಿದರೆ ನಾನು ಆ ಪದವನ್ನು ಉಪಯೋಗಿಸದೆ ಇದ್ದರೂ ಆ ಪೀಠದಲ್ಲಿ ಅಧ್ಯಕ್ಷರಾಗಿ ಕುಳಿತಾಗ ಸದಸ್ಯರುಗಳಾದ ನಮಗೆ ಭಯ ಭೀತಿ ಇತ್ತು. ಅವರು ಎದ್ದರೆ ಕುಳಿತರೆ, ಏನು ಎದ್ದು ಬಂದು ನಮ್ಮ ಮೇಲೆ ಬೀಳುತ್ತಾರೋ ಎಂಬ ಭಯ ಭೀತಿ ಇತ್ತು. ಒಂದು ಸಾರಿ ನಮ್ಮ ಶಾಂತವೇರಿ ಗೋಪಾಲಗೌಡರು ಮಾತನಾಡುತ್ತಾ ತಮ್ಮಿಂದ ಸ್ವಾಮಿ ನನಗೆ ರಕ್ತದ ಒತ್ತಡ ಜಾಸ್ತಿ ಎಂದು ಹೇಳಿದರು. ಅಂದರೆ ಅವರಿಗೂ, ಇವರಿಗೂ ಬಹಳ ಅಪಾರವಾದಂಥ ವಾಗ್ವಾದಗಳು ನಡೆಯುತ್ತಿತ್ತು. ಒಂದು ಸಾರಿ ಅವರು ಎಲ್ಲಿಯವರೆಗೆ ಹೋದರು ಎಂದು ಹೇಳಿದರೆ, ಶ್ರೀ ಜಯಚಾಮರಾಜೇಂದ್ರ ಒಡೆಯವರ್‌ರವರು ರಾಜ್ಯಪಾಲರಾಗಿದ್ದಾಗ ಅದೇ ಪೀಠದಲ್ಲಿ ರಾಜ್ಯಪಾಲರ ಭಾಷಣವನ್ನು ಮಾಡಿದಾಗ ಶ್ರೀಮಾನ್ ಶಾಂತವೇರಿ ಗೋಪಲಗೌಡರವರು ಈ ಭಾಷಣದ ಪ್ರತಿಯನ್ನು ಆ ಸ್ಥಳದಲ್ಲಿ ಹೋಗಿ ತುಳಿದು, ಈ ಭಾಷಣವನ್ನು ತುಳಿಯಬಹುದು ಎಂದು ಹೇಳಿದರು, ಅವರನ್ನು ಈ ಸಭೆಯಿಂದ ಹೊರಗೆ ಹಾಕಿದರು, ಅಲ್ಲದೆ ಇದರ ಸುತ್ತಲೂ ಸಹ ಬರಬಾರದು ಎಂದು ಹೇಳಿದರು. ಜೊತೆಗೆ ಅವರು ಸಂಬಳವನ್ನು ತೆಗೆದುಕೊಳ್ಳಬಾರದು ಎಂದು ಹೇಳಿದರು. ಆ ಕಾಲದಲ್ಲಿ ಶಾಸಕರುಗಳಾಗಿದ್ದವರಿಗೆ ಸಂಬಳ ನೂರೈವತ್ತು ರೂಪಾಯಿಗಳು. ನಾವು ಶಾಸಕರಾಗಿ ಬಂದಾಗ ಇನ್ನೂರೈವತ್ತು ರೂಪಾಯಿಗಳು, ಅಂದರೆ ದಿನಕ್ಕೆ ಹದಿನೈದು ರೂಪಾಯಿಗಳು. ಆ ಸಂದರ್ಭದಲ್ಲಿ ಈಗ ಮುಖ್ಯಮಂತ್ರಿಗಳಾಗಿರತಕ್ಕಂಥ ಶ್ರೀಮಾನ್ ದೇವೇಗೌಡರು ಇನ್ನಿತರ ಅನೇಕ ಮುಖಂಡರುಗಳು ಅವರನ್ನು ಹೊರಗಡೆ ಹಾಕಿರತಕ್ಕದ್ದನ್ನು ರದ್ದು ಪಡಿಸಬೇಕೆಂದು ಮತ್ತೆ ಒಂದು ನಿರ್ಣಯವನ್ನು ಮಾಡಿ, ಈ ಸದನಕ್ಕೆ ಕರೆದುಕೊಳ್ಳಬೇಕಾದರೆ ಅನೇಕ ಮನವಿಗಳನ್ನು ಸಲ್ಲಿಸಿ ಈ ಸದನಕ್ಕೆ ಕರೆಸಿಕೊಂಡರು. ಈ ಕಾರಣ ಏಕೆ ಹೇಳುತ್ತಿದ್ದೇನೆ ಎಂದು ಹೇಳಿದರೆ ಅವತ್ತಿನ ಪರಿಸ್ಥಿತಿ, ವ್ಯವಸ್ಥೆ ಆ ರೀತಿ ಇತ್ತು. ಆಗ ನಾವು ತೀವ್ರವಾದಂಥ ಗದ್ದಲವನ್ನು ಮಾಡುತ್ತಾ ಇದ್ದಂತಹವರು. ಇವತ್ತು ನೆನಸಿಕೊಳ್ಳಬೇಕು ಸಂಸದೀಯ ಸಚಿವರಾಗಿ ಮೈಸೂರಿನ ಶ್ರೀ ಕೆ. ಪುಟ್ಟಸ್ವಾಮಿರವರು ಬಹಳ ಶಕ್ತಿಪೂರ್ಣವಾಗಿ ಈ ಸದನದ ಆಸ್ತಿಯಾಗಿ ಕೆಲಸ ಮಾಡಿದಂಥವರು. ಶ್ರೀಮಾನ್ ಶಿವಪ್ಪನವರು ಒಬ್ಬ ಒಳ್ಳೆಯ ವಿರೋಧ ಪಕ್ಷದ ನಾಯಕರಾಗಿದ್ದರು. ಒಮ್ಮೆ ಪುಟ್ಟಸ್ವಾಮಿಯವರು ಶಿವಪ್ಪನವರನ್ನು ಕರೆದು ಸ್ವಾಮಿ ಶಿವಪ್ಪನವರೆ, ನಂಜೇಗೌಡರು, ಬಂಗಾರಪ್ಪನವರು, ವಾಟಾಳ್ ನಾಗರಾಜ್‌ರವರು ಈ ಮೂರು ಜನರನ್ನು ಸ್ವಲ್ಪ ಸದನವೆಲ್ಲಾ ಒಂದೆರಡು ಗಂಟೆ ಪ್ರಶ್ನೋತ್ತರ ಕಾಲ ಮುಗಿದ ಮೇಲೆ ಒಳಗಡೆ

ಕರೆಯಿಸಿ ಇಲ್ಲದಿದ್ದರೆ ಸದನವೇ ನಡೆಯುವುದಿಲ್ಲ ಎಂದು ಹೇಳಿದರು. ಅಂದರೆ ಆ ಪ್ರೀತಿ ವಿಶ್ವಾಸದಿಂದ ನಾವು ಬಂದನಂತರ ಏನಾದರೂ ಗದ್ದಲ ಮಾಡುತ್ತೇವೆ ಎಂದು ಹಾಗೆ ಮಾಡಿದರು. ಆಗ ನಮ್ಮ ಪಕ್ಕದಲ್ಲಿ ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರು ಇದ್ದರು, ಮತ್ತು ಪುಟ್ಟದಾಸ್‌ರವರೂ ಇದ್ದರು. ಕಡೂರು ತಮ್ಮಯ್ಯನವರು ಒಂದು ದಿನ ಮಾನ್ಯ ಅಧ್ಯಕ್ಷರನ್ನು ಕೇಳಿದರು. ಸ್ವಾಮಿ ನನಗೆ ಬೇರೆ ಒಂದು ಪೀಠವನ್ನು ನೀವು ಕೊಡಬೇಕು ಏಕೆಂದರೆ ಇಲ್ಲಿ ಬಂಗಾರಪ್ಪನವರು ಮಾತೆತ್ತಿದರೆ ಸಮಾಜವಾದಿ, ಸಮಾಜವಾದಿ ಎಂದು ಅವರು ಹೇಳುತ್ತಾರೆ, ಆ ಕಡೆ ನಂಜೇಗೌಡರು ನೀರಾವರಿ ನೀರಾವರಿ ಎಂದು ಕೂಗಿಕೊಳ್ಳುತ್ತಾರೆ. ಈ ಕಡೆ ವಾಟಾಳ್ ನಾಗರಾಜ್‌ರವರು ಕನ್ನಡ ಕನ್ನಡ ಎಂದು ಕೂಗಿಕೊಳ್ಳುತ್ತಾರೆ, ಆ ಪುಟ್ಟದಾಸ್‌ರವರು ಹರಿಜನ ಗಿರಿಜನ ಎಂದು ಹೇಳುತ್ತಿರುತ್ತಾರೆ, ಇದರಿಂದ ನನ್ನ ಪರಿಸ್ಥಿತಿ ಸಾಕಾಗಿ ಹೋಗಿದೆ. ಈ ಜಯಪ್ರಕಾಶ್ ನಾರಾಯಣ್‌ರವರು ತೀರಾ ಎಲ್ಲದಕ್ಕೂ ಕೈಹಾಕುತ್ತಾರೆ ನನಗೆ ಬೇರೆ ಪೀಠವನ್ನು ಕೊಡಿ ಎಂದು ಕೇಳಿಕೊಂಡಿದ್ದು ಉಂಟು. ಅಂತಹ ದಿನಗಳ ಪರಿಸ್ಥಿತಿಗಳನ್ನು ಈ ಸಂದರ್ಭದಲ್ಲಿ ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಶ್ರೀಮಾನ್ ವೈಕುಂಠ ಬಾಳಿಗಾರವರು ನಿಧನರಾದ ನಂತರ ಕೊಠಾವಳೆರವರು ಆ ಪೀಠವನ್ನು ಅಲಂಕರಿಸಿದರು. ಅವರು ಬಹಳ ವಿದ್ವತ್‌ಪೂರ್ಣವಾದಂತ ಪಾಂಡಿತ್ಯವನ್ನು ಪಡೆದಂಥವರು ಅದರಲ್ಲಿ ಏನೂ ಅನುಮಾನವಿಲ್ಲ. ಆದರೆ ಅವರು ಬಹಳ ಕೋಪಿಷ್ಟರು. ಸ್ವಲ್ಪ ಹೆಚ್ಚು ಕಡಿಮೆ ನನ್ನನ್ನು ನಾಲ್ಕು ಸಾರಿ ಹೊರಗಡೆ ಹಾಕಿದರು. ಆಗ ಅವರು ನನ್ನನ್ನು ಹೊರಗಡೆ ಹಾಕಿದರೂ ನಾನು ಹೋಗಲಿಲ್ಲ. ತಮ್ಮ ಪೀಠದ ಹಿಂದೆ ಕುಳಿತಿರತಕ್ಕಂಥ ರಕ್ಷಣಾ ಅಧಿಕಾರಿಯನ್ನು ಕರೆದು ಹೊರಗಡೆ ಕಳುಹಿಸಲೇಬೇಕು ಎಂದು ಹೇಳಿದರು. ನಾನು ಹೋಗಲಿಲ್ಲ, ಎತ್ತಿ ಹೊರಗಡೆ ಹಾಕಿ ಎಂದು ಹೇಳಿದರು. ಒಂದು ಕಡೆ ನನ್ನನ್ನು ಹೊರಗಡೆ ಬಿಡುವುದಿಲ್ಲ ಎಂದು ಕೊಣಂದೂರು ಲಿಂಗಪ್ಪ, ಮತ್ತು ಕಾಗೋಡು ತಿಮ್ಮಪ್ಪ, ಇವರು ಒಂದು ಕಡೆ ನನ್ನ ಕಾಲೆಳೆಯುತ್ತಾರೆ, ಅವರು ಒಂದು ಕಡೆ ಹೊರಗೆ ಎಳೆಯುತ್ತಾರೆ. ಒಟ್ಟಿನಲ್ಲಿ ನನ್ನನ್ನು ಒಂದು ವಸ್ತುವನ್ನಾಗಿ ಆ ಕಾಲದಲ್ಲಿ ಮಾಡಿಕೊಂಡು ಬಿಟ್ಟರು. ಇದನ್ನು ನಾನು ತಮಗೆ ಏಕೆ ಹೇಳುತ್ತಿದ್ದೇನೆಂದರೆ ಇಂತಹ ಪರಿಸ್ಥಿತಿ ತಮಗೆ ಬಾರದೆ ಇರಲಿ ಎಂಬ ಒಂದು ನೆನಪನ್ನು ತಮಗೆ ಮಾಡಿಕೊಡುತ್ತಿದ್ದೇನೆ. ಆದರೆ ಸ್ವಾಮಿ, ವೈಕುಂಠ ಬಾಳಿಗಾರವರನ್ನು ನೋಡಿದ್ದಾಯಿತು. ಕೊಠಾವಳೆಯವರನ್ನು ನೋಡಿದ್ದಾಯಿತು. ಶ್ರೀಮತಿ ನಾಗರತ್ನಮ್ಮರವರು ಕೂಡ ಈ ಸಭೆಯ ಉಪ ಮುಖ್ಯಮಂತ್ರಿಗಳ ರೀತಿ ಅವರು ಕಾನೂನನ್ನು ನೋಡದೆ ಇದ್ದರೂ ಸಹ ಈ ಸಭೆಯನ್ನು ಅರ್ಥ ಮಾಡಿಕೊಂಡು, ಮಹಿಳೆಯಾಗಿ ಈ ಸಭೆಯಲ್ಲಿ ಬಹಳ ಉನ್ನತವಾದಂತ ಕೆಲಸವನ್ನು ಮಾಡಿದರು, ಅವರ ಬಗ್ಗೆ ನಾನು ಪ್ರಾಮಾಣಿಕವಾದ ಮಾತನ್ನು ಹೇಳಬೇಕಾಗುತ್ತದೆ.

ತಮಗೆ ಹೇಳುವುದಾದರೆ, ನಮ್ಮ ಮಾನ್ಯ ಡಿ.ಬಿ. ಚಂದ್ರೇಗೌಡರು ಚೆನ್ನಾಗಿ ಕೆಲಸ ಮಾಡಿದರು. ಅವರನ್ನು ನಾವು ನೆನಪಿಸಿಕೊಳ್ಳಬೇಕು. ಅವರನ್ನು ಸೋಲಿಸಿ ಈಗ ಯಾರೋ ಬಂದಿರಬಹುದು. ಆ ಪ್ರಶ್ನೆ ಬೇರೆ. ಈ ಸದನಕ್ಕೆ ಅವರು ಒಂದು ಆಸ್ತಿ. ಶ್ರೀ ಡಿ.ಬಿ. ಚಂದ್ರೇಗೌಡರು ಈ ಸದನದ ನಿಯಮಗಳನ್ನು ಮಾಡುವುದರಲ್ಲಿ ನಿಜವಾಗಿಯೂ ಶಕ್ತಿಪೂರ್ಣವಾಗಿ ಕೆಲಸ ಮಾಡಿದ್ದಾರೆ. ಇವೊತ್ತು ಯಾವ ರೂಪದಲ್ಲಾಗಲಿ ಅವರ ಸಲಹೆ ಸೂಚನೆಗಳನ್ನು ಸಹಕಾರವನ್ನೂ ತೆಗೆದುಕೊಳ್ಳಬೇಕು. ಅವರು ಸೋತ ತಕ್ಷಣ ಅವರನ್ನು ಕಡೆಗಾಣಿಸತಕ್ಕ ರೀತಿನೀತಿಗಳಿಗೆ ಹೋಗತಕ್ಕದ್ದು ಒಳ್ಳೆಯದಲ್ಲ. ಮಾನ್ಯ ಕೆ.ಹೆಚ್. ರಂಗನಾಥ್‌ರವರು ಮತ್ತು ಮಾನ್ಯ ಡಿ.ಬಿ. ಚಂದ್ರೇಗೌಡರು ಆ ಪೀಠದಲ್ಲಿ ಕುಳಿತು ಕೆಲಸವನ್ನು ಮಾಡಿರತಕ್ಕವರು. ಆದರೆ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಅಧ್ಯಕ್ಷರಾಗಿದ್ದವರು ಮಾನ್ಯ ಕೌಜಲಗಿಯವರು. ಅಂಥ ಕಷ್ಟ ನಿಮಗೆ ತಪ್ಪಲಿ. ನಮ್ಮ ಜೀವನದ ಇತಿಹಾಸದಲ್ಲಿ ಅಂಥ ಕಷ್ಟ ಬರಲಿಲ್ಲ. ಆಡಳಿತ ಪಕ್ಷದ ಸದಸ್ಯರೇ ಧರಣಿ ಮಾಡಿದ್ದು ಇತಿಹಾಸದಲ್ಲೇ ಮೊದಲು. ನೀವು ಏನಾದರೂ ಅವರ ತಂಟೆಗೆ ಹೋಗಬೇಡಿ, ನೀವು ನಮ್ಮ ಅಧ್ಯಕ್ಷರಿಗೆ ಏನಾದರೂ ಆ ರೀತಿ ತೊಂದರೆ ಕೊಟ್ಟುಬಿಟ್ಟೀರಿ.

ಶ್ರೀ ಸಿದ್ಧರಾಮಯ್ಯ:– ಆ ಪರಿಸ್ಥಿತಿ ಉದ್ಭವವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಅಂಥ ಪರಿಸ್ಥಿತಿ ಉದ್ಭವವಾಗುವುದಿಲ್ಲ ಎಂದು ನೀವು ಹೇಳುತ್ತಿದ್ದೀರಿ. ಇದೇ ರೀತಿ ಅವರು ಕೂಡ ಹೇಳುತ್ತಿದ್ದರು.

ಶ್ರೀ ಸಿದ್ಧರಾಮಯ್ಯ:– ಆ ರೀತಿ ಪರಿಸ್ಥಿತಿ ಇನ್ನು ಮುಂದೆ ಉದ್ಭವವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಆ ರೀತಿಯ ಪರಿಸ್ಥಿತಿ ತಮಗೆ ಒದಗದೇ ಇರಲಿ ಎಂದು ನಾನು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತೇನೆ. ತಮಗೆ ತೊಂದರೆ ಕೊಡದಿರಲಿ ಎಂದು ದೇವರಲ್ಲಿ ನಂಬಿಕೆ ಇಟ್ಟು ಪ್ರಾರ್ಥನೆ ಮಾಡುತ್ತೇನೆ. ಅಂಥ ಪರಿಸ್ಥಿತಿಗೆ ಅನೇಕ ಕಾರಣಗಳಿವೆ.

ಶ್ರೀ ಎಂ. ಸಿ. ನಾಣಯ್ಯ:– ನಿಮ್ಮಿಂದ ಆ ಪರಿಸ್ಥಿತಿ ನಿರ್ಮಾಣ ಆಗದೇ ಇರಲಿ ಎಂದು ನಮ್ಮ ಕಳಕಳಿ.

ಶ್ರೀ ವಾಟಾಳ್ ನಾಗರಾಜ್:– ನಾನು ಮುಖ್ಯ ಮಂತ್ರಿಯವರನ್ನು ತೆಗೆಯಿರಿ, ತಮ್ಮನ್ನು ತೆಗೆಯಿರಿ ಎಂದು ಧರಣಿ ಮಾಡುವುದಿಲ್ಲ. ನನ್ನ ಧರಣಿ ಏನಿದ್ದರೂ ರಾಜ್ಯದ ಜನತೆಗೆ ಸಂಬಂಧಪಟ್ಟ ಧರಣಿಯಾಗಿರುತ್ತದೆ. ತಮಗೆ ನಾನು ಹೇಳುವುದೇನೆಂದರೆ ಯಾವುದೇ ಸಂದರ್ಭ ಬಂದು ನೀವು ಮಾನ್ಯ ಮುಖ್ಯಮಂತ್ರಿಯವರ ವಿರುದ್ಧ ಧರಣಿ ಮಾಡೀರಿ ಎಂದು ಅಷ್ಟೆ. ಐದು ವರ್ಷಗಳ ಕಾಲ ಈ ಸರ್ಕಾರ ಜೀವಂತವಾಗಿರಬೇಕೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ಮಾತನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಯಾವುದೇ ಮುಚ್ಚುಮರೆಯಿಂದ ಹೇಳುತ್ತಿಲ್ಲ. ನನಗೆ ರಾಜಕೀಯ ಮಾಡಬೇಕೆಂದೇನೂ ಇಲ್ಲ. ನಿಮ್ಮಲ್ಲಿ 112 ಮಂದಿ ನಮ್ಮಲ್ಲಿ 108 ಮಂದಿ ಇದ್ದಾರೆ.

ಶ್ರೀ ಸಿದ್ಧರಾಮಯ್ಯ:– ಹಾಗಿದ್ದರೆ ಚೆನ್ನಾಗಿರುವುದು.

ಶ್ರೀ ವಾಟಾಳ್ ನಾಗರಾಜ್:– ನನಗೆ ಅನುಮಾನ ಇದೆ ಎಂದು ಹೇಳುವುದಿಲ್ಲ. ನಿಮಗೂ ಅನುಮಾನ ಇದೆ ಎಂದು ಅಂದುಕೊಂಡಿಲ್ಲ. ಈ ಅನುಮಾನ ಬರುವುದು ಮೊದಲ ದಿವಸ ಅಲ್ಲ.

ಶ್ರೀ ಜೆ.ಹೆಚ್. ಪಟೇಲ್:– ಸನ್ಮಾನ್ಯ ಸದಸ್ಯರ ಕಳಕಳಿ ಕನ್ನಡದ ಬಗ್ಗೆ ಇದೆ. ಅದು ಎಲ್ಲರಿಗೂ ಗೊತ್ತಿರುವ ವಿಷಯ. ಈ ಸರ್ಕಾರಕ್ಕೂ ಮಾನ್ಯ ಸದಸ್ಯರಿಗೆ ಕನ್ನಡದ ಬಗ್ಗೆ ಎಷ್ಟು ಕಳಕಳಿ ಇದೆ ಅಷ್ಟೇ ಕಳಕಳಿ ಇದೆ. ಆದುದರಿಂದ ತಮ್ಮನ್ನು ಹೊರಗೆ ಹಾಕುವ ಪರಿಸ್ಥಿತಿ ಉದ್ಭವವಾಗುವುದಿಲ್ಲ, ಮತ್ತು ಅಂಥ ಪ್ರಸಂಗ ಬರದು ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಸದ್ಯ, ನನಗೆ ಒಬ್ಬರು ಮಾನ್ಯ ಉಪಮುಖ್ಯಮಂತ್ರಿಗಳು ಬೆಂಬಲ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮೌನವಾಗಿದ್ದರೂ ಅವರ ಬೆಂಬಲ ಇದೆಯೆಂದು ಅಂದುಕೊಂಡಿದ್ದೇನೆ. ಆದುದರಿಂದ ಮಾನ್ಯ ಅಧ್ಯಕ್ಷರೆ, ಮತ್ತೊಂದು ಅತ್ಯಂತ ನೋವಿನ ಪ್ರಸಂಗ ಏನೆಂದರೆ, ಯಾವಾಗಲೂ ನಮ್ಮ ಜೊತೆಯಲ್ಲಿ ಇದ್ದಂತ ಅನೇಕ ಸದಸ್ಯರುಗಳು ಇವೊತ್ತು ಆ ಕಡೆ ಹೋಗಿದ್ದಾರೆ. ಅವರಲ್ಲಿ ಮಾನ್ಯ ಸಿಂಧ್ಯರವರು, ನಮ್ಮ ಬೈರೇಗೌಡರು, ಮಾನ್ಯ ಜಾಲಪ್ಪನವರು, ಮಾನ್ಯ ಕೌಜಲಗಿಯವರು, ಡಾ: ಜೀವರಾಜ ಆಳ್ವರವರು, ಪಾಪ ಎಲ್ಲೋ ಸ್ವಲ್ಪ ವ್ಯತ್ಯಾಸ ಆಗಿದೆ ಆ ವ್ಯತ್ಯಾಸ ಆಗದೇ ಇದ್ದಿದ್ದರೆ ಜೀವರಾಜ ಅಲ್ಲೇ. ಏನೋ ವ್ಯತ್ಯಾಸವಾಗಿದೆ. ಚಿಂತೆ ಇಲ್ಲ. ಡಾ: ಜೀವರಾಜ ಆಳ್ವರವರು ನಿಮ್ಮ ಕಡೆ ಇದ್ದಿದ್ದರೆ ಬಹಳ ಸಂತೋಷವಾಗುತ್ತಿತ್ತು. ಇವೊತ್ತಿನ ದಿವಸ ನಿಮ್ಮ ಮಂತ್ರಿಮಂಡಲದಲ್ಲಿ ಅನೇಕ ಜನ ಅನುಭವಸ್ಥರು ಬಹಳ ಒಳ್ಳೆಯ ಮುತ್ಸದ್ದಿಗಳು ಇದ್ದಾರೆ. ಇದರ ಬಗ್ಗೆ ನನ್ನ ತಕರಾರು ಏನೂ ಇಲ್ಲ. ಆದರೆ ನನಗೆ ಏನು ಅನ್ನಿಸಬಹುದು ? ಜೊತೆ ಬಿಟ್ಟು ಹೋದರಲ್ಲ, ಮಿತ್ರದ್ರೋಹ ಮಾಡಿದರಲ್ಲ. ನೀವು ಮಿತ್ರದ್ರೋಹ ಮಾಡಿದ್ದೀರಿ. ಆ ರೀತಿ

ಮಾಡಬಹುದೆ ? ಮಿತ್ರದ್ರೋಹ ಮಾಡಿದವರು ಏಳೆಂಟು ಮಂದಿ. ಮಾನ್ಯ ಯಡಿಯೂರಪ್ಪನವರು ಎಷ್ಟೋ ಸಲ ನನ್ನ ಬೆಂಬಲ ತೆಗೆದು ಕೊಂಡಿದ್ದಾರೆ. ನಾನು ಹಗಲು ರಾತ್ರಿ ಅವರಿಗೆ ಬೆಂಬಲ ಕೊಟ್ಟೆ. ಮಾತು ಎತ್ತಿದರೆ ಬೆಂಬಲ ತೆಗೆದುಕೊಂಡಿದ್ದಾರೆ. ಇವೊತ್ತು ಅವರು ಆ ಕಡೆ ಹೋದರು. ಅವರು ಕಣ್ಣಿಗೆ ಕಂಡ ಹಾಗೆ ಮಿತ್ರದ್ರೋಹ ಮಾಡಿದ್ದಾರೆ. ಆದುದರಿಂದ ತಮ್ಮ ಬುದ್ಧಿವಂತಿಕೆಯಿಂದ ಈ ಮಂತ್ರಿಮಂಡಲದಲ್ಲಿ ಒಳ್ಳೆಯವರನ್ನು ಸೇರಿಸಿಕೊಂಡಿದ್ದೀರಿ. ನಿಜವಾಗಿಯೂ ಬಹಳ ಒಳ್ಳೆಯ ತಿಳಿವಳಿಕೆ ಇರತಕ್ಕಂಥ, ಎತ್ತರದ ಬುದ್ಧಿವಂತಿಕೆ ಇರತಕ್ಕಂಥವರು ತಮ್ಮ ಮಂತ್ರಿಮಂಡಲದಲ್ಲಿ ಇದ್ದಾರೆ.

ಶ್ರೀಮಾನ್ ಸಿದ್ಧರಾಮಯ್ಯನವರು, ವೈಜನಾಥ ಪಾಟೀಲ್‌ರು ಮಂತ್ರಿಗಳಾಗಿದ್ದಾರೆ. ಮಾನ್ಯ ನಾಣಯ್ಯನವರು ಮೊದಲನೆಯ ದಿವಸವೇ ವಿಧಾನಪರಿಷತ್ತಿನ ವಿರೋಧಪಕ್ಷದ ನಾಯಕರ ರೀತಿಯಲ್ಲಿ ಅವರು ಧ್ವನಿ ಶುರು ಮಾಡಿದ್ದರು. ಅವರ ಧ್ವನಿ ಬದಲಾವಣೆಯಾಗಬೇಕು. ಈಗ ಅವರು ಮಂತ್ರಿಗಳಾಗಿದ್ದಾರೆ ಜೊತೆಗೆ ಸಂಸದೀಯ ಸಚಿವರಾಗಿದ್ದಾರೆ. ಈ ಕಡೆ ಆ ಕಡೆಯ ಎರಡೂ ಕಡೆ ಸಾರಥ್ಯವನ್ನು ವಹಿಸತಕ್ಕ ಸಂಸದೀಯ ಸಚಿವರು. ಎರಡೂ ಕಡೆ ಇದ್ದವರು ಮಾನ್ಯ ಜಾಲಪ್ಪನವರು ಮಂಜುನಾಥ್‌ರವರು ಮತ್ತು ಎಂ.ಪಿ. ಪ್ರಕಾಶ್‌ರವರು ಬಹಳ ಅಪಾರವಾದ ಅನುಭವ ಇರತಕ್ಕ ವ್ಯಕ್ತಿಗಳನ್ನು ಮಂತ್ರಿಮಂಡಲಕ್ಕೆ ತೆಗೆದುಕೊಂಡಿದ್ದೀರಿ. ಇನ್ನು ಉಳಿದಿರತಕ್ಕ ಕೆಲವರು ಒಳ್ಳೆಯವರಲ್ಲವೆಂದು ನಾನು ಹೇಳುವುದಕ್ಕೆ ತಯಾರಾಗಿಲ್ಲ. ಅನುಭವವಿರತಕ್ಕ ಜನ ಇದ್ದಾರೆ. ಅವರ ಅಪಾರವಾದ ಅನುಭವ ಈ ರಾಜ್ಯಕ್ಕೆ ಬೇಕಾಗಿದೆ. ಅಪಾರವಾದ ಅನುಭವವಿರತಕ್ಕ ಮಂತ್ರಿ ಮಂಡಲದಿಂದ ಈ ರಾಜ್ಯಕ್ಕೆ ಅಪಾರವಾದ ಕೆಲಸವಾಗಬೇಕು. ಜೊತೆಗೆ ನಮ್ಮ ಅಧ್ಯಕ್ಷರಿಗೆ ಯಾವುದೇ ರೀತಿಯಾದ ತೊಂದರೆ ಆಗದ ರೀತಿಯಲ್ಲಿ ನಡೆದುಕೊಳ್ಳುವುದು ನಮ್ಮ ಕರ್ತವ್ಯ. ಮಂತ್ರಿಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ನಾನು ಹೇಳುವುದಿಲ್ಲ. ಮಂತ್ರಿಮಂಡಲ ಸರಿಯಿಲ್ಲವೆಂದು ಹೇಳುವುದಕ್ಕೆ ಜಾಸ್ತಿ ಮಾಡಬೇಕೆಂದು ನಾನು ಹೇಳುವುದಿಲ್ಲ. ಮಂತ್ರಿಮಂಡಲ ಸರಿಯಿಲ್ಲವೆಂದು ಹೇಳುವುದಕ್ಕೆ ನನಗೆ ಅಧಿಕಾರವಿದೆ. ನೀವು 50 ಜನ ಬೇಕಾದರೂ ಮಾಡಿಕೊಳ್ಳಿ. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ಈಗಿರುವ ಮಂತ್ರಿಮಂಡಲದ ಸಂಖ್ಯೆಗೆ ಇನ್ನು 5 ಜನ ಸೇರಿಸಿ ಅದಕ್ಕೆ ನಮ್ಮದೇನು ತಕರಾರು ಇಲ್ಲ. ನಮ್ಮ ಜೊತೆಯಲ್ಲಿದ್ದ ಸ್ನೇಹಿತರು ಆ ಕಡೆಗೆ ಹೋಗಿದ್ದಾರೆ. ಆ ಸ್ನೇಹ, ಪ್ರೇಮ ವಿಶ್ವಾಸವನ್ನು ಅವರು ಬಿಡದೆ, ನಿಮ್ಮಲ್ಲಿ ಆ ಹೃದಯವಂತಿಕೆ ಇರಲಿಯೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯವರನ್ನು ಮತ್ತೆ ಹಣಕಾಸಿನ ಸಚಿವರನ್ನಾಗಿ ಮಾಡಿದ್ದೀರಿ, ಇದು ನಿಜವಾಗಿಯೂ ಬಹಳ ಸಂತೋಷ ಪಡಬೇಕಾದ್ದು. ನಮ್ಮ ಜಿಲ್ಲೆಯವರು ಸಿದ್ಧರಾಮಯ್ಯನವರು. ಅವರು ಹಣಕಾಸಿನ ಖಾತೆಯನ್ನು ವಹಿಸಿಕೊಂಡಿದ್ದಾರೆನ್ನುವ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರು ಗಂಟೆ ಶಬ್ದವನ್ನು ನಮ್ಮ ಕಡೆಗೆ ಜಾಸ್ತಿ ಮಾಡಬಾರದು. ನಿಮ್ಮ ಗಂಟೆಯ ಶಬ್ದದ ಕಡಿವಾಣವನ್ನು ದಯಮಾಡಿ ನಮ್ಮ ಕಡೆಗೆ ಹಾಕಬೇಡಿ. ತಾವು ಪರಮ ಪವಿತ್ರವಾದ ಪೀಠವನ್ನು ಅಲಂಕರಿಸಿದ್ದೀರಿ. ಆ ಪೀಠದ ಘನತೆ ಮತ್ತು ಪ್ರೌಢಿಮೆಯನ್ನು ಮತ್ತು ಈ ಸದನದ ಒಂದು ಕೀರ್ತಿಯನ್ನು ಅಪಾರವಾಗಿ ಬೆಳೆಯುವುದಕ್ಕೆ ತಾವು ಸಹಕಾರವನ್ನು ಕೊಡಬೇಕು. ಇಬ್ಬರು ಮಹಿಳೆಯರು ರಾಜ್ಯಸಚಿವರಾಗಿದ್ದಾರೆ. ಅವರು ಪಾಪ ಕನ್ನಡದ ಹಿನ್ನೆಲೆಯಿಂದ ಬಂದವರು. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್‌ರವರು ದಿವಂಗತ ಪಂಡಿತ ಶಿವಮೂರ್ತಿ ಶಾಸ್ತ್ರಿಗಳ ಸೊಸೆ. ಕನ್ನಡದ ಇತಿಹಾಸವನ್ನು ಹೊಂದಿರತಕ್ಕ ಶ್ರೀಮತಿ ಬಿ.ಟಿ. ಲಲಿತಾನಾಯಕ್ ಅವರು ಕನ್ನಡದ ಬಗ್ಗೆ ಒಳ್ಳೆಯ ಕೆಲಸವನ್ನು ಹಗಲು ರಾತ್ರಿ ಮಾಡಿದ್ದಾರೆ. ಮಂತ್ರಿಗಳಾದಾಗ ಕನ್ನಡದ ಬಗ್ಗೆ ಧ್ವನಿ ಎತ್ತಿ ಮಾತನಾಡುತ್ತಾರೆಂದು ನಾನು ಅಂದುಕೊಂಡಿದ್ದೆ. ಅವರು ಮಂತ್ರಿಗಳಾದ ಮೇಲೆ ಅವರ ಧ್ವನಿ ಕುಗ್ಗಿ ಹೋಗಿದೆ. ಅದು ಕುಗ್ಗದೆ ಇರಲಿ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಮುಂದಿನ ಪೀಠದಲ್ಲಿ ಭದ್ರವಾಗಿರತಕ್ಕ ಜನ ನಾವು ಇಲ್ಲಿದ್ದೇವೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್:– ನಾವು ಧ್ವನಿ ಎತ್ತಿ ಹೇಳುವುದಿಲ್ಲ ಕೃತಿಯಲ್ಲಿ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ನಾವು ಧ್ವನಿಯಲ್ಲಿ ಮಾಡುತ್ತೇವೆ, ಅವರು ಕೃತಿಯಲ್ಲಿ ಮಾಡಲಿ. ನಮ್ಮ ವಿರೋಧಪಕ್ಷ ಯಾವುದೇ ಪಕ್ಷ ಇರಬಹುದು ನಾವು ಇಲ್ಲಿ ಕುಳಿತಿರತಕ್ಕವರು 108 ಜನ ಇದ್ದೇವೆ. ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿ ಮತ್ತು ಬಂಗಾರಪ್ಪನವರು ಮಾನ್ಯ ಖರ್ಗೆಯವರು, ಧರ್ಮಸಿಂಗ್‌ರವರು, ಎಂ.ವೈ. ಘೋರ್ಪಡೆಯವರು, ಕಾಗೋಡು ತಿಮ್ಮಪ್ಪನವರು ಮಲಕರೆಡ್ಡಿಯವರು ಮತ್ತು ಈಗ ಶಿವಪ್ಪನವರು ಬಂದಿದ್ದಾರೆ. ಬಹಳ ವಿಚಾರವಂತರು ಇರುವಾಗ ವಿರೋಧಪಕ್ಷಕ್ಕೆ ಹೆಚ್ಚಿನ ರೀತಿಯಲ್ಲಿ ಸಹಕಾರವನ್ನು ತಮ್ಮಿಂದ ನಿರೀಕ್ಷೆ ಮಾಡುತ್ತೇವೆ ಎಲ್ಲಕ್ಕಿಂತ ಹೆಚ್ಚಾಗಿ ನನ್ನ ಮೇಲೆ ನಿಮಗೆ ವಿಶೇಷವಾದ ಗಮನವಿದೆಯೆಂದು ನಾನು ಅಂದುಕೊಂಡಿದ್ದೇನೆ. ಹೆಚ್ಚಿನ ರೀತಿಯಲ್ಲಿ ಮಾತನಾಡತಕ್ಕ ಸನ್ನಿವೇಶ ನಿರ್ಮಾಣವಾಗಬಹುದು ಅಂತಹ ಪರಿಸ್ಥಿತಿ ನಿರ್ಮಾಣವಾದಾಗ ತಮ್ಮ ಸಂಪೂರ್ಣ ಬೆಂಬಲವಿತ್ತು ನನಗೆ ಅವಕಾಶ ಕೊಡಬೇಕೆಂದು ತಮ್ಮನ್ನು ಕಳಕಳಿಯಿಂದ ಮನವಿ ಮಾಡುತ್ತೇನೆ. ನಿಮ್ಮ ಅಧ್ಯಕ್ಷ ಸ್ಥಾನ ರಾಜ್ಯಕ್ಕೆ ಶೋಭೆ ತರಲಿ.

† ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗಾ ಕ್ಷೇತ್ರ):- Sir, on behalf of myself and my party, I congratulate you....

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ):- ಈಗ ನಾನು ಇವರಿಗೆ ಕನ್ನಡವನ್ನು ಕಲಿಸುತ್ತಿದ್ದೇನೆ. ಆದುದರಿಂದ ದಯಮಾಡಿ ಕನ್ನಡದಲ್ಲಿ ಮಾತನಾಡಿ.

ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗಾ):- ನಾನು ನಮ್ಮ ಮಿತ್ರರಿಗೆ ಒಂದು ಮಾತು ಹೇಳ್ತೀನಿ. ನನಗೆ ಕನ್ನಡ ಬರುತ್ತಾ ಇದೆ. ನಾನು ಕನ್ನಡದಲ್ಲಿ ಮಾತಾಡಬೇಕು. ನಾನು ಕನ್ನಡಿಗ. ಇಲ್ಲಿ ಈ ಸಭೇನಲ್ಲಿ ಮಾತಾಡಕ್ಕೆ ಸ್ವಲ್ಪ ಕಷ್ಟ ನಮಗೆ. ಅದರ ಸಲುವಾಗಿ ನಾನು ಇಂಗ್ಲೀಷ್‌ನಲ್ಲಿ ಮಾತಾಡುತ್ತಿದ್ದೇನೆ. ಏಕೆಂದರೆ ನಾನು ನಮ್ಮ ಮದರ್ ಟಂಗ್‌ನಲ್ಲಿ ಮಾತಾಡೆಂದರೆ ಇದು ರಿಕಾರ್ಡ್ ಆಗುವುದಿಲ್ಲ. ನಮ್ಮ ಸ್ಪೀಕರ್‌ಗೆ ರಿಕ್ವೆಸ್ಟ್ ಮಾಡ್ತಾ ಇದ್ದೀನಿ. ತಾವು ಇದು ಮಾಡಿ ಎಂದರೆ ಮಾಡುತ್ತೇನೆ.

ನನಗೆ ಸ್ವಲ್ಪ ಸಮಯ ಕೊಡಿ. ನಮ್ಮ ಜೊತೆಯಲ್ಲಿ ನಮ್ಮ ಫ್ರೆಂಡ್ ವಾಟಾಳ್ ನಾಗರಾಜ್ ಇದ್ದಾರೆ. ನಾನು ಆ ಸಂದರ್ಭದಲ್ಲಿ ಹೇಳಿಬಿಟ್ಟಿದ್ದೀನಿ. ಈ ಸಂದರ್ಭದಲ್ಲಿ ನಾನು ಕನ್ನಡದಲ್ಲಿ ಮಾತಾಡುತ್ತೇನೆ. ಸ್ವಲ್ಪ ಸಮಯ ಕೊಡಿ ನಾನು ಕನ್ನಡದಲ್ಲಿ ಮಾತಾಡುತ್ತಾ ಇದ್ದೀನಿ. ಈಗ ನಮಗೆ with the permission of the Speaker, I speak in English, ತಾವು ಸ್ವಲ್ಪ ಸಮಯ ಕೊಡಿ. have some patience.

Sir, on behalf of myself and on behalf of my party, I congratulate Sri Ramesh Kumarji for being elected unanimously as the Speaker of this House of this 10th Assembly. Sir, you are the custodian of this House and all the member of this House have faith and confidence in you that you will do justice. The constitution of this House and verdict of the people of Karnataka is such that the members sitting under the leadership of Mr. Devegowdaji and under the Deputy leadership of J.H. Patelji are only 115 and now you are on the chair they are 114, and if the Deputy Speaker is elected, there will be 113 and the composition of the left side, members who are sitting here, my friend Mr. Yadiyurappaji is now has a team of 39 with him and Mr. Kharge is having 36 and Bangarappaji having 10. In addition to this, Mr. Vatal Nagaraj, myself Ryot Sangha, CPM, BSP, All India Anna DMK, MES

and strong independent group of 10 members are there. Sir, this is a very beautiful composition of this House and for a best House such a composition is needed if at all the Government is very much interested. Sir, one thing I wanted to say, you know, I am from the Indian National League and I was the member of the Muslim League in the last two assemblies fighting for the cause of the minorities. Now I am not only fighting for the cause of the minorities, but for almost all the oppressed and depressed sections of the society I am fighting and my party is fighting. Here, in this House, eventhough the minority has given full faith in the Janata Dal, which is the ruling party now. There were 12 minority members in the previous Assembly. Now there are only six members, 3 on the ruling side and 3 on the opposition side. Three have become Ministers. In the opposition side, I am from the Indian National League. One members Mr. Sageer Ahamad is from Congress (I). Another young friend is from BSP he is Mr. Zulfikar Hashmi. You are my old friend. We entered this House in 1978 when D. Devaraj Urs was the Chief Minister. Mr. Yadiyurappa with a full team as the leader of the opposition is there, I am confident that he will play a very very vital role, very very important role because it is a very responsible opposition party and now he is the leader. Here, minorities are having so many issues and so many problems.

I hope that you will give me full opportunity to solve these problems. As very rightly pointed out by my friend Sri Vatal Nagaraj that your bell should not be there when we are speaking and we should be given full opportunity. When we speak, we speak not for any ministership or change of leadership or chief ministership. We are here to see that in this House we must represent the cause of the people of Karnataka and the problems of these people should be solved and this House will transact business in such a way that almost all the developmental problems and solved and development of the State should reach the high peak. With these few words I congratulate you, having full faith in you that you will give me full opportunity in this House. With these few words I conclude my speech. Thank you very much.

† ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ, ಈ ದಿವಸ ಬಹಳ ಶುಭದಿವಸ. ತಾವು ಪ್ರಗತಿಪರ ಮನೋಭೂಮಿಕೆ ಇದ್ದವರು. ನಮ್ಮ ನಾಣಯ್ಯನವರು ಹೇಳಿದ ಪ್ರಕಾರ ವಿಡಂಬನೆ ಮೊನಚಾದಂತಹ ಮಾತಿನ ಅರಿತ ಇದನ್ನೆಲ್ಲಾ ತಾವು ಹೊಂದಿದ್ದೀರಿ. ಈ ದಿವಸ ಈವೊಂದು ಕರ್ನಾಟಕ ರಾಜ್ಯದ ಅತ್ಯಂತ ಶ್ರೇಷ್ಠ ಪರಂಪರೆಯ ಒಂದು ದೊಡ್ಡ ಗರಿಮೆಯನ್ನು ಇಟ್ಟುಕೊಂಡಂತಹ ಈ ರಾಜ್ಯಾಂಗದ ಒಂದು ಪ್ರಧಾನವಾದಂತಹ ಒಂದು ಅಂಗ ಶಾಸಕಾಂಗ. ಇದರ ಒಂದು ಅಧ್ಯಕ್ಷತೆಯನ್ನು

ತಾವು ವಹಿಸಿರತಕ್ಕದ್ದು ನಮಗೆಲ್ಲಾ ವಿಶೇಷವಾದಂತಹ ಸಂತೋಷ ಮತ್ತು ಅಭಿಮಾನವನ್ನು ತಂದಿದೆ. ನನ್ನ ಹಿಂದೆ ಮಾತನಾಡಿದಂತಹ ಈ ಸದನ ನಾಯಕರು, ಸನ್ಮಾನ್ಯ ಉಪ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರು ಅನೇಕ ನಾಯಕರು ಸಾಕಷ್ಟು ಈ ಸದನದ ಪ್ರಾಮುಖ್ಯತೆ ಹಾಗೂ ತಮ್ಮ ಸ್ಥಾನದ ಮಹತ್ವದ ಬಗ್ಗೆ ಇಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ನಾನು ಅದನ್ನು ಪ್ರತ್ಯೇಕವಾಗಿ ಬಹಳ ಅವಲಂಬಿಸಿ ಮಾತನಾಡಲಿಕ್ಕೆ ಅಪೇಕ್ಷೆ ಪಡುವುದಿಲ್ಲ. ಹಾಗೆಯೇ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಪ್ರಕಾರ ಏನೊಂದು ನ್ಯಾಯದ ತಕ್ಕಡಿ ಇದೆ ಅನೇಕ ಬಾರಿ ನಾವು ನ್ಯಾಯದ ಆ ತಕ್ಕಡಿ ಬರೀ ತಮಗೆ ಸೀಮಿತವಾಗಿ ವ್ಯಾಖ್ಯಾನ ಮಾಡಿ ಹೇಳುತ್ತೇವೆ. ಆದರೆ ಆ ನ್ಯಾಯದ ತಕ್ಕಡಿ ಇರತಕ್ಕದ್ದು ನಮ್ಮೆಲ್ಲರಿಗೂ ಇರತಕ್ಕ ನ್ಯಾಯತಕ್ಕಡಿ. ಆರ್ಥಿಕವಾದಂತಹ ಮತ್ತು ಸಾಮಾಜಿಕವಾದಂತಹ ನ್ಯಾಯವನ್ನು ಈ ರಾಜ್ಯದ ಐದು ಕೋಟಿ ಜನರಿಗೆ ಕೊಡುವಂತಹ ಒಂದು ದೊಡ್ಡ ಜವಾಬ್ದಾರಿಯನ್ನು ನಾವೆಲ್ಲಾ ವಹಿಸಿಕೊಂಡು ಇಲ್ಲಿ ಬಂದಿದ್ದೇವೆ. ತಾವು ಈ ಜವಾಬ್ದಾರಿಯನ್ನು ಆ ಕಡೆಯಿಂದ ಈ ಕಡೆಯಿಂದ ಸರಿಯಾಗಿ ನಿರ್ವಹಿಸಿಕೊಂಡು ಹೋಗತಕ್ಕಂಥಹ ಒಂದು ದೊಡ್ಡ ಒಂದು ಪರಮೋಚ್ಛ ಅಧಿಕಾರವನ್ನು ತಾವು ಪಡೆದಿದ್ದೀರಿ. ನಾವು ತಮ್ಮ ಸ್ಥಾನದ ಈ ಶಾಸನ ಸಭೆಯ ಒಂದು ಪ್ರಾಮುಖ್ಯತೆ ಹಾಗೂ ಪರಂಪರೆಗಳ ಬಗ್ಗೆ ಮಾತನಾಡುವ ಒಂದು ಸಂದರ್ಭದಲ್ಲಿ ಆ ಪರಂಪರೆಯ ಉಜ್ವಲವಾದಂತಹ ಕೊಂಡಿ ಯಾವಾಗಲೂ ಕೂಡ ಕಳಚಿಕೊಳ್ಳದ ರೀತಿಯಲ್ಲಿ ಆ ಕೊಂಡಿ ಭದ್ರವಾಗಿರತಕ್ಕ ಒಂದು ರೀತಿಯನ್ನು ನಿರ್ವಹಿಸತಕ್ಕಂತಹ ಒಂದು ದೊಡ್ಡ ಜವಾಬ್ದಾರಿಯುತ ಸ್ಥಾನದಲ್ಲಿ ಇದ್ದೀರಿ. ತಮ್ಮ ಒಂದು ಜವಾಬ್ದಾರಿ ಅದು ಬರೀ ಈ ಒಂದು ಸದನವನ್ನು ನಿರ್ವಹಿಸತಕ್ಕ ಒಂದು ಮ್ಯಾನೇಜ್‌ಮೆಂಟ್ ಜವಾಬ್ದಾರಿ ಎಂದು ಮಾತ್ರ ತಿಳಿದುಕೊಂಡರೆ ಬಹುಶಃ ಏನು ಆ ನ್ಯಾಯದ ತಕ್ಕಡಿ ಇದೆ ಅದನ್ನು ಸರಿದೂಗಿಸಿಕೊಂಡು ಈ ರಾಜ್ಯದಲ್ಲಿ ಶಾಸಕಾಂಗ ನಡೆಸಿಕೊಂಡು ಬರಲಿಕ್ಕೆ ಖಂಡಿತವಾಗಿಯೂ ಕೂಡ ಸಾಧ್ಯವಾಗುವುದಿಲ್ಲ. ತಾವು ನಿರ್ವಹಿಸಬೇಕಾದದ್ದು ಬರೀ ನಡವಳಿಕೆ ಮಾತ್ರವಲ್ಲ. ತಾವು ನಿರ್ವಹಿಸಬೇಕಾದದ್ದು ಆ ಕಡೆ ಮತ್ತು ಈ ಕಡೆ ಸದಸ್ಯರ ತಾಂತ್ರಿಕವಾದಂತಹ ನಿಯಮಗಳನ್ನು ಮಾತ್ರವಲ್ಲ, ತಾವು ನಿರ್ವಹಿಸಬೇಕಾದ್ದು ಈ ಸದನದ ಕಾರ್ಯಕಲಾಪ ನಡೆಯುವಾಗ, ಯಾವುದೇ ಒಂದು ಶಾಸನ ರಚನೆಯನ್ನು ಮಾಡುವಾಗ, ಯಾವುದೇ ವಿಚಾರಗಳು ಇಲ್ಲಿ ಬಂದಾಗ, ಈ ಒಂದು ವಿಚಾರಗಳು ತಾತ್ವಿಕವಾಗಿ, ಸೈದ್ಧಾಂತಿಕವಾಗಿ ಸಮಾಜದ ಎಲ್ಲಾ ವರ್ಗದವರ ಜೀವನಮಟ್ಟವನ್ನು ಎತ್ತರಿಸಲಿಕ್ಕೆ, ಬಡತನವನ್ನು ನಿವಾರಿಸಲಿಕ್ಕೆ, ಬಡವರ ಕಣ್ಣೀರನ್ನು ಒರಿಸಲಿಕ್ಕೆ ಮತ್ತು ಸರ್ವಜನಕ್ಕೂ ಕೂಡ ಶಾಂತಿ, ನೆಮ್ಮದಿ ಮತ್ತು ಸಂರಕ್ಷಣೆಯನ್ನು ಕೊಡತಕ್ಕಂತಹ ಒಂದು ನಿರ್ವಹಣೆ ಜವಾಬ್ದಾರಿಯನ್ನು ತಾವು ಆ ಎತ್ತರದ ಸ್ಥಳದಲ್ಲಿ ಕುಳಿತುಕೊಂಡು, ವಿಶೇಷವಾಗಿ ಆ ಜವಾಬ್ದಾರಿಯನ್ನು ಹೊತ್ತುಕೊಂಡು ತಾವು ಈ ಕೆಲಸ ಮಾಡುತ್ತಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

11.45 ಎ.ಎಂ

ಅನೇಕ ಯುವಕರು ಈ ಸದನಕ್ಕೆ ಹೊಸದಾಗಿ ಬಂದಿದ್ದಾರೆ. ಅವರಿಗೆ ತಮ್ಮ ಪ್ರೋತ್ಸಾಹ ಮತ್ತು ಉತ್ತೇಜನ ಬೇಕಾಗುತ್ತದೆ. ಅವರಲ್ಲಿ ಆತ್ಮವಿಶ್ವಾಸ ತುಂಬುವಂಥ ಒಂದುವಿಶೇಷ ಜವಾಬ್ದಾರಿ ಕೂಡ ತಮ್ಮದು ಇದೆ ಎಂಬುದರ ಬಗ್ಗೆ ನಾನು ತಮಗೆ ನೆನಪು ಮಾಡಿಕೊಡಬೇಕಾಗಿಲ್ಲ. ತಾವು ಕೂಡ ಶ್ರೇಷ್ಠ ಸಂಸದೀಯಪಟುವಾಗಿ ಈ ಸದನ ನಡೆಯುವಾಗ ಯಾವುದೇ ವಿಚಾರವನ್ನು ಬಹಳ ಪರಿಣಾಮಕಾರಿಯಾಗಿ ಮತ್ತು ಜವಾಬ್ದಾರಿಯಿಂದ ಮಂಡಿಸಿದ್ದುದು ನನಗೆ ವಿಶೇಷವಾಗಿ ನೆನಪಿಗೆ ಬರುತ್ತಿದೆ. ಈ ಸದನದಲ್ಲಿ ನಡೆಯತಕ್ಕಂಥ ಯಾವುದೇ ವಿಚಾರ ಇರಬಹುದು, ಅವು ತಮ್ಮ ದೃಷ್ಟಿಯಲ್ಲಿರಬಹುದು, ನಮ್ಮ ದೃಷ್ಟಿಯಲ್ಲಿರಬಹುದು ಒಂದು ತಾತ್ಕಾಲಿಕವಾದಂಥ ನೆಮ್ಮದಿಯನ್ನು ಅಥವಾ ಯಾರಿಗಾದರೂ ಪ್ರತಿಷ್ಠೆಯನ್ನು ತರಲಿಕ್ಕೆ ಇರತಕ್ಕಂಥ ವಿಚಾರ ಅಲ್ಲ. ನಿಜವಾಗಿಯೂ ನಾವು

ಏನು ಈ ಶಾಸನಸಭೆಯಿಂದ ಈ ರಾಜ್ಯದ ಜನತೆಗೆ ಏನು ಕೊಡುಗೆಯನ್ನು ಕೊಡುತ್ತೇವೆ, ಅದರ ಮೇಲೆ ವಿಶೇಷವಾದಂಥ ಪ್ರಭಾವ ಮತ್ತು ಪರಿಣಾಮವನ್ನು ಅದು ಬೀರುವ ರೀತಿಯಲ್ಲಿ ಸದನದ ಕಾರ್ಯಕಲಾಪಗಳು ನಡೆಯುತ್ತವೆ ಎಂಬುದನ್ನು ತಾವು ಖಂಡಿತವಾಗಿಯೂ ನೋಡಿಕೊಳ್ಳುತ್ತೀರಿ ಎಂಬ ವಿಶ್ವಾಸ ನನ್ನಲ್ಲಿ ವಿಶೇಷವಾಗಿ ಇದೆ. ಏಕೆಂದರೆ ಈಗ ಕಮಿಟಿಗಳ ಸಿಸ್ಟಮ್ ಅನ್ನು ಕೂಡ ಇಲ್ಲಿ ಈಗಾಗಲೇ ನಮೂದಿಸಿದ ಕಾರಣ, ಯಾವುದನ್ನು ಈ ಕಮಿಟಿಗಳಲ್ಲಿ ತೆಗೆದುಕೊಳ್ಳಬೇಕು, ಯಾವುದನ್ನು ಈ ಸದನದಲ್ಲಿ ತೆಗೆದುಕೊಳ್ಳಬೇಕು, ಈ ಸದನದ ಕಾರ್ಯಕ್ರಮಗಳನ್ನು ಯಾವ ಆದ್ಯತೆ ಮೇಲೆ ನಿರ್ವಹಿಸಬೇಕಾಗುತ್ತದೆ. ನಾವು ಸದಸ್ಯರು ಮತ್ತು ತಾವು ಎಂಬುದನ್ನು ತಾವು ನೋಡಬೇಕಾಗುತ್ತದೆ. ಈ ಕಮಿಟಿ ಸಿಸ್ಟಮ್ ಅನ್ನು ನಾವೇನು ಪ್ರಾಯೋಗಿಕವಾಗಿ ಮಾಡಿದ್ದೇವೆ, ಈ ಪ್ರಯೋಗ ಯಶಸ್ವಿಯಾಗುವುದರಲ್ಲೂ ಕೂಡ ತಾವು ವಿಶೇಷವಾಗಿ ಇದರ ಬಗ್ಗೆ ಚಟುವಟಿಕೆಯನ್ನು ನೆರವೇರಿಸಲಿಕ್ಕೆ ತಮ್ಮ ಒಂದು ಪಾತ್ರವನ್ನು ತಾವು ವಹಿಸುತ್ತೀರಿ ಎಂಬುದನ್ನು ಹೇಳುವುದರ ಜೊತೆಯಲ್ಲಿ ಯಾವಾಗಲೂ ಕೂಡ ಒಂದು ಸಂಸದೀಯ ಸಂವಾದದಲ್ಲಿ ಒಂದು ಮಾತು ಬರುತ್ತದೆ. Opposition will have their say and the treasury benches will have their way.

ಆದ್ದರಿಂದ ಇದು ಬಹಳ ಪ್ರಾಮುಖ್ಯವಾದಂಥ ಒಂದು ಮಾತು. ಏಕೆಂದರೆ ಅಲ್ಲಿ ಟ್ರೆಜರಿ ಬೆಂಚ್‌ನವರು ಹೆಚ್ಚು ಮಾತನಾಡಿಬಿಟ್ಟರೆ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹೆಚ್ಚು ಈ ಕಡೆಗೆ ಪ್ರಾಮುಖ್ಯತೆಯನ್ನು ಕೊಟ್ಟಾಗ ಟ್ರೆಜರಿಬೆಂಚ್ ಅಥವಾ ಸದಸ್ಯರು ತಮಗೆ ಅವಕಾಶ ಕಡಿಮೆಯಾಯಿತು ಎಂದು ಯಾವಾಗಲೂ ಕೂಡ ಧ್ವನಿ ಎಬ್ಬಿಸತಕ್ಕಂಥ ಪರಿಪಾಠ ಇದೆ. ತಾವು ಅದರ ಕಡೆಗೆ ವಿಶೇಷ ಗಮನ ಕೊಡದೆ, ತಾವು ಅಲ್ಲಿ ನಿರೀಕ್ಷೆ ಮಾಡತಕ್ಕಂಥಾದ್ದು ಕಾರ್ಯಕ್ರಮ, ಈ ಸದನಕ್ಕೆ ಬೇಕಾದಂಥ ಸಕ್ರೀಯವಾದಂಥ ಪ್ರೋತ್ಸಾಹ. ತಾವು ಇಲ್ಲಿ ನಿರೀಕ್ಷೆ ಮಾಡತಕ್ಕಂಥಾದ್ದು ಸರಿಯಾದ ಸಲಹೆ, ಅದಕ್ಕೆ ಬೇಕಾದಂಥ ಪೂರಕವಾದ ಚರ್ಚೆ ಎಂಬ ಒಂದು ವಿಚಾರವನ್ನು ಸಂಪೂರ್ಣವಾಗಿ ತಾವು ಗಮನಕ್ಕೆ ತೆಗೆದುಕೊಂಡು ಕೆಲಸವನ್ನು ನಿರ್ವಹಿಸುತ್ತೀರಿ ಎಂಬುದಾಗಿ ನಾನು ತಿಳಿದುಕೊಂಡಿದ್ದೇನೆ.

ತಾವು ಆಡತಕ್ಕಂಥ ಮಾತು ಅದು ಮುತ್ತಿನಂಥ ಮಾತಾಗಿರಬೇಕು. ಏಕೆಂದರೆ, ಮುತ್ತು ಉದುರಿದರೆ ಯಾವ ರೀತಿ ಕೈಗೆ ಎಟುಕುವುದಿಲ್ಲವೋ, ಅದೇ ರೀತಿಯಲ್ಲಿ ತಾವು ಏನಾದರೂ ಮಾತನಾಡಿದರೆ ಅದನ್ನು ನಾವು ಶಿರಸಾವಹಿಸಿ ಶಿಸ್ತುಬದ್ಧವಾಗಿ, ಸಂಯಮಬದ್ಧವಾಗಿ, ನಿರ್ವಹಿಸತಕ್ಕಂಥ ಜವಾಬ್ದಾರಿ ಖಂಡಿತವಾಗಿಯೂ ನಮ್ಮದು ಇದೆ. ಆದ್ದರಿಂದ ತಾವು ಯಾವುದೇ ಒಂದು ತೀರ್ಪು ಅಥವಾ ತೀರ್ಪಿಗೆ ಅನುಕೂಲವಾದಂಥ ಯಾವುದೇ ವಿಚಾರವನ್ನು ಹೇಳುವುದಿದ್ದರೂ ಕೂಡ ಅದು ಕೊನೆಯ ಮಾತಾಗಿರಬೇಕು. ಮತ್ತು ಅದು ಕೊನೆಯ ತೀರ್ಪಾಗಿರಬೇಕು. ತಾವು ಯಾವ ಮಾತನ್ನು ಆಡಿದರೂ ಕೂಡ ಅದನ್ನು ತೀರ್ಪಿನ ಸ್ವರೂಪದಲ್ಲಿ ಶಿರಸಾವಹಿಸಿ ನಿರ್ವಹಿಸತಕ್ಕಂಥ ಜವಾಬ್ದಾರಿ ನಮ್ಮದು ಕೂಡ ಇರುವ ಕಾರಣದಿಂದ, ತಾವು ಮಾತನಾಡತಕ್ಕಂಥಾದ್ದು ಬಹಳ ಕಡಿಮೆ ಮಾತನಾಡಿದರೆ ಅದು ಹೆಚ್ಚು ಶೋಭಾಯಮಾನವಾಗಿರುತ್ತದೆ, ಮತ್ತು ಮಾತನಾಡತಕ್ಕಂಥ ಮಾತು, ಅದು ಮಾತಲ್ಲ, ಅದು ತೀರ್ಪು ಎಂದು ತಲೆಬಾಗಿ ನಿರ್ವಹಿಸತಕ್ಕಂಥ ಒಂದು ಗಾಂಭೀರ್ಯತೆ ಮತ್ತು ಪಾವಿತ್ರ್ಯತೆ ಈ ಕಡೆ, ಸದನದಲ್ಲಿ ಎಲ್ಲರಿಗೂ ಕೂಡ ಬರುವುದಕ್ಕೆ ಸಾಧ್ಯವಾಗುತ್ತದೆ ಎಂಬ ಒಂದು ವಿಚಾರವನ್ನು ಹೇಳುವುದರ ಜೊತೆಗೆ ಯಾವುದೇ ನಮ್ಮ ಮಧ್ಯೆ ಇರತಕ್ಕಂಥ ಒಂದು ವಿಚಾರದ ನಿರ್ಣಯ ಅದು ಚರ್ಚೆಯಿಂದ, ಸಂವಾದದಿಂದ ಅದು ನಡೆಯಬೇಕೇ ಹೊರತು ಬಲೋದ್ಬಂಧನದಿಂದ ಈ ಕಡೆಯಾಗಲೀ, ಆ ಕಡೆಯಾಗಲೀ, ಅಥವಾ ಯಾವುದೇ, ರೀತಿಯ ಒಂದು ಶಕ್ತಿಯಿಂದ, ಮಾತಿನ ಶಕ್ತಿಯಿಂದ ಉಪಯೋಗ ಮಾಡಬೇಕೇ ಹೊರತು ತೋಳ್ಬಲ ಶಕ್ತಿಯನ್ನು ಉಪಯೋಗ ಮಾಡದೇ ಇರತಕ್ಕಂಥ ಒಂದು ಉತ್ತಮವಾದ ಪರಂಪರೆಯನ್ನು ತಾವು ಹಾಕಿಕೊಂಡಂಥ

ಒಂದು ಸಂಕಲ್ಪ, ತಮ್ಮ ಅಧ್ಯಕ್ಷತೆಯಲ್ಲಿ, ಸದನದಲ್ಲಿ ಖಂಡಿತವಾಗಿಯೂ ಕೂಡ ನಡೆಯುತ್ತದೆ ಎಂಬ ವಿಚಾರವನ್ನು ಹೇಳುತ್ತೇನೆ. ಏಕೆಂದರೆ ನಮಗೆ ಇತ್ತೀಚೆಗೆ ಏನೊಂದು ಪರಂಪರೆ ಅಥವಾ ಅದು ಕೆಟ್ಟ ಪರಂಪರೆ ಎಂದು ಹೇಳಿದರೂ ಕೂಡ ತಪ್ಪಾಗಲಿಕ್ಕಿಲ್ಲ. ಏಕೆಂದರೆ ನಾವೆಲ್ಲ we would like to have a short cut method to attract the attention.

ತಮ್ಮ ಗಮನವನ್ನು ಸೆಳೆಯಲಿಕ್ಕೆ, ಚರ್ಚೆ ಮಾಡಲಿಕ್ಕೆ ಅಥವಾ ಯಾವುದೇ ಒಂದು ತಮಗೆ ಹೆಚ್ಚು ಇಲ್ಲಿ ನಡೆಯತಕ್ಕಂಥ ಕಾರ್ಯಕ್ರಮಗಳು, ನಮ್ಮ ಆತ್ಮಶಕ್ತಿಗೆ ಸರಿಯಾಗಿ ಇರಬೇಕಾಗುತ್ತದೆ. ಸಂಸದೀಯ ಪರಂಪರೆಗಳಿಗೆ ಪೂರಕವಾದಂಥ, ವ್ಯವಸ್ಥೆಗಳಿಗೆ ಅನುಕೂಲವಾಗಿ ನಾವು ಕಾರ್ಯಕ್ರಮಗಳನ್ನು ಮಾಡಬೇಕೇ ಹೊರತು, ಅಗ್ಗದ ಪ್ರಚಾರಕ್ಕೆ ನಾವು ಇಲ್ಲಿ.....

ಅಗ್ಗದ ಪ್ರಚಾರಕ್ಕಾಗಿ ಇಲ್ಲಿ ವ್ಯವಹಾರ ಮಾಡುತ್ತೇನೆ, ನಿರ್ವಹಣೆಯನ್ನು ಮಾಡುತ್ತೇವೆಂದು ಹೇಳಿದಾಗ, ತಮಗೆ ಗೊತ್ತಿದೆ, ಸ್ವರ್ಗಕ್ಕೆ ಹೋಗಬೇಕಾದರೆ ಮೆಟ್ಟಿಲು, ಮೆಟ್ಟಿಲು ಏರಿ ಹೋಗಬೇಕಾಗುತ್ತದೆ. ಆದರೆ ನರಕಕ್ಕೆ ದೊಪ್ಪನೆ ಬೀಳಬೇಕಾದರೆ, ಯಾವ ಮೆಟ್ಟಿಲೂ ಕೂಡ ಇರುವುದಿಲ್ಲ. ಆದ್ದರಿಂದ, ಏನು ನಿಯಮಗಳನ್ನು ನಾವು ನಾವೇ ಹಾಕಿ ಕೊಂಡಿದ್ದೇವೆ ಈ ನಿಯಮಗಳು ಸಂಸದೀಯ ಸ್ವರ್ಗಕ್ಕೆ ಹೋಗತಕ್ಕ ಮೆಟ್ಟಿಲುಗಳು. ಈ ಮೆಟ್ಟಿಲುಗಳನ್ನು ಬಿಟ್ಟು ಹೋದರೆ, ನರಕಕ್ಕೆ ದೊಪ್ಪನೆ ಬೀಳತಕ್ಕ ಪರಿಸ್ಥಿತಿ ನಿರ್ಮಾಣವಾಗಬಹುದು. ಈ ದೃಷ್ಟಿಯಿಂದ ತಾವು ಸದನವನ್ನು ನಿರ್ವಹಣೆ ಮಾಡುತ್ತೀರಿ ಎಂಬ ವಿಶ್ವಾಸವನ್ನು ಇಟ್ಟುಕೊಂಡು, ಕೆಲವು ಮಾತುಗಳನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ, ತಮಗೆ ವಂದನೆಗಳನ್ನು ಸಮರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ):– ಮಾನ್ಯ ಅಧ್ಯಕ್ಷರೇ, ತಾವು ಸರ್ವಾನುಮತದಿಂದ ಅಧ್ಯಕ್ಷರಾಗಿರತಕ್ಕಂಥದ್ದು ತುಂಬಾ ಸಂತೋಷದ ಸಂಗತಿ. ತಮ್ಮ ಆಯ್ಕೆ ಅವಶ್ಯಕತೆ ಇತ್ತು ಎಂದು ನನಗನ್ನಿಸುತ್ತದೆ. ನಾನು ಸುಮ್ಮನೆ ಪ್ರಾಸಂಗಿಕವಾಗಿ ಯೋಚನೆ ಮಾಡಿದೆ. ಚುನಾವಣೆಯಾದ ಮೇಲೆ, ದಳದವರು ಅಧಿಕಾರಕ್ಕೆ ಬರುತ್ತಾರೆಂದ ಮೇಲೆ, ನನ್ನ ಚಿಂತೆ ಮುಖ್ಯಮಂತ್ರಿಗಳು ಯಾರಾಗುತ್ತಾರೆ ಎಂಬ ಕಡೆಗೆ ಹೋಗಲಿಲ್ಲ. ಸಭಾಧ್ಯಕ್ಷರು ಯಾರಾಗುತ್ತಾರೆ ಎಂಬ ಚಿಂತೆ ನನಗೆ ಮೊದಲು ಬಂತು. ಮಾನ್ಯ ಜೆ.ಹೆಚ್. ಪಟೇಲರು ಆಗಬಹುದು ಎಂದುಕೊಂಡಿದ್ದೆ. ಆದರೆ, ಅವರ ಉಪ ಮುಖ್ಯಮಂತ್ರಿಗಳಾದರು ಎಂದ ತಕ್ಷಣ, ಎರಡನೆಯ ನೆನಪು ಬಂದಿದ್ದು, ಮಾನ್ಯ ರಮೇಶ್‌ಕುಮಾರ್ ಅವರು ಆಗಲಿ ಎಂದು ಬಂತು. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ತಮಗೆಲ್ಲರಿಗೂ ನೆನಪಿರಬಹುದು. House of Commons – Lord Cromwell. "Whether the Parliament is supreme or the King is supreme?

ಕಿಂಗ್ ಎಂದರೆ ಎಕ್ಸಿಕ್ಯುಟಿವ್ ಅಥಾರಿಟಿ. ಪಾರ್ಲಿಮೆಂಟ್ ಎಂದರೆ ಲೆಜಿಸ್ಲೇಟಿವ್ ಅಥಾರಿಟಿ. ನಾವು ರಾಜ್ಯಾಂಗಬದ್ಧವಾಗಿ ಒಪ್ಪಿಕೊಂಡಿರುವಂಥಾದ್ದು, ಶಾಸಕಾಂಗ ಸರ್ವಸಮರ್ಥ, ಸರ್ವೋಚ್ಚ, ಸರ್ವ ಸಾರ್ವಭೌಮ. Parliament is supreme, legislature is supreme.

ಇಂತಹ ವಿಶೇಷವಾದ ಪರಿಸ್ಥಿತಿಯಲ್ಲಿ ತಾವು ಅಧ್ಯಕ್ಷರಾಗಬೇಕೆಂದು, ಏಕೆ ಅಂದುಕೊಂಡೆ ಎಂದರೆ, ಇತ್ತೀಚಿನ ದಿನಗಳಲ್ಲಿ there is a tendancy on the part of the executive to treat the Legislature as subordinate body. ಶಾಸಕಾಂಗ ಸಬಾರ್ಡಿನೇಟ್ ಆಗುತ್ತಿದೆ. ಈ ರೀತಿಯ ವಾತಾವರಣ ಇತ್ತೀಚಿನ ದಿನಗಳಲ್ಲಿ ಲೋಕಸಭೆಯಲ್ಲಾಗಲೀ ಅಥವಾ ರಾಜ್ಯಸಭೆಯಲ್ಲಾಗಲೀ ಆಗುತ್ತಾ ಇದೆ. 10 ನಿಮಿಷದಲ್ಲಿ ಒಂದು ಶಾಸನವನ್ನು ಪಾಸ್ ಮಾಡಿಕೊಂಡು ಹೋಗುತ್ತೇವೆ. ಬಹುಶಃ ಯಾವುದಾದರೂ ಡಿಮ್ಯಾಂಡ್ ಮೇಲೆ ಅಥವಾ ಮತ್ತೊಂದರ ಮೇಲೆ ಮಾತನಾಡುತ್ತೇವೆ. ನಾವು ಶಾಸಕರಿದ್ದೇವೆ, ಶಾಸನ ಮಾಡುವುದಕ್ಕೆ ಸಹಕಾರ ಕೊಡಬೇಕಾದ ಜನರು ನಾವು. ಶಾಸನ ಮಾಡುವಂಥ

ಕಾಲದಲ್ಲಿ, ಈ ಶಾಸನದಿಂದ ಸಮಾಜಕ್ಕೆ ಅನುಕೂಲವಾಗುತ್ತದೆಯೋ, ಅಥವಾ ಆಘಾತವಾಗುತ್ತದೆಯೋ ಎನ್ನುವುದನ್ನು ನೋಡಬೇಕು. ಆದರೆ, ಈ ವಾತಾವರಣ ಇಂದು ಉಳಿದುಕೊಂಡಿಲ್ಲ. ಶಾಸನಗಳನ್ನು 5–10 ನಿಮಿಷಗಳಲ್ಲಿ ಪಾಸ್ ಮಾಡತಕ್ಕ ಪರಿಪಾಠ ಇತ್ತೀಚಿನ ದಿನಗಳಲ್ಲಿ ಆಗುತ್ತಿದೆ. ಇವತ್ತು ಶಾಸನ ಸಭೆಯ ಸಾರ್ವಭೌಮತ್ವವನ್ನು ಎತ್ತಿ ಹಿಡಿಯತಕ್ಕ ಪರಿಸ್ಥಿತಿ ಉತ್ಪನ್ನವಾಗಬೇಕು. ಇದಕ್ಕೆ ಸಮರ್ಥವಾಗಿರತಕ್ಕ ಸಭಾಧ್ಯಕ್ಷರು ಬೇಕು. ತಾವು ಸಮರ್ಥರಿದ್ದೀರಿ. ಆದರೆ, ಈ ಕೆಲಸ ತಮ್ಮ ಒಬ್ಬರಿಂದಲೇ ಆಗುವುದಿಲ್ಲ. ಕಾರ್ಯಾಂಗದವರೂ ಕೂಡ ತಮ್ಮ ಇತಿಮಿತಿಯನ್ನು ಅರಿತುಕೊಳ್ಳಬೇಕು. ಏಕೆಂದರೆ, ನಾವೆಲ್ಲರೂ ಶಾಸನ ಸಭೆಯ ಸದಸ್ಯರಿದ್ದೇವೆ. ನಮ್ಮ ವ್ಯವಸ್ಥೆಯನ್ನು ಯಾವ ಮಟ್ಟಕ್ಕೆ ತಂದಿದ್ದೇವೆಂದು ಹೇಳಿದರೆ, system collapse ಆಗಿದೆ.

ಇವತ್ತು ಕಾರ್ಯಾಂಗ ಏನಾಗಿದೆ. ಶಾಸನ ಸಭೆಯಲ್ಲಿ ನಾನು ಶಾಸಕನಾಗಿ ಕೆಲಸ ಮಾಡಬೇಕು. ಶಾಸನ ಮಾಡತಕ್ಕ ಕಾಲದಲ್ಲಿ ನನ್ನ ಅನುಭವದ ಆಧಾರದ ಮೇಲೆ, ಅಭ್ಯಾಸದ ಆಧಾರದ ಮೇಲೆ ಸಮಾಜಕ್ಕೆ ಆಗತಕ್ಕ ತೊಡಕುಗಳನ್ನು ಅರಿತುಕೊಂಡು ನನ್ನ ಅಭಿಪ್ರಾಯವನ್ನು ಕೊಡಬೇಕು. ಇದನ್ನು ಮಾಡತಕ್ಕ ಕಾಲದಲ್ಲಿ, ಖಚಿತವಾದ ಅಭಿಪ್ರಾಯವನ್ನು ಕೊಡತಕ್ಕ ಕಾಲದಲ್ಲಿ, ಕಾರ್ಯಾಂಗದವರ ಕೋಪಕ್ಕೂ ತುತ್ತಾಗುತ್ತಾರೆ. ಇಂತಹ ಸಂದರ್ಭದಲ್ಲಿ ಕಾರ್ಯಾಂಗ ಅಂದರೆ, ಸರ್ಕಾರ ನಡೆಸತಕ್ಕವರಿಗೆ ಇರಿಸು ಮುರುಸಾಗುತ್ತದೆ. ಪರಿಸ್ಥಿತಿ ಹೇಗಿದೆ ಎಂದರೆ, ಇತ್ತೀಚಿನ ದಿನಗಳಲ್ಲಿ, ಸರ್ಕಾರಗಳು ಯಾವ ರೀತಿ ನಡೆದುಕೊಳ್ಳುತ್ತಿವೆ ಎಂದರೆ, ಸರ್ಕಾರ ಎಂದರೆ ಅವರ ಪಕ್ಷದ ಸರ್ಕಾರ.

ಇದು ದುರ್ದೈವದ ಸಂಗತಿ. ಜನತಾದಳ ಅಧಿಕಾರಕ್ಕೆ ಬಂದರೆ, ದಳ ಸರ್ಕಾರ ಕರ್ನಾಟಕದ ಸರ್ಕಾರ ಆಗಬೇಕು ಕರ್ನಾಟಕದಲ್ಲಿರತಕ್ಕಂಥ ಸರ್ವ ಪ್ರದೇಶಕ್ಕೂ ಸರ್ವರಿಗೂ ಅದು ಸರ್ಕಾರ ಆಗಬೇಕು. ಸರ್ವರನ್ನೂ ಸಮತೋಲನದಿಂದ ನೋಡಬೇಕು. ಅದು ನೋಡದೇ ಇದ್ದಂತಹ ಕಾಲದಲ್ಲಿ ಏನಾಗುತ್ತದೆ ಅಂದರೆ ಎಲ್ಲಿ ಇವರು ಮಲತಾಯಿ ಧೋರಣೆಯನ್ನು ಅನುಸರಿಸುತ್ತಾರೋ ಅಂತಹ ಕ್ಷೇತ್ರದಲ್ಲಿರತಕ್ಕಂಥ ಶಾಸಕರಿಗೆ, ಇಲ್ಲಿ ಸ್ವತಂತ್ರವಾಗಿ ಕೆಲಸ ನಿರ್ವಹಿಸುವುದಕ್ಕೆ ಕಷ್ಟವಾಗುತ್ತದೆ. ಸರ್ಕಾರದ ಮುಲಾಜಿಗೆ ಹೋಗತಕ್ಕಂಥ ವಾತಾವರಣವನ್ನು ಇವರು ನಿರ್ಮಾಣ ಮಾಡುತ್ತಿದ್ದಾರೆ. ಶಾಸಕರಾದ ಮೇಲೆ ಜನಗಳ ನಿರೀಕ್ಷೆ ಏನು ಇರುತ್ತದೆ ಅಂದರೆ – ಸ್ವಾತಂತ್ರ ಬಂದು 47 ವರ್ಷಗಳಾದ ಮೇಲೆ ನಾವು ಯಾವ ಮಟ್ಟಕ್ಕೆ ತಲುಪಿದ್ದೇವೆಂದರೆ – ಇವತ್ತು ಶಾಸಕನಾದವನು ಏನು ಮಾಡಬೇಕು ಎಂದು ಜನ ಏನು ನಿರೀಕ್ಷೆ ಮಾಡುತ್ತಾರೆಂದರೆ ಇವತ್ತು ಕನಿಷ್ಠ ಸೌಲಭ್ಯಗಳನ್ನು ಅವರಿಗೆ ಒದಗಿಸಿಕೊಟ್ಟಿಲ್ಲ. ಉದಾಹರಣೆಗೆ ಒಂದು ಕಾರ್ಪೋರೇಷನ್ ಏರಿಯಾದಲ್ಲಿ ಇವರು ಹೆಲ್ತ್ ಇನ್ಸ್‌ಪೆಕ್ಟರ್ಸ್ ಕೆಲಸ ಮಾಡಲಿ, ಇಂಜನೀಯರ್ ಕೆಲಸ ಮಾಡಲಿ, ಅಸಿಸ್ಟೆಂಟ್ ಕಮೀಷನರ್ ಕೆಲಸ ಮಾಡಲಿ, ನೀರು ಬಿಡುವವನ ಕೆಲಸ ಮಾಡಲಿ, ಗ್ರಾಮಾಂತರ ಪ್ರದೇಶದಲ್ಲಿ ಆದರೆ ಅವನು ಅಸಿಸ್ಟೆಂಟ್ ಇಂಜನೀಯರ್ ಕೆಲಸ ಮಾಡಲಿ ಅಮಲ್‌ದಾರ್ ಕೆಲಸ ಮಾಡಲಿ ಮತ್ತು ಪೊಲೀಸಿನವರ ಕೆಲಸ ಸಹ ಮಾಡಲಿ. ಎಂದು ಎಲ್ಲರ ಕರ್ತವ್ಯವನ್ನು ಇವರು ಮಾಡಲಿ ಎಂದು ಜನ ನಿರೀಕ್ಷೆ ಮಾಡುತ್ತಾರೆ, Except his own duties as a legislator ಏಕೆಂದರೆ ವಿರೋಧಪಕ್ಷದ ನಾಯಕರಾಗಿ ಶ್ರೀಮಾನ್ ದೇವೇಗೌಡರು ಈ ಸ್ಥಾನಕ್ಕೆ ಗೌರವ ತಂದು ಕೊಟ್ಟವರು. 1967 ನೇ ಇಸವಿಯ ನೆನಪು ಬರುತ್ತದೆ. ವಾಟಾಳ್ ನಾಗರಾಜ್‌ರವರು ಹೇಳುತ್ತಿದ್ದರು. ಇಲ್ಲಿ ಸಾಹುಕಾರ್ ಚೆನ್ನಯ್ಯನವರು ಕೂರುತ್ತಿದ್ದರು. ಮೊಯಿಲಿಯವರು ಕೂಡುವ ಜಾಗದಲ್ಲಿ ಗೋಪಾಲಗೌಡರು ಕೂರುತ್ತಿದ್ದರು. ನನಗೆ ನೆನಪು ಇದೆ. ನಾನು ಏತಕ್ಕೆ ಈ ಮಾತನ್ನು ನೆನಪಿಸಿಕೊಂಡೆ ಅಂದರೆ ತಾವು ರೂಲ್ಸ್‌ಗೆ ಅಂಟಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಸದಸ್ಯರ ಮನಸ್ಸಿನಲ್ಲಿರತಕ್ಕಂಥ ಕಳಕಳಿ ಏನು ಇದೆ, ಅದರಂತೆಯೇ ತಾವು ಹೋಗಬೇಕಾಗುತ್ತದೆ. ಸಭೆಯಲ್ಲಿ ಇರುವ ಮೈಕ್‌ಗಳಿಗೆ ಆಯಸ್ಸು ಕಡಿಮೆ. ಒಂದು ಸಾರಿ ಇದ್ದ ಮೈಕುಗಳನ್ನು ಕಿತ್ತು ಹಾಕಿ ಬೇರೆ ಮೈಕ್‌ಗಳನ್ನು ಹಾಕಿದರು. ಗೋಪಾಲಗೌಡರ ಬಗ್ಗೆ ನನಗೆ ಇನ್ನೂ

ನೆನಪು ಇದೆ. ಬಡವರ ಬಗ್ಗೆ ಅವರು ಹಿಂದೆ ಮಾತನಾಡತಕ್ಕಂಥ ಕಾಲದಲ್ಲಿ ಮಾತನಾಡುತ್ತಾ ಮಾತನಾಡುತ್ತಾ ಆ ಒಂದು ಮನೋವೇಗದಲ್ಲಿ ಸಿಟ್ಟು ಬಂದು ಮೈಕನ್ನು ಕಿತ್ತು ಎಸೆದುಬಿಟ್ಟರು. ನಾವೆಲ್ಲ ಇಲ್ಲೇ ಇದ್ದೆವು; ಕಿತ್ತು ಎಸೆದೇ ಬಿಟ್ಟರು.

ಆ ಕಡೆ ಮಂಜುನಾಥ್ ಅವರು ಇದ್ದರು, ದೇವೇಗೌಡರು ಇದ್ದರು ಕೊಳ್ಳೇಗಾಲದ ನಾಗಪ್ಪನವರು ಇದ್ದದ್ದು ಇವತ್ತು ಇಲ್ಲಿ ಅವತ್ತು ಇದ್ದಂತಹವರು ವಾಟಾಳ್‌ರವರು ಬಂಗಾರಪ್ಪನವರು ವೈ. ರಾಮಕೃಷ್ಣರವರು ನಾನು ಘೋರ್ಪಡೆಯವರು ಇದ್ದೇವೆ. ಗೋಪಾಲಗೌಡರನ್ನು ಸಭೆಯಿಂದ ಸಸ್ಪೆಂಡ್ ಮಾಡಿದರು. ಇಂತಹ ದೊಡ್ಡವರ ಹತ್ತಿರ ಮಾತನಾಡುವುದಕ್ಕೆ ಹೆದರಿಕೆ. ಬಾಳಿಗಾರವರು ನನ್ನನ್ನು ವಾಟಾಳ್‌ರವರನ್ನು ಮತ್ತು ಬಂಗಾರಪ್ಪನವರನ್ನು ಕರೆಸಿ ನಿಮ್ಮ ಗುರುಗಳು ನೀವು ಹೇಳಿದಂತೆ ಕೇಳುತ್ತಾರೆ; ಸ್ವಲ್ಪ ಏನಾದರೂ ಮಾಡಿ "I am sorry" ಎಂದು ಒಂದು ಮಾತು ಹೇಳಿಸಿಬಿಡಿ ನಮಗೆ ಬಹಳ ದುಃಖವಾಗಿದೆ ಎಂದು ಹೇಳಿದರು. ಬಾಳಿಗರು ಮಿಲಿ ಮಿಲಿ ಅಂತ ಒದ್ದಾಡಿ ಹೋಗಿಬಿಟ್ಟರು. ಇವರನ್ನು ಸಸ್ಪೆಂಡ್ ಮಾಡಿದ್ದವೆ ಎಂದು ಬಾಳಿಗರಿಗೆ ಚಿಂತೆ. ನಾವು ಗೋಪಾಲಗೌಡರನ್ನು ಹೋಗಿ ಕೇಳಿಕೊಂಡೆವು. ಕೊನೆಗೆ ಒಪ್ಪಿದರು. ಅವರು, ಭಾಷಣ ಮಾಡಿದಾಗ ವಿಷಾದ ವ್ಯಕ್ತಪಡಿಸಿದ ರೀತಿ ಯಾವ ರೀತಿ ಇತ್ತು ಅಂದರೆ, ಪುಟ್ಟಸ್ವಾಮಿಯವರು ಪಾರ್ಲಿಮೆಂಟ್ ಅಪೇರ್ಸ್ ಮಂತ್ರಿಗಳು ಅಧ್ಯಕ್ಷರೇ ಮಾತನಾಡುತ್ತಾ ಮಾತನಾಡುತ್ತಾ ನನ್ನ ಮನಸ್ಸಿನಲ್ಲಿರತಕ್ಕಂಥ ಆ ವೇದನೆ ಆ ಆವೇಗ ಏನೋ ಆ ಕಾಲದಲ್ಲಿ ಆ ಪರಿಸ್ಥಿತಿಯಲ್ಲಿ ಇದು ನನ್ನ ಕೈಗೆ ಸಿಕ್ಕಿತು ಮುರಿದು ಹಾಕಿದೆ ಒಂದು ವೇಳೆ ಪುಟ್ಟಸ್ವಾಮಿಯವರ ತಲೆ ಏನಾದರೂ ನನ್ನ ಕೈಗೆ ಸಿಕ್ಕಿದ್ದರೆ ಆ ಕತ್ತನ್ನೇ ಮುರಿದು ಎಸೆದುಬಿಡುತ್ತಿದ್ದೆ ಅಂದರು. ಇದು ತಪ್ಪಾದರೇ ನನ್ನ ಮನಸ್ಸಿನ ಸ್ಥಿತಿಯಲ್ಲಿ ಅದು ತಪ್ಪು ಅಷ್ಟೇ ಹೇಳಿ ಕೂತುಕೊಂಡಿದ್ದು. ವಿಷಾದ ಅಂತಲೂ ಹೇಳಲಿಲ್ಲ ನಿಮಗೆ ನೆನಪು ಇರಬಹುದು. ಆದರೂ ಅದನ್ನೇ ವಿಷಾದ ಅಂತ ಪರಿಗಣಿಸಿ ಸಭಾಧ್ಯಕ್ಷರು ರೂಲಿಂಗ್ ಕೊಟ್ಟರು. ಅವರ ಸಸ್ಪೆನ್‌ಷನ್ ಅನ್ನು ಕ್ಯಾನ್ಸಲ್ ಮಾಡಿದರು. ನಾನು ಏತಕ್ಕೆ ಇದನ್ನು ನೆನಸಿಕೊಂಡೆ ಅಂದ್ರೆ ತಾವು minority will have its say, majority will have its way. That is the essence of parliamentary democracy.

ಈ ಗಿಲಿಟಿನ್ ಹಾಕತಕ್ಕಂಥ ಪದ್ಧತಿ. ಇದು ಆಗತಕ್ಕಂಥದ್ದು ಅಲ್ಲ ಇವತ್ತು ವಿಶೇಷವಾಗಿ ಸ್ವತಂತ್ರ ಬಂದ ಮೇಲೆ ರಾಜ್ಯ ವಿಸ್ತಾರಗೊಂಡ ಮೇಲೆ 56ನೇ ಇಸವಿ ಆದಮೇಲೆ ವಿರೋಧ ಪಕ್ಷದಲ್ಲಿ ಅತಿಹೆಚ್ಚಿನ ಜನ ಇರತಕ್ಕಂಥಾದ್ದು ಈಗ 108ಜನ. 67ನೇ ಇಸವಿಯಲ್ಲಿ 83ಇತ್ತು. 83ನೇ ಇಸವಿಯಲ್ಲಿ 99ಇತ್ತು ಅಂತ ಕಾಣುತ್ತದೆ ಈ ಕಡೆ. ಈಗ 108ಜನ ಇದ್ದಾರೆ. ಚರ್ಚೆ ಅಂದ್ರೆ ಸರ್ಕಾರದ ಪರವಾಗಿ ಇತ್ತೀಚಿನ ದಿನಗಳಲ್ಲಿ ಸರ್ಕಾರ ಕೇಳಿದ್ದಕ್ಕೆಲ್ಲ ಹೌದುಅಂತ ಹೇಳುವುದೇ. ಸರ್ಕಾರದ ಕಡೆಯಿಂದ ಮಾತನಾಡುವಂತಾದ್ದೇ ಇರುವುದಿಲ್ಲ. ಸರ್ಕಾರದ ಕೆಲಸಕಾರ್ಯಗಳ ಬಗ್ಗೆ ಕಾರ್ಯಾಂಗದ ಕಾರ್ಯ ವೈಖರಿಗಳ ಬಗ್ಗೆ ಬೆಳಕನ್ನು ಚೆಲ್ಲತಕ್ಕಂಥವರು ಈ ಭಾಗದವರು.

ಇವರಿಗೆ ಅವಕಾಶ ಜಾಸ್ತಿ ಬೇಕಾಗುತ್ತದೆ. ಹೊಸಬರು ಬಂದಿದ್ದಾರೆ ನಮ್ಮ ಯುವಕ ಮಿತ್ರರು ಇದ್ದಾರೆ ಕೆಲವು ಸಾರಿ ಅವರೂ ಚರ್ಚೆ ಮಾಡಬೇಕು ಅಂತಾರೆ. ಬಹುಶಃ ಅವರು ಇಂತಹ ರೂಲ್ಸ್ ಕೆಳಗೆ ಎಂದು ಬರೆಯದೇ ಇರಬಹುದು. ಆ ಬಗ್ಗೆ ತಾವು ತಮ್ಮ ಕಛೇರಿಗೆ ಸೂಕ್ತ ತಿಳಿವಳಿಕೆ ಕೊಟ್ಟು ಅವರೇ ಅದನ್ನು ತಿದ್ದುಪಡಿ ಮಾಡಿಕೊಳ್ಳಬೇಕು. ಹೊಸಬರು ಇರುವುದರಿಂದ ಇಂತಹ ರೂಲ್ಸ್ ಅಂತ ಅವರೇ ಬರೆದುಕೊಳ್ಳಬೇಕು.

ಒಟ್ಟಿನಲ್ಲಿ, ಸರ್ಕಾರದವರು ಈ ವಿಧಾನಸಭೆಯ ಸಾರ್ವಭೌಮತ್ವವನ್ನು ಎತ್ತಿ ಹಿಡಿಯತಕ್ಕಂಥ ಪ್ರಮುಖ ಪಾತ್ರಧಾರಿಗಳಾಗಬೇಕು. ಈ ಹಿಂದೆ ನಾವು ನೋಡಿದ ಹಾಗೆ 1967 ರಿಂದ 71ನೇ ಇಸವಿಯವರೆಗೆ ಈ ಸದನದಲ್ಲಿ ಪ್ರಿವಿಲೇಜ್ ಮೋಷನ್ ಇಲ್ಲದೆ ಇರತಕ್ಕಂಥ ದಿವಸ ಇರಲಿಲ್ಲ. ಇದು

ಮಾನ್ಯ ಬಂಗಾರಪ್ಪನವರಿಗೆ ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ನೆನಪು ಇರಬೇಕು. ಆಗ ಲಾ ಅಂಡ್ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಆಗಿದ್ದ ಪುಟ್ಟಸ್ವಾಮಿಯವರು ರೆಫರೆನ್ಸ್ ಮಾಡುವುದಕ್ಕಾಗಿ ಬಹಳಷ್ಟು ಪುಸ್ತಕಗಳನ್ನು ತರುತ್ತಿದ್ದರು. ನಮ್ಮ ರಾಯಚೂರು ನಾಗಪ್ಪನವರು ಆಗ ಪಾಯಿಂಟ್ ಆಫ್ ಆರ್ಡರ್ ಜಾಸ್ತಿ ಎತ್ತುತ್ತಿದ್ದರು. ಈಗಲೂ ಕೂಡ ಅದೇ ರೀತಿ ಅರ್ಥಗರ್ಭಿತವಾಗಿ ವಿಧಾನಸಭೆಯಲ್ಲಿ ಚರ್ಚೆ ನಡೆಯಬೇಕು. ಸರ್ಕಾರಕ್ಕಿಂತ ಸದನ ದೊಡ್ಡದು ಎನ್ನುವ ಮಟ್ಟದಲ್ಲಿ ಸದನದ ಘನತೆ ಗೌರವವನ್ನು ಅರಿತುಕೊಂಡು ಸರ್ಕಾರ ನಡೆದುಕೊಳ್ಳಬೇಕು. ಆ ಮಟ್ಟಕ್ಕೆ ನೀವು ಅವರಿಗೆ ಛಾಟಿ ತೆಗೆದುಕೊಂಡು ಹೊಡೆಯಬೇಕು. ಇದನ್ನು ನಾನು ತಮ್ಮಿಂದ ನಿರೀಕ್ಷಣೆ ಮಾಡುತ್ತೇನೆ. ಇದರಲ್ಲಿ ತಾವು ಪಕ್ಷಪಾತಿಗಳೇ ಆಗಬೇಕಾಗುತ್ತದೆ. ಇದು ಮಾನ್ಯ ಜೆ.ಹೆಚ್. ಪಟೇಲರಿಗೆ ಗೊತ್ತಿದೆ. ಪ್ರಿವಿಲೇಜ್ ಮೋಷನ್ ಮೇಲೆ ಎರಡು ದಿನ ಇಲ್ಲಿ ಚರ್ಚೆ ನಡೆದಿತ್ತು. ಒಂದು ಲ್ಯಾಂಡ್ ರೆವಿನ್ಯೂ ಅಮೆಂಡ್‌ಮೆಂಟ್ ಆ್ಯಕ್ಟ್‌ಗೆ 8 ದಿವಸ ಈ ಮನೆಯಲ್ಲಿ ಧರಣಿ ಕುಳಿತಿದ್ದೆವು. ಮಾನ್ಯ ಮಂತ್ರಿಗಳಾಗಿದ್ದ ಲಕ್ಕಪ್ಪಗೌಡರ ವಿಚಾರದಲ್ಲಿ ನಾನು ಕೊಟ್ಟ ಪ್ರಿವಿಲೇಜ್ ಮೋಷನ್ ಮೇಲೆ ಎರಡು ದಿವಸ ಚರ್ಚೆ ನಡೆಯಿತು. ಆದ್ದರಿಂದ ತಾವು ಸದಸ್ಯರ ಪರವಾಗಿ ಪಕ್ಷಪಾತಿಗಳಾಗಬೇಕು; ಸರ್ಕಾರದ ಪರವಾಗಿ ಅಲ್ಲ. ಇದನ್ನು ಮಾನ್ಯ ಜೆ.ಹೆಚ್. ಪಟೇಲರೂ ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ತಮ್ಮ ಕಾರ್ಯದಲ್ಲಿ ಯಶಸ್ಸು ದೊರೆಯಲಿ, ವಿಶೇಷವಾದ ಒಂದು ಪರಿಸ್ಥಿತಿಯಲ್ಲಿ ತಾವು ಅಧ್ಯಕ್ಷರಾಗಿದ್ದೀರಿ, ಈ ಸದನದ ಘನತೆ ಗೌರವ, ಈ ವಿಧಾನಸಭೆ ಕಾರ್ಯಾಂಗಕ್ಕಿಂತ ದೊಡ್ಡದು ಎಂದು ಎತ್ತಿ ಹಿಡಿಯತಕ್ಕಂಥ ಶಕ್ತಿ ತಮಗೆ ಬರಲೆಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು):– ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ವಿರೋಧಪಕ್ಷದ ನಾಯಕರು ಹಾಗೂ ಇತರ ಮುಖಂಡರುಗಳು ಮತ್ತು ಹಿರಿಯ ಸದಸ್ಯರುಗಳು ತಮ್ಮನ್ನು ಅಭಿನಂದಿಸಿದ್ದಾರೆ. ಅದೇ ಪ್ರಕಾರವಾಗಿ ನಾನು 22 ವರ್ಷಗಳಿಂದ ತಮ್ಮನ್ನು ರಾಜಕೀಯವಾಗಿ ಬಲ್ಲೆ. ರಾಜಕೀಯ ಚತುರತೆ, ಸಂಸದೀಯ ಗುಣಮಟ್ಟ, ಸಿದ್ಧಾಂತಗಳು ತಮ್ಮ ಚಿಕ್ಕ ವಯಸ್ಸಿನಿಂದಲೂ ಜೊತೆಯಾಗಿ ಬಂದಿವೆ. ಮಾನ್ಯ ಹಿರಿಯ ಸದಸ್ಯರು ಹೇಳಿದ ಪ್ರಕಾರ ಆ ಸ್ಥಾನ ಅತ್ಯಂತ ಎತ್ತರದ ಸ್ಥಾನ. ವಿರೋಧ ಪಕ್ಷದ ನಾಯಕರುಗಳು ತಮ್ಮ ಕಡೆ ಕಣ್ಣು ಹಾಯಿಸಬೇಕೆಂದು ಕೇಳಿಕೊಂಡಿದ್ದಾರೆ, ನನ್ನ ಒಂದು ಸಲಹೆ ಏನೆಂದರೆ, ತಾವು ಇಡೀ ಸದನದ ಕಡೆ ಕಣ್ಣು ಹಾಯಿಸಬೇಕು. ಆಡಳಿತ ಪಕ್ಷದ ಸದಸ್ಯರೆಂದರೆ ನಾವು ಇಲ್ಲಿ ಬಂದು ಕುಳಿತುಕೊಳ್ಳುವವರೆಂದು ತಾವು ಭಾವಿಸಿಕೊಳ್ಳಬಾರದು. ಅತ್ಯಂತ ಜವಾಬ್ದಾರಿತನವಾದ ಆ ಸ್ಥಾನವು ಎಲ್ಲರಿಗೂ ಸಹಾ ಹೊಣೆಯಾಗಬೇಕು. ತಾವು ನಮ್ಮ ಕಡೆಯೂ ಸಹಾ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತಾ ತಾವು ಆ ಸ್ಥಾನದ ಗೌರವವನ್ನು ಕಾಪಾಡುತ್ತೀರೆಂದು ತಿಳಿದುಕೊಂಡಿದ್ದೇವೆ. ನನಗೆ ಒಂದು ಹೆಮ್ಮೆಯಾದ ವಿಷಯವೇನೆಂದರೆ, ನಾನೂ, ನೀವು ಮತ್ತು ಮಲ್ಲಿಕಾರ್ಜುನ ಸ್ವಾಮಿಯವರು ರಾಜಕಾರಣವನ್ನು 1971 ರಲ್ಲಿ ಪ್ರಾರಂಭ ಮಾಡಿದಾಗ, ದಿವಂಗತ ಮಲ್ಲಿಕಾರ್ಜುನ ಸ್ವಾಮಿಯವರು ತಮಗೆ ಸಂಸದೀಯ ವ್ಯವಹಾರದಲ್ಲಿ ಬಹಳ ಆಸಕ್ತಿ ಇದೆ ಎನ್ನತಕ್ಕಂಥ ಮಾತನ್ನು 20 ವರ್ಷಗಳ ಹಿಂದೆಯೇ ಹೇಳಿದ್ದು ನನಗೆ ಇನ್ನೂ ಜ್ಞಾಪಕದಲ್ಲಿದೆ. ಆ ಒಂದು ಅನುಭವವನ್ನು ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ನಮ್ಮ ಪಕ್ಷವು ಗುರುತಿಸಿ ಆ ಅವಕಾಶವನ್ನು ಕೊಟ್ಟಿದೆಯೆಂದು ಹೇಳಿದರೆ ತಪ್ಪಾಗಲಾರದು. ಇದು ಬಹಳ ಅನುಭವವುಳ್ಳಂಥ ವಿಧಾನಸಭೆಯಾಗಿದೆ. ಆಡಳಿತ ಪಕ್ಷದಲ್ಲಿದ್ದವರು ವಿರೋಧ ಪಕ್ಷದಲ್ಲಿ ಇದ್ದಾರೆ, ವಿರೋಧ ಪಕ್ಷದಲ್ಲಿ ಇದ್ದವರು ಆಡಳಿತದಲ್ಲಿ ಇದ್ದಾರೆ. ಮೊದಲು ಆಡಳಿತದಲ್ಲಿ ಇದ್ದಂಥವರು

ಇವತ್ತೂ ಆಡಳಿತದಲ್ಲಿ ಇರುವಂಥ ನಮ್ಮಂಥವರೂ ಇದ್ದೇವೆ. ನನ್ನ ಸಲಹೆ ಏನೆಂದರೆ, ಹೆಚ್ಚು ದಿವಸ ಸದನ ನಡೆಯಬೇಕೆಂದು ನಮ್ಮ ಆಸೆ. ಎರಡನೆಯದಾಗಿ ಈ ಸದನದಲ್ಲಿ ಕಾಲ ವ್ಯರ್ಥ ಆಗಬಾರದು.

ತಮ್ಮ ಚಾಣಾಕ್ಷತನದಿಂದ ಯಾವ ವಿಚಾರಕ್ಕೆ ಆದ್ಯತೆಯನ್ನು ಕೊಡಬೇಕೆಂಬುದನ್ನು ತಾವು ತೀರ್ಮಾನ ಮಾಡಬೇಕು. ನಾಲ್ಕನೆಯದಾಗಿ ಮಾನ್ಯ ಬಂಗಾರಪ್ಪನವರು ಹೇಳಿದ ರೀತಿಯಲ್ಲಿ ಸಂಖ್ಯೆಗಿಂತ ವಿಚಾರಕ್ಕೆ ತಾವುಗಳು ಗಮನವನ್ನು ಹರಿಸುತ್ತೀರಿ ಎಂದು ನಾನು ಭಾವಿಸುತ್ತೇನೆ. ವಿಚಾರಕ್ಕೆ ಗಮನ ಹರಿಸಿದಾಗ ಮಾತ್ರ ಸಾರ್ವಜನಿಕರು ಈ ಸದನದಲ್ಲಿ ನಡೆಯತಕ್ಕಂಥ ಕಲಾಪಗಳಿಗೆ ಮೆಚ್ಚುಗೆಯನ್ನು ಸೂಚಿಸುತ್ತಾರೆ ಮತ್ತು ಗೌರವವನ್ನು ಸೂಚಿಸುತ್ತಾರೆ. ಅದರಿಂದ ಸಾರ್ವಜನಿಕರಿಗೆ ಪ್ರಯೋಜನವೂ ಆಗುತ್ತದೆ. ಆದ್ದರಿಂದ ಎಲ್ಲಾ ವಿಷಯಗಳಲ್ಲಿಯೂ ವಿಚಾರಕ್ಕೆ ಹೆಚ್ಚು ಮಹತ್ವ ಕೊಡಬೇಕೆಂದು ತಮ್ಮನ್ನು ನಾನು ಬೇಡಿಕೊಳ್ಳುತ್ತೇನೆ. ತಾವು ಶಕ್ತಿವಂತರು, ತಮಗೆ ಅನುಭವ ಇದೆ, ದೇವರು ಸಾಕಷ್ಟು ಬುದ್ಧಿಯನ್ನು ಕೊಟ್ಟಿದ್ದಾನೆ. ಹೀಗೆ ಚಿಕ್ಕವಯಸ್ಸಿನವರೇ ಇವೊತ್ತು ಸದನಕ್ಕೆ ಅಧ್ಯಕ್ಷರಾಗಬೇಕಾಗಿದೆ. ಏಕೆಂದರೆ ಎಲ್ಲಾ ಹಿರಿಯರು ಕೆಳಗಡೆ ಕುಳಿತಿರುವಾಗ ಕಿರಿಯರು ಮೇಲ್ಗಡೆ ಕುಳಿತರೆ ಅದೊಂದು ಹೊಸ ಸಂದರ್ಭ ಎಂದು ನನಗನ್ನಿಸುತ್ತದೆ. ನಿಮ್ಮ ಮಾರ್ಗದರ್ಶನ ನಮಗೆಲ್ಲರಿಗೂ ಆಗಲಿ ಎಂದು ಹೇಳಿ, ಬರತಕ್ಕಂಥ ಮುಂದಿನ ದಿನಗಳಲ್ಲಿ ತಮಗೆ, ಧೈರ್ಯ–ಸ್ಥೈರ್ಯ, ಹಾಗೂ ಎಲ್ಲಾ ಶುಭಗಳೂ ಸಿಗಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಬಹಳ ಜನ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಬೇಕೆಂದು ತಿಳಿಸಿದ್ದೀರಿ. ಆದರೆ ದಿವಂಗತ ಮಾಜಿ ರಾಷ್ಟ್ರಪತಿಗಳಾದ ಜೈಲ್‌ಸಿಂಗ್‌ರವರ ಪಾರ್ಥೀವ ಶರೀರದ ಅಂತ್ಯಕ್ರಿಯೆಯು ಸ್ವಲ್ಪ ಸಮಯದಲ್ಲಿಯೇ ಪ್ರಾರಂಭವಾಗಲಿದೆ. ಅದೆಲ್ಲ ಪ್ರಾರಂಭವಾದ ಮೇಲೆ ನಾವಿಲ್ಲಿ ಕುಳಿತು ಕಲಾಪಗಳನ್ನು ನಡೆಸುವುದು ಅಸಭ್ಯವಾಗುತ್ತದೆ. ಆದ್ದರಿಂದ ಕೆಲವು ಸದಸ್ಯರುಗಳಿಗೆ ಮಾತ್ರ ಅವಕಾಶವನ್ನು ಕೊಡುತ್ತೇನೆ. ಸೀಮಿತ ಅವಧಿಯಲ್ಲಿಯೇ ತಮ್ಮಅಭಿಪ್ರಾಯಗಳನ್ನು ವ್ಯಕ್ತ ಮಾಡಿ ನಾವು ಬೇಗ ಕಲಾಪಗಳನ್ನು ಮುಕ್ತಾಯಗೊಳಿಸಬೇಕಾಗುತ್ತದೆ. ಆದ್ದರಿಂದ ಎಲ್ಲರೂ ಎರಡು ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸಿ ಸಹಕಾರ ನೀಡಬೇಕು – ಎಂದು ವಿನಂತಿಸಿಕೊಳ್ಳುತ್ತೇನೆ.

Sri B.I. PATIL (M.E.S):– Hon'ble Speaker Sir, on behalf of Maharashtra Ekikaran Samithi we heartily congratulate you on your unanimous election as Speaker of this august House. We know that you have struggled a long way to reach this position and we hope and trust you would endeavour to protect the rights and privileges of the minorities. We wish you all success in your new assignment. Thank you.

† ಶ್ರೀ ಬಿ.ಆರ್. ಯಾವಗಲ್ (ನರಗುಂದ):– ಸನ್ಮಾನ್ಯ ಅಧ್ಯಕ್ಷರೇ, ತಾವು ಸಭಾಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ ತಮ್ಮನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಹಲವಾರು ವರ್ಷಗಳಿಂದ ತಮ್ಮನ್ನು ನಾನು ಬಲ್ಲವನಾಗಿದ್ದೇನೆ. ಒಂದು ದುಃಖದ ಮಾತು ಅಂದರೆ ತಾವುಗಳು ನಮ್ಮ ಕಡೆ ಅಥವಾ ಸದನದಲ್ಲಿ ಹೊರಗಡೆ ಇದ್ದಿದ್ದರೆ ತಮ್ಮ ಮಾತಿನ ಚಾಟಿಯನ್ನು, ತಮ್ಮ ವಿಚಾರಧಾರೆಯನ್ನು ತಮ್ಮ ಅವಿಷ್ಕೃತ ನುಡಿಗಳನ್ನು, ಆವೇಶದ ನುಡಿಗಳನ್ನು ಇನ್ನೂ ಹೆಚ್ಚಾಗಿ ನಾವು ಕೇಳಬಹುದಾಗಿತ್ತು. ಇವೊತ್ತು ರಚಿತವಾದಂಥ ಸದನದಲ್ಲಿ ನಾವೇನಿದ್ದೇವೆ, ಇಲ್ಲಿ ಜನತೆಯ ಆಶೋತ್ತರಗಳನ್ನು ಪ್ರತಿಬಿಂಬಿಸಲಿಕ್ಕೆ, ಹೇಳಲಿಕ್ಕೆ ನಾವಿಲ್ಲಿ ಬಂದಿದ್ದೇವೆ. ಈ ಸಭೆಯ ಕಾರ್ಯಕಲಾಪಗಳನ್ನು ನಾನು

ಉಪಾಧ್ಯಕ್ಷನಾಗಿ ಬಹಳ ಸಮೀಪದಿಂದ ನೋಡಿದ್ದೇನೆ. ಡಿಸ್ಪ್ಯೂಟ್‌ಗಳ ಬಗ್ಗೆ ಚರ್ಚೆ ಮಾಡುವಾಗ ಒಂದು ವಿಷಯದ ಬಗ್ಗೆ ಪ್ರಾಶಸ್ತ್ಯ ಕೊಡುವಂಥ ಸಂದರ್ಭದಲ್ಲಿ ಯಾವ ವಿಷಯಗಳ ಮೇಲೆ ಪ್ರಾಶಸ್ತ್ಯ ನೀಡಬೇಕು ಅವುಗಳು ಹಿಂದಕ್ಕೆ ಬೀಳುವಂಥ ಸಂದರ್ಭಗಳನ್ನು ಕೂಡ ಬಹಳಷ್ಟು ನೋಡಿದ್ದೇನೆ. ಅದರಲ್ಲಿಯೂ ವಿಶೇಷವಾಗಿ ಹಳ್ಳಿಗಾಡಿನ ಸಮಸ್ಯೆಗಳ ಬಗ್ಗೆ, ರೈತರ ಸಮಸ್ಯೆಗಳ ಬಗ್ಗೆ, ಬಡವರ್ಗದವರ ಸಮಸ್ಯೆಗಳ ಬಗ್ಗೆ, ಪ್ರಸ್ತಾಪ ಬಂದಾಗ ಬಹಳ ಕಡಿಮೆ ಚರ್ಚೆಯಾದುದನ್ನು ನಾನು ನೋಡಿದ್ದೇನೆ. ತಾವುಗಳು ಕೂಡ ಈ ಎಲ್ಲಾ ಹಿನ್ನಲೆಯಿಂದ ಬಂದವರಾಗಿದ್ದು, ಹಳ್ಳಿಗಾಡು ಪ್ರದೇಶಗಳ ರೈತರ ಮತ್ತು ಬಡವರ ನೋವು – ನಲಿವುಗಳನ್ನು ಬಲ್ಲವರಾಗಿದ್ದೀರಿ. ಅದನ್ನು ಅರಿತುಕೊಂಡ ತಾವು ಆ ಪೀಠವನ್ನು ಅಲಂಕಾರ ಮಾಡಿರುವುದರಿಂದ ಅಂಥ ವಿಚಾರಗಳು ಬಂದಾಗ ವಿಶೇಷವಾದಂಥ ಚರ್ಚೆಯು ನಡೆಯುವಂತೆ ತಾವುಗಳು ನೋಡಿಕೊಳ್ಳುತ್ತೀರಿ, ಮತ್ತು ಆ ವರ್ಗಗಳಿಗೆ ನ್ಯಾಯ ಒದಗಿಸುತ್ತೀರಿ ಎಂದು ನಾನು ಭಾವಿಸುತ್ತೇನೆ. ನಾನು ಹಿಂದಿನ ಒಂದು ಸಂದರ್ಭವನ್ನು ಜ್ಞಾಪಿಸಿಕೊಳ್ಳುತ್ತೇನೆ, ತಾವು ಸದಸ್ಯರಾಗಿ ಇಲ್ಲಿ ಕುಳಿತಿರುವಾಗ, ಉಪಾಧ್ಯಕ್ಷನಾಗಿ ನಾನು ಅಲ್ಲಿ ಕುಳಿತಿರುವಾಗ, ಒಂದು ಮಾತನ್ನು ತಾವು ಹಾಸ್ಯವಾಗಿ ಹೇಳುತ್ತಾ ಇದ್ದೀರಿ.

ಉಪಾಧ್ಯಕ್ಷರನ್ನು ಯಾವ ರೀತಿಯಾಗಿ ತಾವು ಕಂಡದ್ದು ಕಾಣಬೇಕು ಅವರಿಗೆ ಅವಕಾಶ ನೀಡಬೇಕು ಎಂಬ ಮಾತಿಗೆ ಹಿಂದಿನ ಉಪಾಧ್ಯಕ್ಷರಿಗೆ ನಗೆಚಾಟಿಗೆ ಮಾಡಿದ್ದನ್ನು ನೆನಸಿಕೊಳ್ಳುತ್ತೇನೆ. ತಮ್ಮ ಕಾಲದಲ್ಲಾದರೂ ಆ ಉಪಾಧ್ಯಕ್ಷರಿಗೆ ಒಳ್ಳೆಯ ಅವಕಾಶ ನೀಡುತ್ತೀರೆಂದು ಆಶಯ ಪಡುತ್ತಾ, ತಮಗೆ ಮತ್ತೊಮ್ಮೆ ನಾನು ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಪುಟ್ಟಣ್ಣಯ್ಯ ಕೆ.ಎಸ್. (ಪಾಂಡವಪುರ):– ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರೇ, ಸ್ನೇಹಿತರೇ ನಮ್ಮ ಹಿರಿಯ ಸದಸ್ಯರು ಮಾತನಾಡುವಾಗ ಶಾಸನಬದ್ಧವಾಗಿ ಮಾತನಾಡಬೇಕಾದ ನಿಯಮದ ಬಗ್ಗೆ ಹಿರಿಯರು ತಿಳಿವಳಿಕೆ ಕೊಡಬೇಕೆಂದು ಬಹಳ ಚರ್ಚೆ ಮಾಡಿದರು. ನಾವೆಲ್ಲಾ ಸೇರಿಕೊಂಡು ಇಷ್ಟು ಮಾತನಾಡುತ್ತೇವೆ. ಮಾತಿಗಿಂತ ಕೃತಿ ಬಹಳ ಮುಖ್ಯ. ಕೃತಿಯಡಿಯಲ್ಲಿ ಮಾತು ಏನೂ ಪ್ರಯೋಜನವಿಲ್ಲ. ಏಕೆಂದರೆ 224ಶಾಸಕರು ನಾವೇನಿದ್ದೇವೆ ಕರ್ನಾಟಕದ 5ಕೋಟಿ ಜನರ ಜವಾಬ್ದಾರಿ ಹೊರುವವರು, ಹೊತ್ತಿದ್ದೇವೆ. ಆದರೆ ನಾವು ಎಷ್ಟು ಒಳ್ಳೆಯವರು ಎಷ್ಟು ಕೆಟ್ಟವರು, ಇಲ್ಲಿ ಏನು ಕೆಲಸ ಮಾಡುತ್ತೇವೆ ಎಂದು ಕಂಡುಹಿಡಿಯುವ ವಿಚಾರ ಏನೂ ಇಲ್ಲ. ಏಕೆಂದರೆ ಒಬ್ಬ ಮನುಷ್ಯನಿಗೆ ಜ್ವರ ಬಂದರೆ ಥರ್ಮಾಮೀಟರ್ ಹಾಕಬಹುದು ಇಷ್ಟು ಡಿಗ್ರಿ ಜ್ವರ ಇದೆ ಎಂದು ಹೇಳಬಹುದು. ಹಾಲಿಗೆ ನೀರು ಹಾಕಿದ್ದರೆ ಕ್ಷೀರಮಾಪಕ ಇವೆ ಕಂಡುಹಿಡಿಯುವುದಕ್ಕೆ. ನಾವು ಹಿರಿಯರು ಕಿರಿಯರು ಎಷ್ಟೆಷ್ಟು ಒಳ್ಳೆಯ ಕೆಲಸ, ಎಷ್ಟೆಷ್ಟು ಕೆಟ್ಟವರು ಎಂದು ಕಂಡುಹಿಡಿಯುವ ಮೆಶಿನ್ ನಾವ್ಯಾರೂ ಮಡಗಿಕೊಂಡಿಲ್ಲ. ಆದ್ದರಿಂದ ಏನು ಮಾತನಾಡಿದಿರಿ ಅದನ್ನು ಕೃತಿಯಲ್ಲಿ ಮಾಡಿ ತೋರಿಸಿ. ನಿಜವಾಗಿಯೂ ನಾವು ಬಹಳ ಜವಾಬ್ದಾರಿ ಕೆಲಸವನ್ನು ಮಾಡುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಗ್ರಾಮೀಣ ಜನತೆಯ ಬಗ್ಗೆ ಹೇಳಿದರು. ಇದು ಬಹಳ ಮುಖ್ಯವಾದ ಸಮಸ್ಯೆ. ಸರ್ಕಾರದಿಂದ ನಾವು ಒಂದು ರೂ. ಹಣವನ್ನು ಖರ್ಚು ಮಾಡಿದರೆ ಅದರಲ್ಲಿ ಇವತ್ತು 60 ಪೈಸೆ ಕಳ್ಳತನ ಆಗುವ ವಿಷಯ ನಮಗೆಲ್ಲರಿಗೂ ಗೊತ್ತಿದೆ. ನಾವು ಎಷ್ಟು ಹಣವನ್ನು ಖರ್ಚು ಮಾಡುತ್ತೇವೆ, ಅದು ಜನರಿಗೆ ಎಷ್ಟು ಉಪಯೋಗ ಆಗುತ್ತದೆ ಎಂಬ ವಿಚಾರದಲ್ಲಿ ಎಲ್ಲಾ ಶಾಸಕರು ಒಂದು ನಿಯಮ ಶಿಸ್ತನ್ನು ಅಳವಡಿಸಿ ಎಲ್ಲರೂ ಅತ್ಯಂತ ಜವಾಬ್ದಾರಿಯುತವಾಗಿ, ಕೇವಲ ಬೆಂಗಳೂರಿನಲ್ಲಿ ಕಾಲ ಕಳೆಯದೆ ನಮ್ಮ ಕ್ಷೇತ್ರಗಳಲ್ಲಿ ಭ್ರಷ್ಟಾಚಾರ ನಡೆಯುವುದನ್ನು ತಡೆದರೆ ಇಡೀ ರಾಜ್ಯದ ಅಭಿವೃದ್ಧಿ ಬಹಳ ಆಗುತ್ತದೆ ಎಂದು ನನ್ನ ಅಭಿಪ್ರಾಯ. ಎರಡು ನಿಮಿಷ ಅವಕಾಶ ಕೊಟ್ಟಿರುವುದರಿಂದ ಪಕ್ಷಾತೀತವಾಗಿ ಕೆಲಸ

ಮಾಡಿ ಅಧ್ಯಕ್ಷರು ಈ ಸದನದ ಗೌರವವನ್ನು ಕಾಪಾಡಿಕೊಳ್ಳಬೇಕೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ (ಬಾಗೆಪಲ್ಲಿ):- ಅಧ್ಯಕ್ಷರೇ ನೀವು ಸಭಾಧ್ಯಕ್ಷರಾಗಿ ಆಯ್ಕೆಯಾಗಿದ್ದಕ್ಕೆ ವೈಯಕ್ತಿಕವಾಗಿ ಹಾಗೂ ಸಿಪಿಐಎಂ ಪಕ್ಷದ ಪರವಾಗಿ ನಿಮ್ಮನ್ನು ಅಭಿನಂದಿಸುತ್ತೇನೆ. ನೀವು ಬಹಳ ವಿಶಿಷ್ಟವಾದ ಸಂದರ್ಭದಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದೀರಿ. ನಮ್ಮ ದೇಶ ನಮ್ಮ ರಾಜ್ಯ ಬರುವ ದಿನಗಳಲ್ಲಿ ಬಹಳ ಕ್ಲಿಷ್ಟವಾದ ಸಮಸ್ಯೆಗಳನ್ನು ಎದುರಿಸುವಂತಹ ಸಂದರ್ಭ ಖಚಿತವಾಗಿದೆ. ಆ ಸಂದರ್ಭದಲ್ಲಿ ಅಧ್ಯಕ್ಷರಾಗಿ ನೀವು ಆಯ್ಕೆಯಾಗಿದ್ದೀರಿ. ಈ ಸಂದರ್ಭದಲ್ಲಿ ನೀವು ರಾಜ್ಯಕ್ಕೆ, ದೇಶಕ್ಕೆ ಸಂಬಂಧಪಟ್ಟ ಹಲವಾರು ಗಹನ ವಿಷಯಗಳು ಈ ಸದನದಲ್ಲಿ ಚರ್ಚೆಗೆ ಬರುವ ಅವಕಾಶ ಸಂದರ್ಭಗಳು ಹೆಚ್ಚಾಗಿ ಇವತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ ಕಂಡುಬರುತ್ತಾ ಇದೆ. ಅಂತಹ ಸಂದರ್ಭದಲ್ಲಿ ಸದನದ ಕಾನೂನುಗಳಿಗೆ ಅದರ ತಾಂತ್ರಿಕತೆಗೆ ಗಂಟು ಬೀಳದೆ ನಿಜವಾಗಿ ಜನರ ಆಶೋತ್ತರಗಳನ್ನು ದೇಶದ ಮತ್ತು ರಾಜ್ಯದ ಸಮಸ್ಯೆಗಳನ್ನು ಗಂಭೀರವಾಗಿ ಚರ್ಚೆ ಮಾಡಲು ಎಲ್ಲಾ ಮಾನ್ಯ ಸದಸ್ಯರಿಗೂ ಅವಕಾಶ ಕೊಡುವ ರೀತಿಯಲ್ಲಿ ನೀವು ವರ್ತಿಸುತ್ತೀರಿ ಎಂದು ನನಗೆ ನಂಬಿಕೆ ಇದೆ. ಅದೇ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳ ಬಗ್ಗೆ ಜನತೆಗೆ ತೀವ್ರ ಹೋರಾಟ ಬರುವ ಸಂದರ್ಭ ಇದೆ. ನೀವೂ ಹಲವಾರು ಹೋರಾಟಗಳಿಂದಲೇ ರಾಜಕಾರಣದಲ್ಲಿ ಬೆಳೆದುಬಂದವರು. ಆ ಹೋರಾಟಗಳ ಬಗ್ಗೆ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವಾಗ ಸದನದಲ್ಲಿ ನೀವು ನಿಷ್ಪಕ್ಷಪಾತರಾಗಿ ವರ್ತಿಸುತ್ತೀರೆಂದು ನನಗೆ ನಂಬಿಕೆ ಇದೆ.

12.15 ಪಿ.ಎಂ.

ಅದೇ ಸಂದರ್ಭದಲ್ಲಿ ಈ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಜನತೆಯ ಸಮಸ್ಯೆಗಳನ್ನು ಚರ್ಚೆ ಮಾಡುವಾಗ ಅನಾವಶ್ಯಕವಾಗಿ ಸದನದ ವೇಳೆಯನ್ನು ವ್ಯಯ ಮಾಡದೆ ಸರಿಯಾದ ರೀತಿಯಲ್ಲಿ ಚರ್ಚೆಗೆ ಅವಕಾಶ ಕೊಡಬೇಕು. ಸರಕಾರ ಸದನದ ಕಲಾಪಗಳಿಗೆ ಪ್ರತಿ ದಿವಸ ಲಕ್ಷಾಂತರ ರೂಪಾಯಿಗಳ ಜನತೆಯ ಹಣವನ್ನು ಖರ್ಚು ಮಾಡುತ್ತಿದೆ. ಸದನದಲ್ಲಿ ಅವಕಾಶವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಲಿಕ್ಕೆ ನೀವು ಅವಕಾಶ ಮಾಡಿಕೊಡಬೇಕೆಂದು ಹೇಳಿ ಮತ್ತೊಮ್ಮೆ ನನ್ನ ಪರವಾಗಿ ಮತ್ತು ನಮ್ಮಪಕ್ಷದ ಪರವಾಗಿ ನಿಮಗೆ ಅಭಿನಂದನೆ ಸಲ್ಲಿಸುತ್ತಾ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಪ್ರಮಿಳಾ ನೇಸರ್ಗಿ (ಚಾಮರಾಜ ಪೇಟೆ):- ಮಾನ್ಯ ಸಭಾಧ್ಯಕ್ಷರೇ, ಇವತ್ತಿನ ಅಪರಿಪೂರ್ಣವಾದ ಮಂತ್ರಿಮಂಡಲದಲ್ಲಿ ಮಹಿಳಾ ಶಾಸಕರ ಪೈಕಿ ಯಾವುದೇ ಒಬ್ಬ ಮಹಿಳೆ ಕ್ಯಾಬಿನೆಟ್ ಸಚಿವರಾಗಿ ಇಲ್ಲ. ಕರ್ನಾಟಕದಲ್ಲಿ 5 ಕೋಟಿ ಜನಸಂಖ್ಯೆ ಇದೆ ಎಂದು ಹೇಳಿದರು. ಅದರಲ್ಲಿ ಎರಡೂವರೆ ಕೋಟಿ ಜನ ನಾವು ಅಂದರೆ ಮಹಿಳೆಯರಿದ್ದೇವೆ. ಅವರ ಪರವಾಗಿ ತಮಗೆ ಅಭಿನಂದನೆ ಸಲ್ಲಿಸುವುದಕ್ಕೋಸ್ಕರ ನಾನು ಇಲ್ಲಿ ನಿಂತಿದ್ದೇನೆ. ನೀವು ಚಿನ್ನದ ಗಣಿಯ ನಾಡಾದ ಕೋಲಾರ ಜಿಲ್ಲೆಯಿಂದ ಬಂದಿದ್ದೀರಿ. ಚಿನ್ನದ ಗಣಿ ಕೋಲಾರ ಭಾರತದಲ್ಲಿ ಪ್ರಸಿದ್ಧವಾದುದು. ಆ ನಾಡಿನಿಂದ ಬಂದಂತಹ ತಾವು ಅಷ್ಟೇ ಚಿನ್ನದಂತಹ ಕೆಲಸವನ್ನು ತಾವು ಅಧ್ಯಕ್ಷ ಸ್ಥಾನದಿಂದ ಮಾಡುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ನಾಣಯ್ಯನವರು, ಮಾನ್ಯ ಪಟೇಲ್ ಅವರು ಮಾತನಾಡುತ್ತಾ ರೂಲ್ಸ್ ಬಗ್ಗೆ ಹೇಳಿದರು. ಮತ್ತೆ ಮಾನ್ಯ ನಾಣಯ್ಯನವರು ಒಂದು ಮಾತನ್ನು ಹೇಳಿದರು ಸ್ಪೀಕರ್ ಎಂದು ಹೇಳಿದರೆ persons who speaks less. ಎಂದು ಹೇಳಿದರು. ನಾನಾದರೂ ಹೇಳುವುದು ಇಷ್ಟೇ. ಮಾತು ಕಡಿಮೆ ಆಡಬೇಕು ನಿಜ; ಆದರೆ Speaker is the

one who speaks not only less, but who speaks sense and that too commonsense.

ಅದು ಆದಾಗ ಮಾತ್ರ ಪರಿಪೂರ್ಣವಾದಂತಹ ಸ್ಪೀಕರ್ ಆಗಬಹುದು ಆ ಕೆಲಸವನ್ನು ತಾವು ಮಾಡುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ನಾವು ಕೇವಲ 7 ಜನ ಮಹಿಳೆಯರು ನಾವು ಈ ಸಭೆಗೆ ಆರಿಸಿ ಬಂದಿದ್ದೇವೆ. ಅದರಲ್ಲಿ ಇಬ್ಬರು ಮಾತ್ರ ಮಹಿಳೆಯರು ರಾಜ್ಯ ಮಂತ್ರಿಗಳಾಗಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದರು; ಅವರು ಮಾತ್ರವಲ್ಲ ಎಲ್ಲಾ ಸದಸ್ಯರೂ ಹೇಳಿದರು ಇಂಡಿಪೆಂಡೆಂಟ್ಸ್ ಬಂದಿರುವವರೂ ಕೂಡ 10 ಜನ ಇದ್ದೇವೆಂದು. ಆದರೆ ನಾವು ಕೈ ಬೆರಳು ಎಣಿಸುವ ಹಾಗೆ ಕೇವಲ 7 ಜನ ಮಾತ್ರ ಇಲ್ಲಿಗೆ ಆಯ್ಕೆಯಾಗಿ ಬಂದಿದ್ದೇವೆ. ಈ ಸಭೆಯಲ್ಲಿ ತಮ್ಮ ಮುಖಾಂತರ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಇಡೀ ಕರ್ನಾಟಕದಲ್ಲಿರತಕ್ಕಂತಹ ಎಲ್ಲಾ ಮಹಿಳೆಯರ ಆಸೆ ಆಕಾಂಕ್ಷೆಗಳನ್ನು ಪೂರೈಸಬೇಕಾದರೆ ತಮ್ಮ ಮಂತ್ರಿಮಂಡಲ ಪರಿಪೂರ್ಣವಾಗಬೇಕಾದರೆ ಕ್ಯಾಬಿನೆಟ್ ರ್‍ಯಾಂಕ್‌ನಲ್ಲಿ ಒಬ್ಬ ಮಹಿಳೆ ಇರಬೇಕಾಗಿತ್ತು ಅದನ್ನು ತಾವು ಮುಂದೆ ತುಂಬುತ್ತೀರಿ ಎಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಅದನ್ನು ಈ ಸಂದರ್ಭವನ್ನು ಉಪಯೋಗಿಸಿಕೊಂಡು ಕೇಳಿಕೊಳ್ಳುತ್ತಿದ್ದೇನೆ. ತಮಗೆ ಮಾಡಲಿಕ್ಕಾಗದಿದ್ದರೂ ಸಹ ಏಕ ಮಾತ್ರ ಮಹಿಳೆ ವಿರೋಧ ಪಕ್ಷದಲ್ಲಿ ನಾನು ಇರತಕ್ಕಂಥಹ ಸಂದರ್ಭದಲ್ಲಿ ಇಡೀ ಕರ್ನಾಟಕದಲ್ಲಿ ಮಹಿಳೆಯರಿಗೆ ಆಗತಕ್ಕಂಥಹ ಕಷ್ಟನಷ್ಟಗಳನ್ನು ಅವರ ಆಸೆ ಆಕಾಂಕ್ಷೆಗಳನ್ನು ಪ್ರತಿಬಿಂಬ ಮಾಡತಕ್ಕಂತಹ ಸಂದರ್ಭದಲ್ಲಿ ದಿಸೆಯಲ್ಲಿ ಈ ಕಡೆ ಹೆಚ್ಚು ಗಮನ ಕೊಡಬೇಕು. ಯಾರು ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವ ಸಂದರ್ಭದಲ್ಲಿ ನಮಗೆ ಅವಕಾಶ ಮಾಡಿಕೊಡಬೇಕು. ಆ ಕಡೆ 4 ಜನ ಮಹಿಳೆಯರು ಇದ್ದಾರೆ ಇಲ್ಲಿ ನಾವು ಇದ್ದೇವೆ. ಪ್ರತಿಯೊಂದು ಬಿಲ್‌ಗಳು ಇಲ್ಲವೇ ಯಾವುದೇ ವಿಧವಾದ ಚರ್ಚೆಗಳಾಗಲೀ ಈ ಸದನದಲ್ಲಿ ನಡೆದಾಗ ಅದರಲ್ಲಿ ಭಾಗವಹಿಸಲು ಮಹಿಳೆಯರಿಗೆ ತಾವು ನಮಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಶ್ರೀನಿವಾಸಪುರದಿಂದ ತಾವು ಆರಿಸಿಬಂದಂತಹ ಸಂದರ್ಭದಲ್ಲಿ ನಿಮ್ಮ ಕ್ಷೇತ್ರವನ್ನು ರಕ್ಷಣೆ ಮಾಡುವುದಕ್ಕೆ ನಾವು ಸದಾ ಸಿದ್ಧವಾಗಿದ್ದೇವೆ. ತಮ್ಮ ಕ್ಷೇತ್ರದಲ್ಲಿರತಕ್ಕಂತಹ ಮಹಿಳೆಯರ ಕಷ್ಟಸುಖಗಳನ್ನು ನೋಡಿಕೊಳ್ಳುವುದಕ್ಕೋಸ್ಕರ ಇಲ್ಲಿರುವ 4 ಮತ್ತು 5 ಜನರ ಮಹಿಳೆಯರು ಸದಾ ಸಿದ್ಧರಾಗಿದ್ದೇವೆ. ಅನೇಕ ಸದಸ್ಯರು ಹೇಳಿದರು. ತಮಗೆ ಆ ಭಗವಂತ ಆಯುರಾರೋಗ್ಯ ಕೊಡಲಿ ಎಂದು ಹಾರೈಸುತ್ತೇನೆ. ತಮ್ಮ ವಯಸ್ಸು ಚಿಕ್ಕದು ಆದರೆ ಅನುಭವ ಹೆಚ್ಚು ಎಂದು. ಅನೇಕ ಸದಸ್ಯರು ತಮಗೆ ಬೇರೆ ಅವಕಾಶ ದೊರೆಯಬೇಕಿತ್ತು ಎಂದು ಹೇಳಿದರು. ಆದರೆ ನಾನು ಆ ಮಾತನ್ನು ಹೇಳಲು ಇಷ್ಟಪಡುವುದಿಲ್ಲ. ತಮ್ಮ ಅನುಭವ ನಿಷ್ಠೆ, ತಮ್ಮ ಇಷ್ಟು ವರ್ಷಗಳ ಅನುಭವ ನೋಡಿ ತಮಗೆ ಸಮಯೋಚಿತವಾದಂತಹ ಅಧಿಕಾರ ಕೊಟ್ಟಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಈ ಸದನದಲ್ಲಿ 224 ಕ್ಷೇತ್ರದಲ್ಲಿ ಹೆಚ್ಚು ಜನ ಯುವಕರು ಬಂದಿದ್ದಾರೆ ಆ ಯುವಕರ ಆಸೆ ಆಕಾಂಕ್ಷೆಗಳನ್ನು ಅರಿತುಕೊಂಡು ಮಂತ್ರಿಗಳು ಮುಖ್ಯಮಂತ್ರಿಗಳು ತಮ್ಮನ್ನು ಆರಿಸಿದ್ದಾರೆ ತಮ್ಮಲ್ಲಿ ನಿಷ್ಪಕ್ಷಪಾತವಾದ ಭಾವನೆ ಇದೆ ತಾವು ಆ ಕೆಲಸ ಮಾಡುತ್ತೀರಿ ಎಂದು ತಮ್ಮನ್ನು ಅಧ್ಯಕ್ಷರಾಗಿ ಆರಿಸಿ ತಂದಿದ್ದಾರೆ.

ಅದಕ್ಕಾಗಿ ನಾನು ಅವರಿಗೂ ಮತ್ತು ಎಲ್ಲರಿಗೂ ಕೂಡ ಅಭಿನಂದನೆಯನ್ನು ಸಲ್ಲಿಸಿ ನನ್ನ ಎಲ್ಲಾ ಮಹಿಳೆಯರ ಪರವಾಗಿ, ನಮ್ಮ ಕ್ಷೇತ್ರದ ಪರವಾಗಿ, ನಮ್ಮ ಪಕ್ಷದ ಪರವಾಗಿ ತಮಗೆ ನಮ್ಮ ಸಂಪೂರ್ಣ

ಸಹಕಾರವನ್ನು ಕೊಡುತ್ತೇವೆಂದು ಈ ಸಂಧರ್ಭದಲ್ಲಿ ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† Sri S. RAJENDRAN (K.G.F.):– Respected Hon'ble Speaker and elders of this House I would like to say a few words before this House. I represent K.G.F. and I have great pleasure to felicitate our Hon'ble Speaker and with the opportunity given to me, I will always be a cooperative man for the right cause and justice. I am the follower of Dr. Babasaheb Ambedkar, who has written the Constitution of India. I am proud to say that I represent the Bharathiya Republican Party. Sir, I would say that Speaker is one who speaks less and he listens more. By Listening more he will give justice and he should be neutral. I pray God to give him more strength. This House has a historical background in maintaining decency and decorum. The Hon'ble Speaker should be a strong rock to take any decision for justice. I felicitate our Opposition Leader who at right time got the right post. The Hon'ble Chief Minister is like an elephant which doesn't know what is its strength. But everyone knows what is its strength. Therefore, I request all the elders and everyone plus our Hon. Speaker to maintain decancy and decorum, because we are moving into the 21st century and we need more development in the state. I hope our beloved Hon'ble Speaker will give equal opportunity to everyone. I pray God to give him enough strength, endurance and stamina to lead this House peacefully and maintain discipline and decorum in this House. Thank you very much.

† ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):– ಮಾನ್ಯ ಅಧ್ಯಕ್ಷರೇ, ಈ ದಿವಸ ವೈಯಕ್ತಿಕವಾಗಿ ನನಗೆ ಬಹಳ ಸಂತೋಷವಾಗಿದೆ. ಕಳೆದ ಹತ್ತು – ಹದಿನೈದು ವರ್ಷಗಳಿಂದ ರಾಜಕೀಯ ರಂಗದಲ್ಲಿ ನಮ್ಮ ಜಿಲ್ಲೆಯಲ್ಲಿ ಮತ್ತು ರಾಜ್ಯದಲ್ಲಿ ನಾನು ಮತ್ತು ತಾವು ಬಹಳ ಅನ್ಯೋನ್ಯವಾಗಿ ಕೆಲಸವನ್ನು ಮಾಡಿದ್ದೇವೆ. ಬಹಳ ಹತ್ತಿರದಿಂದ ಕೆಲಸ ಮಾಡಿದ್ದೇವೆ. ಬಹಳ ದೂರ ಸಹಾ ಸರಿದಿದ್ದೇವೆ. ಅದರ ಸವಿ ಮತ್ತು ಕಹಿಯನ್ನು ನಾವು ಉಂಡಿದ್ದೇವೆ. ಇವತ್ತು ಈ ಘನವೆತ್ತ ಸಭೆಯ ಅಧ್ಯಕ್ಷರಾಗಿ ತಾವು ಸರ್ವಾನುಮತದಿಂದ ಆಯ್ಕೆಯಾಗಿದ್ದೀರಿ.

ತಾವು ಈ ಸಂದರ್ಭಕ್ಕೆ ತಕ್ಕಂತಹ ಅಧ್ಯಕ್ಷರು ಎಂದು ನನ್ನ ಅನಿಸಿಕೆ. ಬಹುಶಃ ವಿಧಾನಸಭೆಯ ಚರಿತ್ರೆಯಲ್ಲಿಯೇ ಈ ರೀತಿಯಾದ, ವೈವಿಧ್ಯಮಯವಾದಂತಹ ವಿಧಾನಸಭೆ ಯಾವತ್ತೂ ಇರಲಿಲ್ಲ. ಇವತ್ತು ವಿಧಾನಸಭೆಯಲ್ಲಿ ಸರಿ ಸುಮಾರು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ, ಸಮಬಲವನ್ನು ಹೊಂದಿರತಕ್ಕ ಪರಿಸ್ಥಿತಿ ಇದೆ. ಇಂತಹ ಸಭೆಯನ್ನು ನಿರ್ವಹಿಸತಕ್ಕಂಥ ಮತ್ತು ನಿಭಾಯಿಸತಕ್ಕಂಥದ್ದು ಬಹಳ ಕಷ್ಟಕರವಾದಂತಹ ಕೆಲಸ, ಆದ್ದರಿಂದ ನಮ್ಮ ಅನೇಕ ಸ್ನೇಹಿತರು ಹೇಳಿದ ಹಾಗೆ ಈ ವೈವಿಧ್ಯಮಯವಾಗಿರತಕ್ಕ ಈ ಸಭೆಯನ್ನು ಸುಗಮವಾದ ದಾರಿಯಲ್ಲಿ ನಡೆಸಿಕೊಂಡು ಹೋಗತಕ್ಕಂತಹುದು ಕಷ್ಟ. ಆದ್ದರಿಂದ ನಮ್ಮ ಮಾನ್ಯ ಖರ್ಗೆಯವರು ಹಾಗೂ ಬೇರೆ ಸ್ನೇಹಿತರು

ಹೇಳಿದಂತೆ ನಿಮ್ಮ ಸೇವೆಯನ್ನು ಸರ್ಕಾರ ಬೇರೆ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕಾಗಿತ್ತು ಎನ್ನತಕ್ಕ ಒಂದು ಸಲಹೆಯನ್ನು ಕೊಟ್ಟರು. ನನಗೆ ವೈಯಕ್ತಿಕವಾಗಿ ಕೆಲವು ವಿಚಾರಗಳು ಗೊತ್ತಿರುವುದರಿಂದ ಅದನ್ನು ತಮ್ಮ ಮುಂದೆ ಇಡುವುದಕ್ಕೆ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ತಾವು ಮಂತ್ರಿಯಾಗಬೇಕು ಎಂದಾಗಲಿ ಅಥವಾ ನನಗೆ ಇಂತಹದೇ ಹುದ್ದೆ ಬೇಕು ಎಂದಾಗಲಿ ತಾವು ಆಸೆ ಪಟ್ಟವರಲ್ಲ. ಅದಕ್ಕಿಂತ ಮಿಗಿಲಾಗಿ ನನಗೆ ಯಾವ ಹುದ್ದೆಯು ಕೊಡಬೇಕಾಗಿಲ್ಲ ಎಂಬ ಮಾತನ್ನು ವೈಯಕ್ತಿಕವಾಗಿ ನನ್ನ ಹತ್ತಿರ ಹಾಗೂ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಸಹ ಹೇಳಿರತಕ್ಕದ್ದು ಗೊತ್ತು. ಆದರೆ ಈ ಪರಿಸ್ಥಿತಿಯಲ್ಲಿ ಈ ಸದನವನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಹೋಗತಕ್ಕ ಶಕ್ತಿ ಯಾರಿಗಾದರೂ ಸಹ ಇದ್ದರೆ ಅದು ಮಾನ್ಯ ರಮೇಶ್‌ಕುಮಾರ್ ಅವರಿಗೆ ಇದೆ ಎಂಬುದನ್ನು ಗಮನಿಸಿ ತಾವೇ ಅಧ್ಯಕ್ಷಸ್ಥಾನವನ್ನು ಅಲಂಕರಿಸಬೇಕು ಎನ್ನತಕ್ಕದ್ದು ನನ್ನ ಅನಿಸಿಕೆ ಆಗಿತ್ತು. ಅದನ್ನು ನನ್ನ ಸ್ನೇಹಿತರ ಹತ್ತಿರ, ಮುಖಂಡರ ಹತ್ತಿರ ಪ್ರಸ್ತಾಪ ಮಾಡಿದಾಗ ಅವರೂ ಸಹ ಒಪ್ಪಿದರು. ಮಾನ್ಯ ನಾಣಯ್ಯನವರು ಸಹ ಎಲ್ಲರಿಗಿಂತ, ನನಗಿಂತ ಮುಂದೆ ಹೋಗಿ ಅವರೇ ಅಧ್ಯಕ್ಷರಾಗಬೇಕು ಎಂಬ ಸಲಹೆಯನ್ನು ಕೂಡ ಕೊಟ್ಟರು. ಅಷ್ಟೇ ವಿನಃ ಅವರನ್ನು ಎಲ್ಲೋ ಕೂರಿಸಬೇಕು ಎನ್ನತಕ್ಕದ್ದು ಅಲ್ಲ. ಈ ಸಂದರ್ಭದಲ್ಲಿ ಮಾನ್ಯ ರಮೇಶ್ ಕುಮಾರ್ ಅವರೇ ಅತ್ಯಂತ ಯೋಗ್ಯರಾದ ಅಧ್ಯಕ್ಷರು ಎಂಬ ಒಂದೇ ಕಾರಣದಿಂದ ನಾವೆಲ್ಲರೂ ಸೇರಿ ತಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಇದರ ಸವಿಯನ್ನು ನಮ್ಮ ಪಕ್ಷದ ತೀರ್ಮಾನವನ್ನು ತಾವು ಅಕ್ಷರಶಃ ಪ್ರತಿಬಿಂಬಿಸುತ್ತೀರಿ ಎನ್ನತಕ್ಕ ಒಂದು ದೃಢವಾದ ನಂಬಿಕೆ ನನ್ನಲ್ಲಿ ಇದೆ. ಮತ್ತೊಮ್ಮೆ ನಾನು ಈ ಸಂತೋಷದ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸಿ ತಾವು ಅತ್ಯಂತ ಪ್ರಭಾವಯುತವಾದಂತಹ ಅಧ್ಯಕ್ಷರಾಗಿ, ಮುಂದೆ ಬರತಕ್ಕ ವಿಧಾನಸಭೆಗಳಲ್ಲಿ ಯಾವ ರೀತಿಯಿಂದಾಗಿ ನಾವು ವೈಕುಂಠ ಬಾಳಿಗಾ ಅವರನ್ನು ಈಗಲೂ ನೆನೆಯುತ್ತೇವೆ, ಚಂದ್ರೇಗೌಡರವರನ್ನು ಈಗಲೂ ನೆನೆಯುತ್ತೇವೆ ಹಾಗೆಯೇ ಮಾನ್ಯ ಎಸ್.ಎಂ. ಕೃಷ್ಣ ಅವರನ್ನು ಈಗಲೂ ಕೂಡ ನೆನೆಯುತ್ತೇವೆ; ಅವರೆಲ್ಲರನ್ನೂ ಕೂಡ ನೀವು ಮೀರತಕ್ಕ ರೀತಿಯಲ್ಲಿ ತಾವು ಈ ಸದನದಲ್ಲಿ ಕೆಲಸ ಮಾಡಬೇಕು. ಆದರ ಮೂಲಕ ನಮ್ಮ ಜಿಲ್ಲೆಗೆ ಕೀರ್ತಿಯನ್ನು ತರಬೇಕು ಎಂದು ತಮ್ಮಲ್ಲಿ ವಿನಂತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಮಾನ್ಯ ಅಧ್ಯಕ್ಷರು:- ಸನ್ಮಾನ್ಯ ಸದಸ್ಯರೆ, ಮಾನ್ಯ ಸಭಾ ನಾಯಕರು ಹಾಗೂ ಎಲ್ಲಾ ವಿರೋಧ ಪಕ್ಷಗಳ ಗೌರವಾನ್ವಿತ ಸದಸ್ಯರುಗಳ ಸಹಕಾರದಿಂದ ಈ ಸದನದ ಅಧ್ಯಕ್ಷ ಪೀಠಕ್ಕೆ ತಾವು ನನ್ನನ್ನು ಸರ್ವಾನುಮತದಿಂದ ಆಯ್ಕೆ ಮಾಡಿದ್ದಕ್ಕೆ ನಾನು ತಮಗೆ ಆಭಾರವನ್ನು ವ್ಯಕ್ತ ಮಾಡುತ್ತಿದ್ದೇನೆ. ಸನ್ಮಾನ್ಯ ಸಭಾ ನಾಯಕರಾದಿಯಾಗಿ, ಎಲ್ಲಾ ಹಿರಿಯ ಸದಸ್ಯರುಗಳು ನನ್ನ ಬಗ್ಗೆ ಆಡಿರತಕ್ಕ ಒಳ್ಳೆಯ ಮಾತುಗಳಿಗೆ ನಾನು ತಮಗೆ ನನ್ನ ಕೃತಜ್ಞತೆಗಳನ್ನು ತಿಳಿಸುತ್ತಿದ್ದೇನೆ. ಬಹಳ ವಿಶಿಷ್ಟವಾದಂತಹ ಸನ್ನಿವೇಶದಲ್ಲಿ ನನ್ನನ್ನು ಈ ಸ್ಥಾನಕ್ಕೆ ತಾವೆಲ್ಲರೂ ಆಯ್ಕೆ ಮಾಡಿದ್ದೀರಿ. ಸಂಖ್ಯಾ ಬಲದ ದೃಷ್ಟಿಯಿಂದ ಪ್ರಜಾತಂತ್ರಕ್ಕೆ ಅತ್ಯಂತ ಆರೋಗ್ಯಕರ ಚಿಹ್ನೆಯಾದಂತಹ ರೀತಿಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಸಂಖ್ಯೆಗಳು ಇವೆ. ಪಕ್ಷಾತೀತವಾಗಿ ಕೆಲಸ ಮಾಡಬೇಕು ಎನ್ನತಕ್ಕ ಅಭಿಪ್ರಾಯವನ್ನು ಪ್ರತಿ ಒಬ್ಬರೂ ಕೂಡ ವ್ಯಕ್ತ ಮಾಡಿದ್ದೀರಿ.

ನಿನ್ನೆಯ ದಿವಸ 12.00 ಗಂಟೆ ಆದ ಬಳಿಕ ನನ್ನ ನಾಮಪತ್ರ ಮನವರಿಕೆಯಾದ ನಂತರ ನಾನು ನಿನ್ನೆ ಸಂಜೆ ನಮ್ಮ ಪಕ್ಷದ ಕಛೇರಿಗೆ ತೆರಳಿ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ನನ್ನ ರಾಜೀನಾಮೆ ಕೊಟ್ಟು ಪಕ್ಷದ ಜೊತೆಗಿದ್ದ ರಾಜಕೀಯ ಸಂಬಂಧ ಕಡಿದುಕೊಂಡಿದ್ದೇನೆ. ಆಕಸ್ಮಿಕವಾಗಿ ವಿದ್ಯಾರ್ಥಿ ದೆಸೆಯಲ್ಲಿ

ಒಂದು ದಿವಸ ಸಹಪಾಠಿಗಳ ಜೊತೆ ತನ್ನ ಅಳಲನ್ನು ತೋಡಿಕೊಳ್ಳಲು ಹೋಗಿ ದಿವಂಗತ ದೇವರಾಜ ಅರಸುರವರ ಆಕರ್ಷಣೆಗೊಳಗಾಗಿ ಸಿಲುಕಿಕೊಂಡು ಆ ಸೆಳೆತದಿಂದ ತಪ್ಪಿಸಿಕೊಳ್ಳಲಾರದೆ ರಾಜಕೀಯಕ್ಕೆ ಬಂದು ಈ ದಿವಸ ಈ ಉನ್ನತಸ್ಥಾನವನ್ನು ಅಲಂಕರಿಸಿಸುವಂಥ ಒಂದು ಪರಿಸ್ಥಿತಿ ಬಂತು. ನಮ್ಮನ್ನು ಗುರ್ತಿಸಿ ನಮ್ಮ ಬೆಳವಣಿಗೆಗೆ ಪೋಷಣೆ ಮಾಡಿದ ಆ ಮಹಾನ್ ವ್ಯಕ್ತಿ ಇವೊತ್ತು ನಮ್ಮೆದುರಿಗಿಲ್ಲ. ಒಂದು ಕ್ಷಣಕಾಲ ಕೂಡ ಅವರು ನಮಗೆ ಹಾಕಿಕೊಟ್ಟಂಥ ಮಾರ್ಗದರ್ಶನ, ಅವರಲ್ಲಿದ್ದಂಥ ಆದರ್ಶಗಳನ್ನು ನಾನು ಮರೆಯುವುದಕ್ಕೆ ಸಾಧ್ಯವಿಲ್ಲ. ಸದನದ ಪರಂಪರೆಯನ್ನು ಕಾಪಾಡಿ ಕೊಳ್ಳುವುದು ಹಾಗೂ ಸತ್ಸಂಪ್ರದಾಯಗಳನ್ನು ಎತ್ತಿಹಿಡಿಯುವ ಬಗ್ಗೆ ತಾವೆಲ್ಲಾ ಬಹಳ ಒತ್ತಾಯ ಮಾಡಿ ಹೇಳಿದ್ದೀರಿ. ಇದು ನನ್ನೊಬ್ಬನಿಂದ ಸಾಧ್ಯವಾಗತಕ್ಕಂಥ ಕೆಲಸವಲ್ಲ ತಮ್ಮೆಲ್ಲರ ಸಹಕಾರ, ಬೆಂಬಲವಿದ್ದರೆ ಮಾತ್ರ ಇದು ಸಾಧ್ಯವಾಗುತ್ತದೆ. ಈ ಹಿಂದೆ ಸದನದ ಸಭಾಧ್ಯಕ್ಷರಾಗಿದ್ದ ಶ್ರೀ ವೈಕುಂಠ ಬಾಳಿಗಾರವರ ಹೆಸರನ್ನು ಪ್ರತಿಯೊಬ್ಬ ಸದಸ್ಯರೂ ಸಹ ಪ್ರಸ್ತಾಪಿಸಿದ್ದೀರಿ. ಅದೇ ರೀತಿ ಅವರ ನಂತರ ಸಭಾಧ್ಯಕ್ಷರುಗಳಾಗಿದ್ದ ಎಸ್.ಎಂ. ಕೃಷ್ಣ, ಕೆ.ಎಚ್. ರಂಗನಾಥ್ ಮತ್ತು ಡಿ.ಬಿ. ಚಂದ್ರೇಗೌಡರ ಹೆಸರುಗಳನ್ನು ಪ್ರಸ್ತಾಪಿಸಿದ್ದೀರಿ. ಇವರೆಲ್ಲರೂ ಕೂಡ ವಕೀಲರಾಗಿದ್ದಾರೆ, ಮೇಧಾವಿಗಳಾಗಿದ್ದಾರೆ. ಮತ್ತು ಈ ರೀತಿಯ ರಾಜಕೀಯ ಸನ್ನಿವೇಶದಲ್ಲಂತೂ ಅವರುಗಳು ಆರಿಸಿ ಬಂದಂಥವರಲ್ಲ. ಅವರಲ್ಲಿದ್ದಂಥ ಆದರ್ಶಗಳನ್ನು ನಾನೂ ಸಹ ಅಳವಡಿಸಿಕೊಂಡು ನನ್ನ ಕೆಲಸವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀನೆ. ಅತ್ಯಂತ ಸಾಮಾನ್ಯ ಕುಟುಂಬದಿಂದ ಬಂದಂಥ ನನಗೆ ಈ ಸ್ಥಾನಕ್ಕೆ ಬರುವ ಸಮಯದಲ್ಲಿ ನಾನು ಕೈಯಲ್ಲಿ ಏನೂ ತಂದಿಲ್ಲ ಹೋಗುವಾಗಲೂ ಬರಿಗೈಯಲ್ಲಿ ಹೋಗುವ ಆಸೆ ನನ್ನದು. ನಮ್ಮಂಥವರು ಚುನಾವಣಾ ವ್ಯವಸ್ಥೆಯಲ್ಲಿ ಆರಿಸಿ ಬರುವಂಥಾದ್ದು ಮತ್ತು ಒಂದು ಸ್ಥಾನ ಅಲಂಕರಿಸುವಂಥಾದ್ದು ವಿಸ್ಮಯಕಾರಿಯಾಗಿದೆ. ನಿನ್ನೆಯ ದಿನಗಳನ್ನು ನೆನೆಸಿಕೊಳ್ಳುವುದೇ ನನಗೆ ಒಂದು ರೀತಿಯ ಹೆಮ್ಮೆ ಅದೇ ನನ್ನ ಆಸ್ತಿ. ಈ ಸ್ಥಾನ, ಈ ದಿನದ ಅಧಿಕಾರ ನನ್ನ ಮನಸ್ಸಿಗೆ ಅಷ್ಟಾಗಿ ಜ್ಞಾಪಕಕ್ಕೆ ಬರುವುದಿಲ್ಲ. ನನ್ನ ಹಿಂದಿನ ನೆನಪು ಪ್ರತಿ ದಿವಸ ನನ್ನನ್ನು ಜನತೆಗೆ ಮತ್ತು ಅವರ ಆಶೋತ್ತರಗಳಿಗೆ ಸಮೀಪವಾಗಿರತಕ್ಕಂಥ ರೀತಿಯಲ್ಲಿ ನಡೆದುಕೊಳ್ಳಬೇಕೆಂಬ ಎಚ್ಚರಿಕೆ ಕೊಡುತ್ತಿದೆ. ತಾವೆಲ್ಲರೂ ಹೇಳಿದಂತೆ ನಮ್ಮೆಲ್ಲರ ಯಜಮಾನರು ಈ ಸದನದ ಹೊರಗಿದ್ದಾರೆ. ಅವರ ಆಸೆ–ಅಭಿಲಾಷೆಗಳ ಪ್ರತೀಕವಾಗಿ ನಾವು ಇಲ್ಲಿ ಬಂದಿದ್ದೇವೆ. ನಮ್ಮನ್ನು ಇಲ್ಲಿಗೆ ಕಳುಹಿಸಿದ ಕಾರಣಕ್ಕಾಗಿ ಅವರು ಕ್ಷಣವೂ ಕೂಡ ಪಶ್ಚಾತ್ತಾಪ ಪಡಬಾರದು. ಆ ರೀತಿಯಲ್ಲಿ ನಾವೆಲ್ಲರೂ ಕೆಲಸ ಮಾಡಬೇಕು. ಇದು ಬಿಟ್ಟು ನಾಚಿ ತಲೆ ತಗ್ಗಿಸುವ ಕೆಲಸ ನಾವು ಮಾಡಬಾರದು.

ಇದನ್ನು ಹಿರಿಯ ಮತ್ತು ಕಿರಿಯ ಸದಸ್ಯರೆಲ್ಲರಲ್ಲೂ ಅತಿ ವಿನಯದಿಂದ ಮನವಿ ಮಾಡಿ ಹೇಳುತ್ತಿದ್ದೇನೆ. ತಾವೆಲ್ಲರೂ ಹೊಸ ಸದಸ್ಯರ ವಿಷಯವಾಗಿ ಪ್ರಸ್ತಾಪಿಸಿದ್ದೀರಿ. ನಾನು ಅಧ್ಯಕ್ಷ ಪೀಠದಿಂದ ನೂತನವಾಗಿ ಆರಿಸಿ ಬಂದ ಸದಸ್ಯರುಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ತಾವು ಸದನದಲ್ಲಿ ತಾಳ್ಮೆಯಿಂದಿರಬೇಕು, ವ್ಯಾಸಂಗ ಮಾಡಬೇಕು, ಹಿರಿಯ ಸದಸ್ಯರು ಮಾತನಾಡತಕ್ಕಂಥ ಕಾಲದಲ್ಲಿ ಕಿರಿಯ ಸದಸ್ಯರು ಕೇಳಿ ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ಹೊಸದಾಗಿ ಆಯ್ಕೆಯಾಗಿ ಬಂದಿರುವ ಸದಸ್ಯರುಗಳ ಅನುಕೂಲಕ್ಕಾಗಿ ಬರುವ ತಿಂಗಳು ಓರಿಯೆಂಟೇಷನ್ ಸೆಮಿನಾರ್ ಮಾಡಬೇಕೆಂಬ ತೀರ್ಮಾನಕ್ಕೆ ಬಂದಿದ್ದೇನೆ. ಈ ದಿಸೆಯಲ್ಲಿ ಪ್ರಯತ್ನ ಮಾಡೋಣ. ನಾನು ಹಿಂದೆ ಆಡಳಿತ ಪಕ್ಷದಲ್ಲಿ ಸದಸ್ಯನಾಗಿ ಹೆಚ್ಚು ಕಾಲ ಉಳಿದಿದ್ದೆ; ಹಾಗೆಯೇ ವಿರೋಧ ಪಕ್ಷದಲ್ಲೂ ಸಹ ಸ್ವಲ್ಪ ಕಾಲವಿದ್ದು ಕೆಲಸ ಮಾಡಿದ್ದೇನೆ. ಆಡಳಿತಪಕ್ಷದ ಸದಸ್ಯರುಗಳಲ್ಲಿ ನನ್ನ ಮನವಿ ಏನೆಂದರೆ,

ಮುಖ್ಯಮಂತ್ರಿಗಳು ಸದನದಲ್ಲಿ ಹಾಜರಿದ್ದಾಗ ಅರ್ಜಿಗಳನ್ನು ತೆಗೆದುಕೊಂಡು ಅವರ ಆಸನದ ಸುತ್ತ ಸುತ್ತುವರೆಯಬೇಡಿ. ಮುಖ್ಯಮಂತ್ರಿಗಳು ಎದ್ದು ನಿಂತು ಮಾತನಾಡತಕ್ಕಂಥ ಸಂದರ್ಭದಲ್ಲಿ ವಿರೋಧಪಕ್ಷದಿಂದ ಏನಾದರೂ ಅಡ್ಡಿ – ಆತಂಕಗಳು ಉಂಟಾದರೆ ಮುಖ್ಯಮಂತ್ರಿಗಳು ತಮ್ಮನ್ನು ಸಮರ್ಥಿಸಿಕೊಳ್ಳಲು ಸಬಲರಾಗಿದ್ದಾರೆ. ಆದರೆ, ನೀವುಗಳೆಲ್ಲರೂ ಎದ್ದು ನಿಂತು ನಿಮ್ಮ ಭಕ್ತಿಯನ್ನಾಗಲಿ, ವಿಧೇಯತೆಯನ್ನಾಗಲಿ, ಪ್ರೀತಿಯನ್ನಾಗಲಿ, ನಿಷ್ಠೆಯನ್ನಾಗಲಿ ಪ್ರದರ್ಶಿಸುವ ಅಗತ್ಯವಿಲ್ಲ. ಇದನ್ನೆಲ್ಲಾ ನಾನು ಕಣ್ಣಾರೆ ಕಂಡಿದ್ದೇನೆ. ಸದನದಲ್ಲಿನ ಸತ್ಸಂಪ್ರದಾಯ ಇಲ್ಲಿಂದ ಪ್ರಾರಂಭವಾಗಬೇಕಾಗುತ್ತದೆ. ವಿರೋಧ ಪಕ್ಷದ ಸದಸ್ಯರಲ್ಲೂ ಕೂಡ ನನ್ನ ಪ್ರಾರ್ಥನೆ ಇಷ್ಟೆ: ಯಾವುದೇ ಒಂದು ವಿಷಯವನ್ನು ಚರ್ಚೆಗೆ ತೆಗೆದುಕೊಂಡಾಗ ಹೆಚ್ಚು ಬೆಳಕು ಚೆಲ್ಲಬೇಕು, ಬೆಂಕಿ ಹಚ್ಚುವುದು ಬೇಡ. ವಿರೋಧ ಪಕ್ಷದ ಅನಿಸಿಕೆಗಳಿಗೆ ಮಾನ್ಯತೆ ಕೊಡತಕ್ಕಂಥಾದ್ದು ಸರ್ಕಾರಕ್ಕೆ ಅನಿವಾರ್ಯವಾಗತಕ್ಕಂಥ ರೀತಿಯಲ್ಲಿ ತಾವು ಪ್ರಸ್ತಾಪಿಸಬೇಕು. ಈ ಸದನದಲ್ಲಿ ಸಾಕಷ್ಟು ಜನ ಹಿರಿಯರಿದ್ದು, ಮುತ್ಸದ್ದಿಗಳಿರುವುದು ಸದನದ ಪುಣ್ಯ.

ಅನೇಕ ಜನ ಹಿರಿಯರು, ಗಣ್ಯರು ಇಬ್ಬರೂ ಮಾಜಿ ಮುಖ್ಯಮಂತ್ರಿಗಳು, ಒಬ್ಬರು ಮಾಜಿ ವಿಧಾನ ಸಭಾಧ್ಯಕ್ಷರೇ, ಇಷ್ಟು ಜನರು ಈ ಕಡೆ ವಿರೋಧಪಕ್ಷದಲ್ಲಿ ಇವತ್ತು ಆಸೀನರಾಗಿದ್ದಾರೆ. ಇನ್ನು ತಾವು ಅನೇಕ ವಿಷಯಗಳನ್ನು ಹೇಳಿದ್ದೀರಿ ವೈಚಾರಿಕ ಭಿನ್ನಾಭಿಪ್ರಾಯಗಳ ಬಗ್ಗೆ ಕೆಲವು ಸದಸ್ಯರು ಹೇಳಿದ್ದಾರೆ. ಭಾರತೀಯ ಜನತಾ ಪಕ್ಷ ಅಧಿಕೃತ ವಿರೋಧಪಕ್ಷವಾಗುವ ಸಂಭವವಿದೆ, ನಂತರ ಅದರ ಪ್ರಕಟಣೆಯನ್ನು ಓದಿಹೇಳುತ್ತೇನೆ. ಮುಸ್ಲೀಂ ಲೀಗಿನ ಒಬ್ಬ ಸದಸ್ಯರು, ಸಿ.ಪಿ.ಎಂ. ನ ಒಬ್ಬ ಸದಸ್ಯರು, ಮತ್ತೆ ನ್ಯಾಷನಲ್ ಲೀಗ್ ಮತ್ತು ವಿಭಿನ್ನ ವಿಚಾರಗಳಲ್ಲಿ ನಂಬಿಕೆ ಇರತಕ್ಕಂಥ ಜನತಾದಳ ಒಂದು ಕಡೆಗೆ, ತಾವೆಲ್ಲರೂ ಕೂಡ ಮನಸ್ಸಿನಲ್ಲಿ ಪ್ರಮುಖವಾಗಿ ಗಮನದಲ್ಲಿಟ್ಟುಕೊಳ್ಳತಕ್ಕಂಥ ಅಂಶಗಳು ಎಂದರೆ ಸಾರ್ವಜನಿಕ ಹಿತಾಸಕ್ತಿ ತಮ್ಮ ವೈಚಾರಿಕ ಭಿನ್ನಾಭಿಪ್ರಾಯಗಳು, ವೈಯಕ್ತಿಕ ನೆಲೆಯನ್ನು ಹುಡುಕಿಕೊಂಡು ಹೋಗಬಾರದು. ಸಾರ್ವಜನಿಕ ಹಿತಾಸಕ್ತಿಯನ್ನು ರಕ್ಷಣೆ ಮಾಡುವಾಗ ನಾನೊಬ್ಬನೇ ಅಲ್ಲ ಪಕ್ಷಾತೀತವಾಗಿ ವರ್ತಿಸಬೇಕಾದ ಹೊಣೆ ತಮ್ಮ ಮೇಲೂ ಕೂಡ ಇದೆ, ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಈ ಸದನದಲ್ಲಿ ಏನು ಕಲಾಪವನ್ನು ನಡೆಸುತ್ತೇವೆ. ಇದು ದಾಖಲೆಗಳಲ್ಲಿ ಹೋಗುತ್ತವೆ. ಮುಂದಿನ ತಲೆಮಾರಿಗೆ ಚರಿತ್ರೆಯಾಗಿ ಉಳಿಯುತ್ತದೆ. ಇವತ್ತು ಶ್ರೀ ವೈಕುಂಠ ಬಾಳಿಗರು ನಮ್ಮ ಎದುರಿಗೆ ಇಲ್ಲ. ಆದರೆ ಅವರ ಹೆಸರು ಅಮರವಾಗಿ ನಮ್ಮ ಮುಂದೆ ಉಳಿದಿದೆ. ನಮ್ಮ ನಡವಳಿಕೆಗಳನ್ನು ನಾವು ದಾಖಲೆಗಳಲ್ಲಿ ಬಿಡುವಂತಹ ವಿಷಯ ಮುಂದಿನ ಪೀಳಿಗೆ ಹೆಮ್ಮೆ ಪಡುವಂಥದ್ದಾಗಬೇಕು. ಮತ್ತೆ ತಮ್ಮೆಲ್ಲರ ಸ್ಥಾನ ಒಂದು ಕಡೆ ಇದೆ. ಈ ಅಧ್ಯಕ್ಷ ಪೀಠ ಅತ್ಯಂತ ಎತ್ತರದಲ್ಲಿದೆ. ಈ ಅಧ್ಯಕ್ಷ ಪೀಠ ಎಷ್ಟು ಎತ್ತರದಲ್ಲಿದೆ. ನಾನು ಒಂದೇ ಸಲ ಅಲ್ಲಿಂದ ಇಲ್ಲಿಗೆ ಬಂದಿದ್ದೇನೆ, ಸ್ವಲ್ಪ ನನಗೂ ಕಷ್ಟನಾಗಬಹುದು. ಒಂದೇ ಸಲ ಇಷ್ಟು ಎತ್ತರಕ್ಕೆ ಬಂದು ಕೂರುವಂಥಾದ್ದು, ನಾನು ಇಷ್ಟು ಎತ್ತರಕ್ಕೆ ಬೆಳೆದಿದ್ದೇನೋ, ಇಲ್ಲವೋ ನನಗೆ ಗೊತ್ತಿಲ್ಲ. ತಾವೆಲ್ಲರೂ ನನ್ನನ್ನು ವಿಶ್ವಾಸದಿಂದ ಈ ಎತ್ತರದ ಸ್ಥಾನದಲ್ಲಿ ಕೂರಿಸಿದ್ದೀರಿ. ಅಷ್ಟೇ ಅಲ್ಲ, ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಮೇಲೆ ಒಂದು ತಕ್ಕಡಿ ಇದೆ. ಎಚ್ಚರ ತಪ್ಪಿ ಕೂಡ ಯಾವುದೇ ಸದಸ್ಯರ ಮನಸ್ಸಿಗೆ ನೋವು ಆಗುವ ರೀತಿಯಲ್ಲಿ ತನ್ಮೂಲಕ ರಾಜ್ಯದ ಜನತೆ ನೋವು ಪಡುವಂಥ ಕೆಲಸವನ್ನು ನಾವು ಇಲ್ಲಿ ಮಾಡುವುದಿಲ್ಲ. ತಾವು ಮತ್ತು ನಾವೆಲ್ಲರೂ ಸೇರಿ ಈ ರಾಜ್ಯದ ಜನತೆಯ ಕಲ್ಯಾಣಕ್ಕಾಗಿ ಶ್ರಮಿಸೋಣ ಎನ್ನುವಂಥ ಮಾತನ್ನು ಹೇಳುತ್ತೇನೆ. ತಾವೆಲ್ಲರೂ ನನ್ನ ಬಗ್ಗೆ ಇಟ್ಟಿರುವಂತಹ

ವಿಶ್ವಾಸವನ್ನು ಉಳಿಸಿಕೊಳ್ಳುವಂತಹ ಪ್ರಯತ್ನವನ್ನು ನಾನು ಕಡೆಯ ನಿಮಿಷದವರೆಗೂ ಮಾಡುತ್ತೇನೆ. ಈಗಾಗಲೇ ನಾನು ಪ್ರಸ್ತಾಪ ಮಾಡಿದಂತೆ ನನ್ನ ನೆನಪಿನ ಮುಂದೆ ಬರತಕ್ಕಂಥದ್ದು ನಮ್ಮನ್ನು ಅಗಲಿ ಹೋಗಿರತಕ್ಕಂಥ ಮಾನ್ಯ ದೇವರಾಜ ಅರಸುರವರು ಮತ್ತು ನನ್ನ ಆತ್ಮೀಯ ಸ್ನೇಹಿತ ದಿವಂಗತ ಅಬ್ದುಲ್ ನಜೀರ್ ಸಾಬ್‌ರವರು. ನಾನು ಯಾವ ಸ್ಥಾನವನ್ನು ಕೇಳಲಿಲ್ಲವೆಂದು ಶ್ರೀ ಬೈರೇಗೌಡರು ಹೇಳಿದರು.

ನಾನಾಗಲಿ, ನನ್ನ ಆತ್ಮೀಯ ಮಿತ್ರರಾಗಲಿ ಎಂದೂ ಯಾವುದನ್ನು ಕೇಳಿ ಪಡೆದುಕೊಂಡವರಲ್ಲ. ಬಂದದ್ದನ್ನು ಬಹಳ ಮುಜುಗರದಿಂದ, ನಾಚಿಕೆಯಿಂದಲೇ ಅದನ್ನು ಸ್ವೀಕಾರ ಮಾಡಿದ್ದೇವೆ. ಶಕ್ತಿ ಮೀರಿ ಪ್ರಾಮಾಣಿಕತೆಯಿಂದ ಈ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ. ಇದಕ್ಕೆ ತಮ್ಮೆಲ್ಲರ ಸಹಕಾರ ನನಗೆ ಅಗತ್ಯವಿದೆ. ಇದಕ್ಕೆಲ್ಲದಕ್ಕಿಂತ ಮುಖ್ಯವಾಗಿ ನನ್ನ ಪತ್ರಕರ್ತ ಸ್ನೇಹಿತರು ಯಾರಿದ್ದಾರೆ ಅವರಲ್ಲಿ ಒಂದು ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಸದನದ ಕಲಾಪಗಳನ್ನು ಪ್ರಚಾರ ಮಾಡುವಂತಹ ಸಂದರ್ಭದಲ್ಲಿ ವ್ಯಾಸಂಗ ಮಾಡಿ ಶ್ರಮ ಪಟ್ಟು ಬಂದು ಜನಗಳಿಗೆ ಪ್ರಯೋಜನವಾಗುವಂತಹ ವಿಷಯವನ್ನು ಪ್ರಸ್ತಾಪ ಮಾಡುವಂತಹ ವಿಷಯಗಳಿಗೆ ಪ್ರಾಧಾನ್ಯತೆ ಸಿಕ್ಕುವಂತಹ ಒಂದು ವ್ಯವಸ್ಥೆ ಬರಲಿ. ಈ ಸದನ ಸಮಾಜದ ಪ್ರತಿಬಿಂಬ. ಎಲ್ಲಾ ರಂಗಗಳಲ್ಲಿ ಯಾವ ರೀತಿ ನಾವು ಡಿ – ಜನರೇಷನ್ ಅನ್ನು ನೋಡುತ್ತಿದ್ದೇವೋ – ಇದಕ್ಕೆ ತಾವೇನು ಹೊರತಲ್ಲ ಏಕೆಂದರೆ ನೀವು ಕೂಡ ಈ ಸಮಾಜದ ಒಂದು ಅಂಗ. ಹಾಗೆ ಹೆಚ್ಚು ಪ್ರೋತ್ಸಾಹ ಒಳ್ಳೆಯ ಜನರಿಗೆ ಸಿಕ್ಕುವುದರಿಂದ ಇನ್ನೂ ಹೆಚ್ಚು 'ಜನ ಉತ್ಸಾಹಿ ತರುಣರು ಎಲ್ಲರೂ ಕೂಡ ಕಲಾಪಗಳಲ್ಲಿ ಭಾಗವಹಿಸುವುದಕ್ಕೆ ತಾವು ಕೂಡ ಪರೋಕ್ಷವಾಗಿ ಪ್ರೋತ್ಸಾಹ ಕೊಟ್ಟಂತಾಗುತ್ತದೆ, ಎಂಬ ಸೂಚನೆಯನ್ನು ಕೊಟ್ಟು ತಮಗೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು:– ಹತ್ತನೇ ವಿಧಾನಸಭೆಯ ಚುನಾವಣೆ ನಡೆದು ಅತಿ ಹೆಚ್ಚಿನ ಸ್ಥಾನ ಪಡೆದಿರುವ ಜನತಾ ದಳ ಸರ್ಕಾರವನ್ನು ರಚಿಸಿರುತ್ತದೆ. ಜನತಾ ದಳದ ನಂತರ ಭಾರತೀಯ ಜನತಾ ಪಕ್ಷ 40 ಸ್ಥಾನಗಳನ್ನು ಪಡೆದು ಎರಡನೇ ಸ್ಥಾನದಲ್ಲಿದೆ. ಭಾರತೀಯ ಜನತಾ ಪಕ್ಷದ ಪ್ರದೇಶ ಅಧ್ಯಕ್ಷರಾದ ಶ್ರೀ. ಕೆ.ಎಸ್. ಈಶ್ವರಪ್ಪನವರು ತಾರೀಖು 11.12.94ರ ಪತ್ರವನ್ನು ವಿಧಾನಸಭಾಧ್ಯಕ್ಷರಿಗೆ ಬರೆಯುವ ಮೂಲಕ ವಿಧಾನಸಭೆಯಲ್ಲಿ ಭಾರತೀಯ ಜನತಾ ಪಕ್ಷ ಹೆಚ್ಚಿನ ಸದಸ್ಯರುಗಳುಳ್ಳ ಎರಡನೇ ದೊಡ್ಡ ಪಕ್ಷವಾಗಿದ್ದು ಹಾಗೂ ಭಾರತೀಯ ಜನತಾ ಪಕ್ಷದ ಸದಸ್ಯರು ಹಾಗೂ ವಿಧಾನಸಭಾ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು ಆ ಪಕ್ಷದ ನಾಯಕರನ್ನಾಗಿ ಚುನಾಯಿಸಿದ್ದು, ಶ್ರೀ ಬಿ.ಎಸ್. ಯಡಿಯೂರಪ್ಪನವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಪರಿಗಣಿಸಬೇಕಾಗಿ ಕೋರಿರುತ್ತಾರೆ. ವಿಧಾನಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ಅರ್ಥ ವಿವರಣೆ ನಿಯಮ 2 (2) ರಲ್ಲಿ 'ವಿರೋಧ ಪಕ್ಷದ ನಾಯಕರು' ಎಂದರೆ ಸರ್ಕಾರವನ್ನು ರಚಿಸಿರುವ ಪಕ್ಷವಲ್ಲದ ಹೆಚ್ಚಿನ ಸಂಖ್ಯೆಯ ಸದಸ್ಯರನ್ನು ಹೊಂದಿರುವ ಮತ್ತು ನಿರ್ದಿಷ್ಟಪಡಿಸಲಾದ ಸಂಖ್ಯಾಬಲ ಕ್ರಮ ಹೊಂದಿರುವ ಹಾಗೂ ವಿಧಾನ ಸಭಾಧ್ಯಕ್ಷರಿಂದ 'ವಿರೋಧ ಪಕ್ಷದ ನಾಯಕ'ರೆಂದು ಮಾನ್ಯತೆ ಪಡೆದ ವಿರೋಧ ಪಕ್ಷದ ನಾಯಕರೆಂದು ಹೇಳಲಾಗಿದೆ. ಈಗ ಜನತಾ ದಳ ಪಕ್ಷ ಸರ್ಕಾರ ರಚಿಸಿದ್ದು ಭಾರತೀಯ ಜನತಾ ಪಕ್ಷವು 40 ಸದಸ್ಯರನ್ನು ಹೊಂದಿದ್ದು ಎರಡನೇ ಸ್ಥಾನದಲ್ಲಿರುವ ಕಾರಣ ಹಾಗೂ ವಿಧಾನಮಂಡಲದ ಕಾರ್ಯ ವಿಧಾನ ಹಾಗೂ ನಡವಳಿಕೆಯ ಅರ್ಥ ವಿವರಣೆ ನಿಯಮ 2(2)ರಲ್ಲಿ ಹೇಳಿರುವ ರೀತ್ಯ